ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬೆಂಗಳೂರು
ಭಾನುವಾರ, 24 ಮೇ 2026
ಸಂಪುಟ 33, ಸಂಚಿಕೆ 203, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital



ವಿಶ್ವದ ಬೃಹತ್ ಶಸ್ತ್ರಾಸ್ತ್ರ ರಫ್ತುದಾರ ಭಾರತ ಶೀಘ್ರ: ರಾಜನಾಥ್ ಸಿಂಗ್

|೧೦

ಯುದ್ಧದ ತಂತ್ರಗಳಲ್ಲಿ ವೇಗದ ಬದಲಾವಣೆ: ಸಿಡಿಎಸ್



|೧೦

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ:ಪೂರ್ವೆ

ದಿನದ ಮಾತು

ಜಾಣ ಮಾತನ್ನು ಪ್ರಶಂಸಿಸಿ, ಸಜ್ಜನರೊಂದಿಗೆ ಮಾತಾಡಬೇಕೇ ಹೊರತು, ಅಜ್ಞರೊಂದಿಗೆ ಮಾತಾಡುವುದಲ್ಲ.

▲ಚೂಡಾರತ್ನ ಶತಕ

ಸ್ಕೀನನು ಕೊಂಡೀರಾ

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ನಿತಿನ್ ನವೀನ್ ಭೇಟಿ: ಬಿಜೆಪಿಯಲ್ಲಿ ಉತ್ಸಾಹ

• **ಬೆಂಗಳೂರು:** ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ ಇದೇ ಮೊದಲ ಬಾರಿಗೆ ನಿತಿನ್ ನವೀನ್ ಬೆಂಗಳೂರಿಗೆ ಆಗಮಿಸಿದ್ದಾರೆ. ಇದು ಪಕ್ಷದಲ್ಲಿ ಉತ್ಸಾಹಕ್ಕೆ ಕಾರಣವಾಗಿದೆ. ರಾಷ್ಟ್ರೀಯ ಅಧ್ಯಕ್ಷರ ಮಾರ್ಗದರ್ಶನದಲ್ಲಿ ಪಕ್ಷ ಸಂಘಟನೆ ಇನ್ನಷ್ಟು ಬಲವಾಗಲಿದೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ನಿತಿನ್ ನವೀನ್ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ-ಉಸ್ತುವಾರಿ ಸುಧಾಕರ್ ರೆಡ್ಡಿ ಮುಂತಾದವರು ಸ್ವಾಗತಿಸಿದರು.

• ಪುಟ ೮

ಬಿಸಿಗಾಳಿಗೆ ಆಂಧ್ರದಲ್ಲಿ ಒಂದೇ ದಿನ 21 ಸಾವು

• **ಅಮರಾವತಿ:** ಆಂಧ್ರಪ್ರದೇಶದಲ್ಲಿ ಮುಂದುವರಿದಿರುವ ತೀವ್ರ ಬಿಸಿಗಾಳಿ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ್ದು, ಹೆಚ್ಚಿದ ತಾಪಮಾನಕ್ಕೆ ಒಂದೇ ದಿನ 21 ಮಂದಿ ಮೃತಪಟ್ಟಿರುವ ಘಟನೆ ಆತಂಕ ಮೂಡಿಸಿದೆ. ಇನ್ನು ಆಂಧ್ರದ ನೆರೆ ರಾಜ್ಯ ತೆಲಂಗಾಣದಲ್ಲಿ ಬಿಸಿಲಿನ ತಾಪಕ್ಕೆ 16 ಜನ ಮೃತಪಟ್ಟಿದ್ದಾರೆ.

• ಪುಟ ೧೦

ಚೀನಾದ ಗಣಿ ಸ್ಫೋಟ, 90 ಕಾರ್ಮಿಕರ ಸಾವು

• ಪುಟ ೧೦

ಕೈ ಮುಖಂಡ ಅಜಯ್ ರೈ ವಿರುದ್ಧ ಬಿಜೆಪಿ ಕಿಡಿ

• ಪುಟ ೧೦

ಆನೇಕಲ್‌ನ ಇಂಡ್ಲವಾಡಿಯಲ್ಲಿ ದೇಶದ ಎರಡನೇ ಬೃಹತ್ ಕ್ರಿಕೆಟ್ ಕ್ರೀಡಾಂಗಣಕ್ಕೆ ಶಂಕು | 2 ವರ್ಷದಲ್ಲಿ ಪೂರ್ಣ: ಸಿಎಂ ಸಿದ್ದರಾಮಯ್ಯ

ಚಿನ್ನಸ್ವಾಮಿಗೆ ಪರ್ಯಾಯ



ಬೃಹತ್ ಕ್ರಿಕೆಟ್ ಕ್ರೀಡಾಂಗಣಕ್ಕೆ ಶನಿವಾರ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಕ್ರಿಕೆಟ್ ಆಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ.



ಸೂರ್ಯಸಿಟಿ ಮತ್ತು ಸೂರ್ಯ ಡಿವೈನ್, ವಸತಿ ಸಮುಚ್ಚಯಗಳಿಗೆ ಹಾಗೂ ವಸತಿ ಯೋಜನೆಗೆ ಭೂಮಿ ನೀಡಿದ ಭೂಮಾಲೀಕರಿಗೆ ಸಾಂಕೇತಿಕ ನಿವೇಶನ ಹಂಚಿಕೆ ಪತ್ರ ವಿತರಿಸಿದ ಸಿದ್ದರಾಮಯ್ಯ. ಜತೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಜಮೀರ್ ಅಹಮದ್ ಖಾನ್ ಮೊದಲಾದವರಿದ್ದರು.

• **ಆನೇಕಲ್:** ಕ್ರೀಡೆ ಹಾಗೂ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ. ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ಬೃಹತ್ ಕ್ರಿಕೆಟ್ ಕ್ರೀಡಾಂಗಣ ಇರಲಿಲ್ಲ. ಹೀಗಾಗಿ ಆನೇಕಲ್ ತಾಲೂಕಿನ ಇಂಡ್ಲವಾಡಿ ಸೂರ್ಯನಗರದ 4ನೇ ಹಂತದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ತಾಲೂಕಿನ ಸೂರ್ಯನಗರದ ನಾಲ್ಕನೇ ಹಂತದ ಇಂಡ್ಲವಾಡಿ ಬಳಿ 80 ಸಾವಿರ ಆಸನಗಳ ಸಾಮರ್ಥ್ಯವಿರುವ 945 ಕೋಟಿ ರೂಪಾಯಿ ವೆಚ್ಚದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಭೂಮಿ ಪೂಜೆ, ಮುಖ್ಯಮಂತ್ರಿಗಳ ನಮ್ಮ ಮನೆ, ಸೂರ್ಯಸಿಟಿ ಮತ್ತು ಸೂರ್ಯ ಡಿವೈನ್, ವಸತಿ ಸಮುಚ್ಚಯಗಳಿಗೆ ಹಾಗೂ ವಸತಿ ಯೋಜನೆಗೆ ಭೂಮಿ ನೀಡಿದ ಭೂಮಾಲೀಕರಿಗೆ ಸಾಂಕೇತಿಕ ನಿವೇಶನ ಹಂಚಿಕೆ ಪತ್ರ ನೀಡಿಕೆ ಸೇರಿದಂತೆ ಹಲವು ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ದುರಂತದಲ್ಲಿ ಅನೇಕ ಸಾವು ನೋವು ಉಂಟಾಯಿತು. ಈ ಹಿನ್ನೆಲೆಯಲ್ಲಿ 80 ಸಾವಿರ ಆಸನ ಸಾಮರ್ಥ್ಯವಿರುವ ದೇಶದ ಎರಡನೇ ದೊಡ್ಡ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸಲು ಉದ್ದೇಶಿಸಲಾಯಿತು.

➡ ಪುಟ ೪

- ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿರ್ಮಾಣ
- ಸುಮಾರು 75 ಎಕರೆ ಜಾಗದಲ್ಲಿ ಕ್ರೀಡಾಂಗಣ
- 945 ಕೋಟಿ ರೂ. ವೆಚ್ಚದಲ್ಲಿ ಸ್ಟೇಡಿಯಂ
- 80 ಸಾವಿರ ಆಸನಗಳ ಸಾಮರ್ಥ್ಯ

ಶಾಲೆ ನಿರ್ಮಾಣಕ್ಕೆ 10 ಎಕರೆ: ಜಮೀರ್

ಸೂರ್ಯನಗರ ನಾಲ್ಕನೇ ಹಂತಕ್ಕೆ ಸುಮಾರು 3974 ಎಕರೆ ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ರೈತರು ಯಾವುದೇ ತೊಂದರೆ ನೀಡದೆ ಸಹಕಾರ ನೀಡಿದ್ದಾರೆ. ಅಂತಾರಾಷ್ಟ್ರೀಯ ಕ್ರೀಡಾಂಗಣವಲ್ಲದೆ ಶಾಲೆ ನಿರ್ಮಾಣಕ್ಕೆ 10 ಎಕರೆ ಜಾಗ ಮೀಸಲಿಡಲಾಗುವುದು ಎಂದು ವಸತಿ ಸಚಿವ ಜಮೀರ್ ಅಹಮದ್ ಹೇಳಿದರು.

➡ ಪುಟ ೪

2 ಸಾವಿರ ಕೋಟಿ ವೆಚ್ಚದಲ್ಲಿ ಕ್ರೀಡಾನಗರ: ಡಿಕೆಶಿ

ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣಕ್ಕೆ ಮಾಜಿ ಸಂಸದ ಡಿ.ಕೆ.ಸುರೇಶ್ ಹಾಗೂ ಶಾಸಕ ಬಿ.ಶಿವಣ್ಣ ಅವರ ಒತ್ತಾಸೆಯೇ ಕಾರಣವಾಗಿದೆ. ಹೀಗಾಗಿ ಸುಮಾರು ಎರಡು ಸಾವಿರ ಕೋಟಿ ರೂ. ವೆಚ್ಚದಲ್ಲಿ ಕ್ರೀಡಾನಗರ ನಿರ್ಮಿಸಲು ಸಾಧ್ಯವಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು. ಸೂರ್ಯನಗರದ 4ನೇ ಹಂತಕ್ಕೆ ಕಾವೇರಿ ನೀರು ಮತ್ತು ಮೆಟ್ರೋ ಸೇರಿದಂತೆ ಇನ್ನು ಹೆಚ್ಚು ಸೌಕರ್ಯಗಳನ್ನು ಒದಗಿಸಲಾಗುವುದು.

➡ ಪುಟ ೪

ಶ್ವೇತಭವನಕ್ಕೆ ಮೋದಿ ಆಹ್ವಾನಿಸಿದ ಟ್ರಂಪ್

ಅಮೆರಿಕ-ಭಾರತ ಬಂಧ ವೃದ್ಧಿ ಯತ್ನ

- ಮೋದಿ-ಅಮೆರಿಕ ವಿದೇಶಾಂಗ ಕಾರ್ಯದರ್ಶಿ ರೂಬಿಯೊ ಭೇಟಿ
- ಪಶ್ಚಿಮ ಏಷ್ಯಾ ಬಿಕ್ಕಟ್ಟು, ರಕ್ಷಣಾ ಸಹಕಾರ, ವ್ಯಾಪಾರ ಚರ್ಚೆ



• **ಹೊಸದಿಲ್ಲಿ:** ಭಾರತ ಮತ್ತು ಅಮೆರಿಕ ಜಾಗತಿಕ ಹಿತಾಸಕ್ತಿಗಾಗಿ ಇನ್ನಷ್ಟು ಸಮನ್ವಯದಿಂದ ಕಾರ್ಯನಿರ್ವಹಿಸಲಿವೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ, ಶನಿವಾರ ಪ್ರಧಾನಿ ಮೋದಿಯನ್ನು ಭೇಟಿ ಮಾಡಿ ಪಶ್ಚಿಮ ಏಷ್ಯಾ ಬಿಕ್ಕಟ್ಟು, ರಕ್ಷಣಾ ಸಹಕಾರ, ತಂತ್ರಜ್ಞಾನ, ವ್ಯಾಪಾರ ಮತ್ತು ಇಂಧನ ಭದ್ರತೆ ಕುರಿತು ವಿಸ್ತೃತ ಮಾತುಕತೆ ನಡೆಸಿದರು.



ಭಾರತ ಪ್ರವಾಸಕ್ಕೆ ಬಂದಿರುವ ರೂಬಿಯೊ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪರವಾಗಿ ಪ್ರಧಾನಿ ಮೋದಿಗೆ ಶೀಘ್ರದಲ್ಲೇ ವೈಟ್‌ಹೌಸ್‌ಗೆ ಭೇಟಿ ನೀಡುವಂತೆ ಆಹ್ವಾನ ನೀಡಿದ್ದಾರೆ ಎಂದು ಅಮೆರಿಕ ರಾಯಭಾರಿ ಸರ್ಜಿಯೋ ಗಾರ್ ತಿಳಿಸಿದ್ದಾರೆ.

ಭೇಟಿಯ ಬಳಿಕ ಸಾಮಾಜಿಕ ಜಾಲ ತಾಣದಲ್ಲಿ ಪ್ರತಿಕ್ರಿಯಿಸಿದ ಮೋದಿ, 'ಭಾರತ-ಅಮೆರಿಕ ಸಮಗ್ರ ಜಾಗತಿಕ ತಂತ್ರಾತ್ಮಕ ಸಹಭಾಗಿತ್ವದ ನಿರಂತರ ಪ್ರಗತಿ ಹಾಗೂ ಪ್ರಾದೇಶಿಕ ಮತ್ತು ಜಾಗತಿಕ ಶಾಂತಿ-ಭದ್ರತೆ ವಿಚಾರಗಳ ಬಗ್ಗೆ ಚರ್ಚೆ ನಡೆಸಿದೆವು' ಎಂದು ತಿಳಿಸಿದ್ದಾರೆ.

➡ ಪುಟ ೪

ಪಶ್ಚಿಮ ಏಷ್ಯಾ ಸ್ಥಿತಿ ಕುರಿತು ಚರ್ಚೆ

ಪಶ್ಚಿಮ ಏಷ್ಯಾದ ಇತ್ತೀಚಿನ ಬೆಳವಣಿಗೆಗಳ ಕುರಿತು ರೂಬಿಯೊ, ಪ್ರಧಾನಿ ಮೋದಿ ಅವರಿಗೆ ಅಮೆರಿಕದ ನಿಲುವು ವಿವರಿಸಿದ್ದಾರೆ. ಈ ವೇಳೆ ಶಾಂತಿ ಮತ್ತು ರಾಜತಾಂತ್ರಿಕ ಮಾತುಕತೆಯ ಮೂಲಕ ಸಮಸ್ಯೆಗಳನ್ನು ಬಗೆಹರಿಸಬೇಕೆಂಬ ಭಾರತದ ನಿಲುವನ್ನು ಮೋದಿ ಪುನರುಚ್ಚರಿಸಿದರು.

➡ ಪುಟ ೪

ಸಂಬಂಧ ಸುಧಾರಣೆಗೆ ಹೊಸ ಪ್ರಯತ್ನ

ಕಳೆದ ವರ್ಷ ಅಮೆರಿಕ ಭಾರತ ಮೇಲಿನ ಹೆಚ್ಚುವರಿ ಸುಂಕ ಕ್ರಮ ಹಾಗೂ ಭಾರತ-ಪಾಕಿಸ್ತಾನ ಉದ್ವಿಗ್ನತೆ ವಿಚಾರದಲ್ಲಿ ಟ್ರಂಪ್ ನೀಡಿದ್ದ ಹೇಳಿಕೆಗಳಿಂದ ಉಭಯ ರಾಷ್ಟ್ರಗಳ ಸಂಬಂಧದಲ್ಲಿ ಕೆಲ ಮಟ್ಟಿನ ತಣ್ಣನೆ ಉಂಟಾಗಿತ್ತು. ಆದರೆ ಇತ್ತೀಚಿನ ತಿಂಗಳುಗಳಲ್ಲಿ ಸಂಬಂಧ ಪುನಃ ಬಲಪಡಿಸಲು ಎರಡೂ ರಾಷ್ಟ್ರಗಳು ಪ್ರಯತ್ನ ನಡೆಸುತ್ತಿವೆ. ಶೀಘ್ರದಲ್ಲೇ ಪರಸ್ಪರ ಲಾಭದಾಯಕ ವ್ಯಾಪಾರ ಒಪ್ಪಂದ ಅಂತಿಮಗೊಳಿಸುವ ದಿಸೆಯಲ್ಲಿ ಚರ್ಚೆಗಳು ನಡೆಯುತ್ತಿವೆ.

ಮಿಷನ್ 500 ಗುರಿಗೆ ವೇಗ

• ಪುಟ ೪

ಶೇ.60 ಏರಿಕೆ | ವೇತನ ಹೆಚ್ಚಿಸಿದ 3ನೇ ರಾಜ್ಯ ಕರ್ನಾಟಕ

ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳ

• **ಬೆಂಗಳೂರು:** ಕಾರ್ಮಿಕರ ಕನಿಷ್ಠ ವೇತನವನ್ನು ಸರಾಸರಿ ಶೇ.60ರಷ್ಟು ಏರಿಕೆ ಮಾಡಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಈ ಅಧಿಸೂಚನೆಯು ರಾಜ್ಯದ ಅಸಂಘಟಿತ ಮತ್ತು ನಿರ್ದಿಷ್ಟ ವಲಯಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ



ಆರ್ಥಿಕ ಸೌಲಭ್ಯ ಒದಗಿಸಲಿದೆ. ಸುಪ್ರೀಂಕೋರ್ಟ್ ನಿರ್ದೇಶನದ ದನ್ವಯ ಈ ವೇತನ ಪರಿಷ್ಕರಣೆ ಮಾಡಲಾಗಿದೆ.

ಇದೇ ಮೊದಲ ಬಾರಿಗೆ ಎಲ್ಲಾ ನಿಗದಿತ ಉದ್ಯೋಗಗಳನ್ನು ಒಂದೇ ಅಧಿಸೂಚನೆಯಲ್ಲಿ ತರಲಾಗಿದೆ. ಈ ಹಿಂದೆ ಇದ್ದ ನಾಲ್ಕು ವಲಯಗಳ ವರ್ಗೀಕರಣವನ್ನು ಮೂರು ವಲಯಗಳಿಗೆ ಪರಿಷ್ಕರಿಸಲಾಗಿದೆ. ಈ ಮೂಲಕ ರಾಜ್ಯದ ಕೋಟ್ಯಂತರ ಕಾರ್ಮಿಕರಿಗೆ ಸರ್ಕಾರ, ಕಾರ್ಮಿಕ ಇಲಾಖೆಯ ಮೂಲಕ ಭರ್ಜರಿ ಕೊಡುಗೆ ನೀಡಿದೆ.

➡ ಪುಟ ೪

ಏರಿಕೆ ಲೆಕ್ಕಾಚಾರ ಹೇಗೆ?

ವಲಯ 3 ರಲ್ಲಿನ ಕೌಶಲರಹಿತ ಕಾರ್ಮಿಕರಿಗೆ 19,300 ರೂ.ರಿಂದ ವಲಯ 1ರಲ್ಲಿ ಹೆಚ್ಚು ಕೌಶಲಪೂರ್ಣ ಕಾರ್ಮಿಕರಿಗೆ 31,100 ರೂ.ರವರೆಗೆ ಏರಿಕೆ ಮಾಡಲಾಗಿದೆ. ಎರಡು ವರ್ಷಗಳ 1,030 ರೂ. ಮೊತ್ತದ ವಿಡಿಎಯನ್ನು (ಹಣದುಬ್ಬರಕ್ಕೆ ಅನುಗುಣವಾಗಿ ಭತ್ಯೆ) ಕನಿಷ್ಠ ವೇತನದಲ್ಲಿ ಸೇರಿಸಲಾಗಿದೆ. ಕನಿಷ್ಠ ವೇತನ ಲೆಕ್ಕಾಚಾರ ಮಾಡಲು ರಾಜ್ಯವನ್ನು ಮೂರು ವಲಯಗಳಾಗಿ ವರ್ಗೀಕರಿಸಲಾಗಿದೆ. ಗ್ರೇಟರ್ ಬೆಂಗಳೂರು ಪ್ರದೇಶವು ವಲಯ 1ರ ಅಡಿಯಲ್ಲಿ ಬರಲಿದೆ. ವಲಯ 2ರಲ್ಲಿ ಜಿಲ್ಲಾ ಕೇಂದ್ರಗಳು ಬರಲಿವೆ ಮತ್ತು ಉಳಿದ ಪ್ರದೇಶಗಳು ವಲಯ 3ರ ಅಡಿಯಲ್ಲಿ ವರ್ಗೀಕರಿಸಲಾಗಿದೆ.

51 ಸಾವಿರಕ್ಕೂ ಅಧಿಕ ನೇಮಕ ಪತ್ರ ವಿತರಿಸಿದ ಪ್ರಧಾನಿ ಮೋದಿ

ಭಾರತದ ಯುವಶಕ್ತಿಗೆ ಉದ್ಯೋಗ

• **ಹೊಸದಿಲ್ಲಿ:** ದೇಶದ ಯುವಶಕ್ತಿಗೆ ಪೂರಕವಾಗಲೆಂದೇ ಅಂತಾರಾಷ್ಟ್ರೀಯ ಪಾಲುದಾರಿಕೆಗಳನ್ನು ಉದ್ದೇಶಪೂರ್ವಕವಾಗಿ ಸೃಷ್ಟಿಸಲಾಗಿದೆ. ಭಾರತದ ಯುವಶಕ್ತಿಗೆ ಉದ್ಯೋಗ ದೊರೆಯಬೇಕು ಮತ್ತು ನಮ್ಮ ಯುವಕರು ಜಾಗತಿಕವಾಗಿ ಗುರುತಿಸಲ್ಪಡಬೇಕೆಂಬುದು ಪಾಲುದಾರಿಕೆಗಳ ಹಿಂದಿನ ನೈಜ ಆಶಯ. ಅದೆಷ್ಟೋ ರಾಷ್ಟ್ರಗಳನ್ನು ಪ್ರತಿನಿಧಿಸುವ ಜಾಗತಿಕ ಸಂಸ್ಥೆಗಳ ನಾಯಕರು ಭಾರತದ ಯುವಶಕ್ತಿ ಸಾಮರ್ಥ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಮತ್ತು ರಾಷ್ಟ್ರದ ತಾಂತ್ರಿಕ ಮುನ್ನಡೆಯನ್ನು ಕೊಂಡಾಡಿದ್ದಾರೆ. ಜಗತ್ತು ಭಾರತದ ಅಭಿವೃದ್ಧಿ ಯಾನದ ಭಾಗವಾಗಲು ಆಶಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಇಡೀ ಜಗತ್ತು ಭಾರತದ ಯುವಶಕ್ತಿಯ ಪ್ರತಿಭೆ- ಸಾಮರ್ಥ್ಯಗಳನ್ನು ಕೊಂಡಾಡುತ್ತಿರುವುದು ಪಂಚ ರಾಷ್ಟ್ರಗಳಿಗೆ ಪ್ರವಾಸ ಸಂದರ್ಭ ತನ್ನ ಗಮನಕ್ಕೆ ಬಂತು ಎಂದು ಪ್ರಧಾನಿ ಮೋದಿ ಹೆಮ್ಮೆ ವ್ಯಕ್ತಪಡಿಸಿದರು.

➡ ಪುಟ ೪



ಮಂಗಳೂರಲ್ಲಿ 4 ಸಭಾಭವನ ಏಕಕಾಲಕ್ಕೆ ಲೋಕಾರ್ಪಣೆ | ಪಾಲೆಮಾರ್ ಮಾಹಿತಿ

ಸಭಾಭವನ ಲಾಭಾಂಶ ಶಿಕ್ಷಣಕ್ಕೆ ವಿನಿಯೋಗ

• **ಮಂಗಳೂರು:** ಕರಾವಳಿಯ ಹೆಮ್ಮೆಯ ಹಾಗೂ ಅತ್ಯಂತ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಸಂಸ್ಥೆಯಾದ ಲ್ಯಾಂಡ್ ಲಿಂಕ್ಸ್, ಕರಾವಳಿ ಭಾಗದಲ್ಲಿ ಕಳೆದ 45 ವರ್ಷಗಳಿಂದ ತನ್ನ ಪ್ರಾಮಾಣಿಕ ಮತ್ತು ಯಶಸ್ವಿ ಉದ್ಯಮದ ಮೂಲಕ ಲಕ್ಷಾಂತರ ಜನರ ನಂಬಿಕೆಯನ್ನು ಗಳಿಸಿದೆ. ಇದರ ಸವಿನೆನಪಿಗಾಗಿ ಭವ್ಯವಾದ ನಾಲ್ಕು ಸಭಾಭವನಗಳನ್ನು ಸಮಾಜಕ್ಕೆ ಲೋಕಾರ್ಪಣೆ ಮಾಡಲಾಗಿದೆ. ಇದರಿಂದ ಬರುವ ಲಾಭಾಂಶವನ್ನು ವಿದ್ಯಾರ್ಥಿಗಳ ಶಿಕ್ಷಣಕ್ಕೆ ವಿನಿಯೋಗಿಸಲು ಚಿಂತನೆ ನಡೆಸಲಾಗಿದೆ ಎಂದು ಲ್ಯಾಂಡ್ ಲಿಂಕ್ಸ್ ಸಂಸ್ಥೆಯ ರೂವಾರಿ, ಮಾಜಿ ಸಚಿವ ಕೃಷ್ಣ ಜೆ. ಪಾಲೆಮಾರ್ ಹೇಳಿದರು.

ಮಂಗಳೂರಿನ ಪ್ರಮುಖ ನಾಲ್ಕು ಸ್ಥಳಗಳಲ್ಲಿ ಪ್ರಪ್ರಥಮ ಬಾರಿಗೆ ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡ, ನಾಡಿನ ಜನತೆಗೆ ಯೋಗ್ಯವಾದ 4 ಭವ್ಯ ಸಭಾಭವನಗಳನ್ನು ಶನಿವಾರ ಏಕಕಾಲದಲ್ಲಿ ಲೋಕಾರ್ಪಣೆ ಮಾಡಲಾಗಿದ್ದು, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

➡ ಪುಟ ೪



ಮನರೇಗಾಗೆ ಅಧಿಕೃತ ವಿದಾಯ | ಡಿಬಿಟಿ ಮೂಲಕವೇ ವೇತನ ಪಾವತಿ

ವಿಬಿ-ಜಿ ರಾಮ್‌ಜಿ ಜು.1ರಿಂದ ಜಾರಿ

• **ಹೊಸದಿಲ್ಲಿ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ (ಎಂಜಿಎನ್‌ಆರ್‌ಇಜಿಎ) ಬದಲಾಗಿ ಜಾರಿಯಾಗಲಿರುವ ವಿಕಸಿತ ಭಾರತ-ಗ್ರಾಮೀಣ ಉದ್ಯೋಗ ಮತ್ತು ಜೀವನೋಪಾಯ ಮಿಷನ್ (ವಿಬಿ-ಜಿ ರಾಮ್ ಜಿ) ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಶನಿವಾರ ಕರಡು ನಿಯಮಾವಳಿ ಪ್ರಕಟಿಸಿದೆ. ಜು.1ರಿಂದ ದೇಶಾದ್ಯಂತ ಹೊಸ ಯೋಜನೆ ಜಾರಿಗೆ ಬರಲಿದ್ದು, ಅಂತಿಮ ಅನುಮೋದನೆಗೂ ಮುನ್ನ ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನಿಸಲಾಗಿದೆ.

2025ರ ಕಾಯ್ದೆಯ ಸೆಕ್ಷನ್ 33 ಸೇರಿದಂತೆ ವಿವಿಧ ವಿಧಿಗಳಲ್ಲಿ ಈ ಕರಡು ನಿಯಮಗಳನ್ನು ರೂಪಿಸಲಾಗಿದ್ದು, ರಾಜ್ಯಗಳು, ತಜ್ಞರು, ಕಾರ್ಮಿಕ ಸಂಘಟನೆಗಳು ಹಾಗೂ ನಾಗರಿಕ ಸಮಾಜ ಸಂಸ್ಥೆಗಳೊಂದಿಗೆ ವ್ಯಾಪಕ ಚರ್ಚೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

➡ ಪುಟ ೪



- ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಹೊಸ ರೂಪ
- ಮನರೇಗಾಗೆ ಬದಲಾಗಿ ಹೊಸ ಯೋಜನೆ
- ಉದ್ಯೋಗ ಖಾತರಿ 100 ದಿನಗಳಿಂದ 125 ದಿನಕ್ಕೆ ಏರಿಕೆ
- ಗ್ರಾಮಾಭಿವೃದ್ಧಿ ಮತ್ತು ಹವಾಮಾನ ಸಹಿಷ್ಣುತೆಗೆ ಒತ್ತು
- ತಂತ್ರಜ್ಞಾನ ಆಧಾರಿತ ದೂರು ಪರಿಹಾರ

ಸದ್ಯಕ್ಕೆ ಹಳೆಯ ಕಾರ್ಡ್‌ಗಳೇ ಮಾನ್ಯ

ಈ ಯೋಜನೆಯಲ್ಲಿ ಈಗಿನ ಮನರೇಗಾ ಕೆಲಸಗಳು ಮುಂದುವರಿಯಲಿದ್ದು, ಬಾಕಿ ಬಾಧ್ಯತೆಗಳ ನಿರ್ವಹಣೆ, ದಾಖಲೆಗಳ ವರ್ಗಾವಣೆ ಹಾಗೂ ಕಾರ್ಮಿಕರ ಹಕ್ಕುಗಳಿಗೆ ವ್ಯತ್ಯಯ ಉಂಟಾಗದಂತೆ ಕ್ರಮ ಕೈಗೊಳ್ಳಲಾಗುತ್ತದೆ. ಇ-ಕೆವೈಸಿ ದೃಢೀಕೃತ ಹಳೆಯ ಜಾಬ್ ಕಾರ್ಡ್‌ಗಳು ಹೊಸ ಗ್ರಾಮೀಣ ಉದ್ಯೋಗ ಖಾತರಿ ಕಾರ್ಡ್‌ಗಳು ಬಿಡುಗಡೆವರೆಗೆ ತಾತ್ಕಾಲಿಕವಾಗಿ ಮಾನ್ಯವಾಗಲಿವೆ.

➡ ಪುಟ ೪



ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,85,000(2,90,000) ಅಪರಂಜಿ ಚಿನ್ನ: 1,59,060(1,59,490) ಆಭರಣ ಚಿನ್ನ: 1,45,800(1,46,200) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹96.21

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆ | ಶಿಕ್ಷಣ ಸಚಿವರ ವಜಾಗೆ ಆಗ್ರಹ

ಬೆಲೆ ಏರಿಕೆಗೆ ಪ್ರತಿಭಟನೆ

• ಕೋಲಾರ: ಪೆಟ್ರೋಲ್ ಬೆಲೆ ಏರಿಕೆಯನ್ನು ತಕ್ಷಣ ವಾಪಸು ಪಡೆಯಲು ಮತ್ತು ನೀಟ್ ಪರೀಕ್ಷೆಯನ್ನು ಅಸಮರ್ಪಕವಾಗಿ ನಿರ್ವಹಿಸಿ ಪ್ರಶ್ನೆ ಪತ್ರಿಕೆಗಳ ಸೋರಿಕೆಗೆ ಕಾರಣರಾದ ಕೇಂದ್ರ ಶಿಕ್ಷಣ ಸಚಿವರನ್ನು ಸಂಪುಟದಿಂದ ವಜಾ ಮಾಡಲು ಒತ್ತಾಯಿಸಿ ಸಿಪಿಐ(ಎಂ) ಪಕ್ಷದ ತಾಲೂಕು ಸಮಿತಿ ವತಿಯಿಂದ ನಗರದ ಮೆಕ್ಕೆ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ಪಕ್ಷದ ತಾಲೂಕು ಕಾರ್ಯದರ್ಶಿ ಎನ್.ಎನ್.ಶ್ರೀರಾಮ್ ಮಾತನಾಡಿ, ಪಂಚ ರಾಜ್ಯಗಳ ಚುನಾವಣೆಯಲ್ಲಿ ಸಾಕಷ್ಟು ದಾಸ್ತಾನಿದೆ, ಜನ ಗಾಬರಿಗೊಳ್ಳಬೇಡಿ ಎಂದು ಯಾವ ಎಗ್ಗು ಸಿಗ್ಗಿಲ್ಲದೆ ಹೇಳುತ್ತಿದ್ದ ಮೋದಿ ಸರ್ಕಾರ, ಫಲಿತಾಂಶ ಬಂದೊಡನೆಯೇ ಎರಡು ಬಾರಿ ಪೆಟ್ರೋಲ್-ಡೀಸೆಲ್ ದರ ಏರಿಸಿ ಜನರ ಬೆನ್ನು ಮುರಿಯುವ ಕೆಲಸ ಮಾಡಿದೆ. ಇದಕ್ಕಿಂತ ದೊಡ್ಡ ಜನವಿರೋಧಿ ನಡೆ ಬೇರೆ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ನೀಟ್ ಸೇರಿದಂತೆ ಹಲವು ಪ್ರಶ್ನೆ ಪತ್ರಿಕೆಗಳ ಸೋರಿಕೆ ಎಂಬುವುದು ಮಾಮೂಲಿ ಎಂಬಂತಾಗಿದೆ. ಇದಕ್ಕೆ ಕೆಲವು ಶಿಕ್ಷಣ ಸಂಸ್ಥೆಗಳೊಂದಿಗೆ ಬಿಜೆಪಿಯು ಶಾಮೀಲಾಗಿರುವುದು ಕಾರಣವಾಗಿದೆ. ಇದಕ್ಕೆ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರಪ್ರಧಾನ್‌ರವರನ್ನು ವಜಾ ಮಾಡಬೇಕು. ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿದರು.

ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಎಂ.ವಿಜಯಕೃಷ್ಣ ಮಾತನಾಡಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗಾಂಧಿನಗರ ನಾರಾಯಣಸ್ವಾಮಿ, ವಿ.ಗೀತಾ, ಮುಖಂಡರಾದ ಎಂ.ಭೀಮರಾಜ್, ವಿ.ಅಂಬರೀಶ್, ಎಸ್.ಆಶಾ, ಹೊಲ್ಲಂಬಳ್ಳಿ ವೆಂಕಟೇಶಪ್ಪ, ಎಚ್.ಬಿ.ಕೃಷ್ಣಪ್ಪ, ಅಪ್ಪಯ್ಯಣ, ಅಂಜನಮ್ಮ, ಚೆನ್ನಮ್ಮ, ನಾರಾಯಣಪ್ಪ, ಮುನಿರತ್ನಮ್ಮ ಮುಂತಾದವರು ಇದ್ದರು.



ಬಿಜೆಪಿಯಿಂದ ಜನಸಾಮಾನ್ಯರ ಬದುಕಿನ ಮೇಲೆ ಹೊರೆ

ಅನೇಕ ದೇಶಗಳು ತಮ್ಮ ನಾಗರಿಕರ ಹಿತರಕ್ಷಣೆಗಾಗಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ನಿಯಂತ್ರಣ ಕ್ರಮಗಳನ್ನು ಕೈಗೊಂಡಿವೆ. ಆದರೆ ಭಾರತದಲ್ಲಿ ಅಂತಹ ಕ್ರಮ ಕೈಗೊಳ್ಳದೆ, ದುಡಿಯುವ ಜನರ ಮತ್ತು ಜನಸಾಮಾನ್ಯರ ಬದುಕಿನ ಮೇಲೆ ಹೊರೆ ಹೆಚ್ಚಿಸುವುದೇ ಕೇಂದ್ರದ ಬಿ.ಜೆ.ಪಿ ನೇತೃತ್ವದ ಮೋದಿ ಸರ್ಕಾರದ ಉದ್ದೇಶವಾಗಿದೆ. ಜನಹಿತಕ್ಕಿಂತ ಬಿಜೆಪಿಗೆ ಮತ್ತೆ ಮತ್ತೆ ಚುನಾವಣೆ ಗೆಲ್ಲುವುದೇ ಮುಖ್ಯ ಎಂಬುದು ಮತ್ತೊಮ್ಮೆ ರುಜುವಾತಾಗಿದೆ ಎಂದು ಆರೋಪಿಸಿದರು.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಕೊತ್ತೂರು ಮಂಜುನಾಥ್

ಉತ್ತಮ ಶಿಕ್ಷಣ ನೀಡಿ: ಶಾಸಕ

• ಕೋಲಾರ: ವಿದ್ಯಾ ಸಂಸ್ಥೆಗಳು ವ್ಯಾಪಾರ ದೃಷ್ಟಿಯಲ್ಲಿ ಶಿಕ್ಷಣ ನೀಡದೆ, ವಿದ್ಯಾ ದಾನ ಮಾಡುವ ಮೂಲಕ ಸಮಾಜದಲ್ಲಿ ಸುಜ್ಞಾನ ಭರಿತ ವ್ಯಕ್ತಿಗಳನ್ನು ನಿರ್ಮಾಣ ಮಾಡಬೇಕು ಎಂದು ಶಾಸಕ ಕೊತ್ತೂರು ಮಂಜುನಾಥ್ ತಿಳಿಸಿದರು.

ನಗರದ ಮಿಲ್ಲತ್ ನಗರದಲ್ಲಿರುವ ಮಿಲ್ಲತ್ ವೆಲ್ಫೇರ್ ಟ್ರಸ್ಟ್ ವತಿಯಿಂದ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪ್ರತಿಭಾವಂತರನ್ನು ಪುರಸ್ಕರಿಸಿ ಮಾತನಾಡಿದ ಅವರು, ಯಾವುದೇ ವಿದ್ಯಾಸಂಸ್ಥೆಗಳು ಹಣಕ್ಕೆ ಪ್ರಾಮುಖ್ಯತೆ ನೀಡದೆ, ಗುಣಮಟ್ಟ ಶಿಕ್ಷಣವನ್ನು ನೀಡಬೇಕು ಎಂದು ಹೇಳಿದರು.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ಅಲ್ಪಸಂಖ್ಯಾತ ವಿದ್ಯಾರ್ಥಿನಿಯರ ಸಂಖ್ಯೆ ಕಡಿಮೆ ಇದ್ದು, ವಿವಿಗೆ ನಸ್ಸೀರ್ ಅಹ್ಮದ್ ರವರ ಆಯ್ಕೆಯಂತೆ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಿದ ಮೇಲೆ, ಮುಸ್ಲಿಂ ಸಮುದಾಯದ 85ಕ್ಕೂ ಹೆಚ್ಚು ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿರುವುದು ಖುಷಿಯ ಸಂಗತಿ ಎಂದರು. ವಿಧಾನಪರಿಷತ್ ಸದಸ್ಯ ನಜೀರ್ ಅಹ್ಮದ್ ಮಾತನಾಡಿ, ವಿದ್ಯಾರ್ಥಿಗಳು ಓದುವುದಕ್ಕೆ ಗಮನ ನೀಡಿ, ಮೊಬೈಲ್ ಟಿವಿಯಿಂದ ಆದಷ್ಟು ದೂರ ಉಳಿದು, ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡಿ. ನೀವು ಓದಿದಷ್ಟು ನಿಮ್ಮ ಭವಿಷ್ಯ ಉಜ್ವಲವಾಗುತ್ತದೆ ಎಂದು ಕಿವಿಮಾತು ಹೇಳಿದರು.

ಶಿಕ್ಷಣ ಸಂಸ್ಥೆಗಳು ವಿದ್ಯೆ ನೀಡುವ ಜೊತೆಗೆ, ಪಠ್ಯೇತರ ಚಟುವಟಿಕೆಯಲ್ಲೂ ಭಾಗವಹಿಸುವಂತೆ ಪ್ರೋತ್ಸಾಹಿಸಿ, ಅಂಕ ಪಡೆಯುವುದೇ ದೊಡ್ಡದಲ್ಲ, ಜೀವನದಲ್ಲಿ ಒಳ್ಳೆ ಗುಣವನ್ನು ಬೆಳೆಸಿಕೊಳ್ಳಬೇಕು. ಹೆತ್ತ ತಂದೆ ತಾಯಿಗಳನ್ನು ಪ್ರೀತಿಸಿ, ವಯಸ್ಸಾದ ಕಾಲದಲ್ಲಿ ಅವರನ್ನು ಪೋಷಿಸಿ ಎಂದು ಹೇಳಿದರು. ಉತ್ತರ ವಿವಿ ಸಿಂಡಿಕೇಟ್ ಸದಸ್ಯ ಅರ್ಬಾಝ್ ಮನೆಮನೆಗೂ ಹೋಗಿ ಹೆಣ್ಣು ಮಕ್ಕಳನ್ನು ಕಾಲೇಜಿಗೆ ಸೇರಿಸುವಂತೆ ಪ್ರೋತ್ಸಾಹಿಸಿ, ಕೆಲವು ಬಡ ಪೋಷಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಆರ್ಥಿಕ ಸಹಾಯ ಮಾಡಿದ್ದಾರೆ. ಯಾವುದೇ ಕಾರಣಕ್ಕೂ ಮಕ್ಕಳ ವಿದ್ಯಾಭಾಸವನ್ನು ಕಡಿತಗೊಳಿಸದೆ ಅವರು ಎಷ್ಟು ಓದುತ್ತಾರೋ ಓದಿಸಿ ಎಂದು ಪೋಷಕರಿಗೆ ಕಿವಿಮಾತು ಹೇಳಿದರು.

ಎಂ ಎಲ್ ಸಿ ಅನಿಲ್ ಕುಮಾರ್, ನಗರಸಭಾ ಸದಸ್ಯ ಅಂಬರೀಶ್, ಬೆಂಗಳೂರು ಉತ್ತರ ವಿವಿ ಸಿಂಡಿಕೇಟ್ ಸದಸ್ಯ ಸೀಸಂದ್ರ ಗೋಪಾಲಗೌಡ, , ಕುಡಾ ಅಧ್ಯಕ್ಷ ಮಹಮದ್ ಹನೀಫ್, ಮಿಲ್ಲತ್ ವೆಲ್ಫೇರ್ ಟ್ರಸ್ಟ್ ಚೇರ್ ಮ್ಯಾನ್ ಮೀರ್ ನವೀದ್ ಅಹ್ಮದ್, ವೈಸ್ ಚೇರ್ಮನ್ ಸಫೀಕ್ಕೂ ಅಹಮದ್, ಅಧ್ಯಕ್ಷ ಇಷ್ತಿಕಾರ್ ಅಹಮದ್ ಶರೀಫ್, ಉಪನ್ಯಾಸಕರು ವಿದ್ಯಾರ್ಥಿಗಳು ಹಾಗೂ ಪೋಷಕರು ಹಾಜರಿದ್ದರು.



ಕಿರುಸುದ್ದಿ

ವಿವಾಹ ಪ್ರೋತ್ಸಾಹಧನ ಯೋಜನೆಗೆ ಅರ್ಜಿ ಆಹ್ವಾನ

• ರಾಮನಗರ: ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 2026-27ನೇ ಸಾಲಿಗೆ ವಿವಾಹ ಪ್ರೋತ್ಸಾಹಧನ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ. ವಿಶಿಷ್ಟಚೇತನ ವ್ಯಕ್ತಿಗಳನ್ನು ಸಾಮಾನ್ಯ ವ್ಯಕ್ತಿಗಳು ವಿವಾಹವಾದಲ್ಲಿ ಅವರಿಗೆ 50,000 ರೂ.ಗಳ ಪ್ರೋತ್ಸಾಹಧನ ನೀಡಲಾಗುತ್ತದೆ. ಈ ಯೋಜನೆಯಡಿ ಅರ್ಜಿ ಸಲ್ಲಿಸಲು ಅರ್ಜಿದಾರರು ಆಯಾ ತಾಲೂಕಿನ ತಾಲೂಕು ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಂ.ಆರ್. ಡಬ್ಲ್ಯೂಗಳನ್ನು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯು.ಆರ್. ಡಬ್ಲ್ಯೂಗಳು ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿ.ಆರ್.ಡಬ್ಲ್ಯೂ ಇವರನ್ನು ಸಂಪರ್ಕಿಸಿ ಪರಿಪೂರ್ಣ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರು, ರಾಮನಗರ ದೂ. ಸಂಖ್ಯೆ: 9353194416, ಚನ್ನಪಟ್ಟಣ ದೂ.ಸಂಖ್ಯೆ: 8722480154, ಮಾಗಡಿ ದೂ.ಸಂಖ್ಯೆ: 9902303691 ಅಥವಾ ಕನಕಪುರ ಹಾಗೂ ಹಾರೋಹಳ್ಳಿ 9986001574 ಅನ್ನು ಸಂಪರ್ಕಿಸುವಂತೆ ಬೆಂಗಳೂರು ದಕ್ಷಿಣ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಆಹ್ವಾನ

• ಕೋಲಾರ: ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿ ಇರುವ 02 ಅಂಗನವಾಡಿ ಕಾರ್ಯಕರ್ತೆ ಹಾಗೂ 30 ಸಹಾಯಕಿಯರ ಗೌರವ ಸೇವೆಯ ಹುದ್ದೆಗಳಿಗೆ ನೇಮಕ ಮಾಡಲು ಅರ್ಹ ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರಿಂದ ಆಫ್‌ಲೈನ್ ಮೂಲಕ ಮೇ 25 ರಿಂದ ಜೂನ್ 30 ಸಂಜೆ 05.30 ರವರೆಗೆ ಅರ್ಜಿ ಆಹ್ವಾನಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯ ಗೌರವಧನ ಸೇವೆಗೆ ದ್ವಿತೀಯ ಪಿ.ಯು.ಸಿ/ತತ್ಸಮಾನ ಉತ್ತೀರ್ಣ ಹಾಗೂ ಅಂಗನವಾಡಿ ಸಹಾಯಕಿಯರ ಗೌರವಧನ ಸೇವೆಗೆ ಎಸ್.ಎಸ್.ಎಲ್.ಸಿ/ತತ್ಸಮಾನ ಉತ್ತೀರ್ಣಗೊಂಡಿರಬೇಕು. ಹೆಚ್ಚಿನ ಮಾಹಿತಿಗಾಗಿ ಶ್ರೀನಿವಾಸಪುರ ತಾಲ್ಲೂಕಿನ 01ನೇ ಮಹಡಿ, ಹೊಸ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಹಿಂಭಾಗ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯನ್ನು ಸಂಪರ್ಕಿಸಬಹುದೆಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಡಂಬಡಿಕೆ ಪತ್ರ ಹಸ್ತಾಂತರಿಸಿದ ಅಧ್ಯಕ್ಷ

• ಕೋಲಾರ: ಎಲೆಮರೆಯ ಕಾಯಂತೆ ಇರುವಂತಹ ಪ್ರತಿಭೆಗಳನ್ನು ಗುರುತಿಸಿ ಬೆಳಕಿಗೆ ತರುವ, ಅವರನ್ನು ಗೌರವಿಸುವ ಮೂಲಕ ಸಮಾಜ ಮುಖಿಗಳಾಗಿ ರೂಪುಗೊಳಿಸುವ ಕೆಲಸವನ್ನು ಆದಿಮ ಸಾಂಸ್ಕೃತಿ ಕೇಂದ್ರವು ಕಳೆದ 26 ವರ್ಷಗಳಿಂದ ನಿರಂತರವಾಗಿ ಮುಂದುವರೆಸಿಕೊಂಡು ಬರುತ್ತಿರುವುದು ಶ್ಲಾಘನೀಯ ಸಂಗತಿಯಾಗಿದೆ ಎಂದು ಸಾಹಿತಿ ಡಾ.ಎಲ್. ಬಸವರಾಜು ಪ್ರತಿಷ್ಠಾನದ ಅಧ್ಯಕ್ಷ ಲಕ್ಷ್ಮೀನಾರಾಯಣ್ ಅಭಿಪ್ರಾಯಪಟ್ಟರು.

ನಗರದ ಪತ್ರಕರ್ತರ ಭವನದಲ್ಲಿ ಆದಿಮ ಸಾಂಸ್ಕೃತಿಕ ಕೇಂದ್ರದೊಂದಿಗೆ ಡಾ.ಎಲ್. ಬಸವರಾಜು ಪ್ರತಿಷ್ಠಾನ ವತಿಯಿಂದ ಒಡಂಬಡಿಕೆ ಪತ್ರವನ್ನು ಹಸ್ತಾಂತರಿಸಿದ ಅವರು ಮಾತನಾಡಿ, ಕಳೆದ 26 ವರ್ಷಗಳಿಂದ ಡಾ.ಎಲ್ ಬಸವರಾಜು ಪ್ರತಿಷ್ಠಾನದಲ್ಲಿ ಪ್ರತಿವರ್ಷ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಪ್ರತಿವರ್ಷ ಎಲೆಮರೆಯ ಕಾಯಂತೆ ಸಮಾಜ ಸೇವೆ ಸಲ್ಲಿಸುತ್ತಿರುವವರನ್ನು ಗುರುತಿಸಿ ಅವರಿಗೆ ಪ್ರಶಸ್ತಿಯೊಂದಿಗೆ ಗೌರವಿಸುವ ಸಂಪ್ರಾದಾಯವನ್ನು ಪಾಲಿಸಿಕೊಂಡು ಬರಲಾಗುತ್ತಿತ್ತು ಎಂದು ನೆನಪಿಸಿದರು.

ಈ ಪ್ರತಿಷ್ಠಾನದಲ್ಲಿ ನಿವೃತ್ತ ಕನ್ನಡ ಉಪನ್ಯಾಸಕರಾದ ಚಂದ್ರ ಮೋಹನ್, ಚಂದ್ರಶೇಖರ್ ನಂಗಲಿ ಸೇರಿದಂತೆ ಅನೇಕ ಹಿರಿಯರು ಸೇವೆ ಸಲ್ಲಿಸಿದ್ದಾರೆ. ಪ್ರತಿಷ್ಠಾನವತಿಯಿಂದ ಎಲೆಮರೆಯ ಕಾಯಂತಿದ್ದ ಪ್ರತಿಭೆಗಳನ್ನು ಗುರುತಿಸಿ ಸನ್ಮಾನಿಸಿದ ನಂತರ ಸರ್ಕಾರವು ಅವರನ್ನು ಗುರುತಿಸಿ ಸನ್ಮಾನಿಸುತ್ತಿತ್ತು ಎಂದ ಅವರು ಮುಖವೀಣೆ ಆಂಜನಪ್ಪ ಸೇರಿದಂತೆ ಅನೇಕರ ಹೆಸರನ್ನು ಪ್ರಸ್ತಾಪಿಸಿದರು. ನಾನು ನಾಮಾಕವಸ್ತೆಗೆ ಮಾತ್ರ ಅಧ್ಯಕ್ಷನಾಗಿದ್ದು ಎಲ್ಲಾ ಕಾರ್ಯಕ್ರಮಗಳನ್ನು ನಮ್ಮ ಪದಾಧಿಕಾರಿಗಳೇ ಮಾಡುತ್ತಿದ್ದರು. ಎಲ್ಲರೂ ತಮ್ಮದೆ ಆದಾ ವೈಯುಕ್ತಿಕ ಖಾಸಗಿ ಕಾರ್ಯಕ್ರಮಗಳ ಒತ್ತಡದಿಂದಾಗಿ ಕಾರ್ಯಕ್ರಮ ರೂಪಿಸಿ ಮುಂದುವರೆಸಲು ಸಾಧ್ಯವಾಗುತ್ತಿಲ್ಲ ಎಂದರು. ಆದ್ದರಿಂದ ಈ ಸಾಂಸ್ಕೃತಿಕ ಕಾರ್ಯಕ್ರಮಗಳ ನಿರ್ವಹಣೆ ಜವಾಬ್ದಾರಿಯನ್ನು ನೆಲಮೂಲದ ಜನಪ್ರಿಯ ಆದಿಮ ಸಾಂಸ್ಕೃತಿಕ ಕೇಂದ್ರಕ್ಕೆ ಹಸ್ತಾಂತರಿಸಿ ಮುಂದುವರೆಸಿಕೊಂಡು ಹೋಗಲು ಒಡಂಬಡಿಕೆಯ ಪತ್ರವನ್ನು ಮಾಡಿಕೊಂಡು ಹಸ್ತಾಂತರಿಸಲಾಗುತ್ತಿದೆ. ಪ್ರತಿಷ್ಠಾನದಲ್ಲಿರುವ 4.51 ಲಕ್ಷ ರೂ ಗಳಲ್ಲಿ ಪ್ರತಿವರ್ಷ ಒಂದು ಕಾರ್ಯಕ್ರಮ ಮಾಡಲು ವಿಶಾಲಾಕ್ಷಿ ಡಾ.ಎಲ್.ಬಸವರಾಜು ಸಮ್ಮತಿಸಿದ್ದಾರೆ ಎಂದು ತಿಳಿಸಿದರು.



ಆದಿಮ ಸಾಂಸ್ಕೃತಿಕ ಕೇಂದ್ರದ ಅಧ್ಯಕ್ಷ ಎನ್.ಮುನಿಸ್ವಾಮಿ ಮಾತನಾಡಿ, ಡಾ.ಎಲ್. ಬಸವರಾಜು ಪ್ರತಿಷ್ಠಾನ ಮತ್ತು ಆದಿಮ ಸಾಂಸ್ಕೃತಿಕ ಕೇಂದ್ರದ ಪದಾಧಿಕಾರಿಗಳು ಒಂದೇ ದೋಣಿಯ ಪದಾಧಿಕಾರಿಗಳು ಆದಿಮ ಸಾಂಸ್ಕೃತಿಕ ಕೇಂದ್ರದಲ್ಲಿ ಡಾ.ಎಲ್. ಬಸವರಾಜು ಪ್ರತಿಷ್ಠಾನದ ಹೆಸರಿನಲ್ಲಿ ಕಾರ್ಯಕ್ರಮ ನಿರೂಪಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದೆ ಎಂದರು. ಆದಿಮ ಸಾಂಸ್ಕೃತಿಕ ಕೇಂದ್ರದ ಕಾರ್ಯದರ್ಶಿ ಹ.ಮಾ. ರಾಮಚಂದ್ರಪ್ಪ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್. ಕೆ.ಚಂದ್ರಶೇಖರ್ ಮಾತನಾಡಿ ದರು. ಕಾರ್ಯಕ್ರಮದಲ್ಲಿ ಜಿ.ಪಂ.ನಿವೃತ್ತ ಅಧಿಕಾರಿ ಹೇಮರೆಡ್ಡಿ, ಉಪನ್ಯಾಸಕರಾದ ಕಾಳಿದಾಸ, ರಮೇಶ್ ಮುಂತಾದವರು ಉಪಸ್ಥಿತರಿದ್ದರು.

ಪೋಲಿಯೊ ಬಗ್ಗೆ ನಾಗರಿಕರಲ್ಲಿ ಜಾಗೃತಿ

• ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ನಾಗರಿಕರ ಅನುಕೂಲಕ್ಕಾಗಿ ಪಲ್ಸ್ ಪೋಲಿಯೊ ಲಸಿಕಾ ಕೇಂದ್ರಗಳ ಮಾಹಿತಿಯನ್ನು ಸುಲಭವಾಗಿ ಲಭ್ಯವಾಗುವಂತೆ ಒದಗಿಸಲು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದಲ್ಲಿ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನದ ಕುರಿತು ಶನಿವಾರ ವರ್ಚುವಲ್ ಸಭೆಯಲ್ಲಿ ಮಾತನಾಡಿ, ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿರುವ ಲಸಿಕಾ ಬೂತ್‌ಗಳ ಮಾಹಿತಿ ಸಾರ್ವಜನಿಕರಿಗೆ ಸುಲಭವಾಗಿ ದೊರೆಯುವಂತೆ ವ್ಯವಸ್ಥೆ ಮಾಡಬೇಕು. ಜೂನ್ 28ರಿಂದ ಜುಲೈ 1ರ ವರೆಗೆ ನಾಲ್ಕು ದಿನ ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮದ ಅಂಗವಾಗಿ ಎಲ್ಲ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಿ, ಶೇ.100 ಗುರಿ ಸಾಧಿಸಲು ಕ್ರಮ ಕೈಗೊಳ್ಳಬೇಕು ಎಂದಿ ನಿರ್ದೇಶಿಸಿದರು.

ಜಿಬಿಎ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ವೆಂಕಟಾಚಲಪತಿ ಮಾತನಾಡಿ, ನಗರದಾದ್ಯಂತ ಪಲ್ಸ್ ಪೋಲಿಯೊ ಕುರಿತು ನಾಗರಿಕರಲ್ಲಿ ವ್ಯಾಪಕ ಜಾಗೃತಿ ಮೂಡಿಸುವ ಕೆಲಸ ಕೈಗೊಳ್ಳಬೇಕು. ನರ್ಸಿಂಗ್ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು ಹಾಗೂ ಪ್ಯಾರಾ ಮೆಡಿಕಲ್ ಕಾಲೇಜುಗಳ ವಿದ್ಯಾರ್ಥಿಗಳನ್ನು ಸ್ವಯಂಸೇವಕರಾಗಿ ಬಳಸಿಕೊಂಡು, ಎಲ್ಲ ಅರ್ಹ ಮಕ್ಕಳಿಗೂ ಪೋಲಿಯೊ ಹನಿ ತಲುಪುವಂತೆ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.



11.34 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ

ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಐದು ವರ್ಷದೊಳಗಿನ ಒಟ್ಟು 11,34,988 ಮಕ್ಕಳಿಗೆ ಪಲ್ಸ್ ಪೋಲಿಯೊ ಹನಿ ಹಾಕುವ ಗುರಿಯಿದೆ. ಇದಕ್ಕಾಗಿ ನಗರದಾದ್ಯಂತ 3,391 ಸ್ಥಿರ ಬೂತ್‌ಗಳು, 597 ಸಂಚಾರಿ ತಂಡಗಳು ಹಾಗೂ 464 ಮೊಬೈಲ್ ತಂಡಗಳು ಸೇರಿದಂತೆ ಒಟ್ಟು 4,452 ಲಸಿಕಾ ಕೇಂದ್ರಗಳ ಮೂಲಕ ಲಸಿಕೆ ನೀಡಲು ಯೋಜನೆ ರೂಪಿಸಲಾಗಿದೆ ಎಂದು ಮುಖ್ಯ ಆರೋಗ್ಯಾಧಿಕಾರಿ ಮಾಹಿತಿ ನೀಡಿದರು.

ಗಣಿ ಮಾಫಿಯಾ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಜನಾಂದೋಲನ

• ಮಾಲೂರು: ತಾಲೂಕಿನ ಐತಿಹಾಸಿಕ ಪ್ರಸಿದ್ಧ ಟೇಕಲ್ ಹೋಬಳಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಹಾಗೂ ಕಲ್ಲು ಕ್ರಷರ್‌ಗಳ ಹಾವಳಿ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಆಕ್ರೋಶ ವ್ಯಕ್ತವಾಗುತ್ತಿದೆ. ಕಾಕ್ರೋಚ್ ಜನತಾ ಪಾರ್ಟಿ ಮತ್ತು ಟೇಕಲ್ ಹೋಬಳಿ ಯುವ ಒಕ್ಕೂಟದ ಹೆಸರಿನಲ್ಲಿ ಶನಿವಾರ ದಿನಪೂರ್ತಿ ವಿವಿಧ ಪೋಸ್ಟರ್‌ಗಳು ವೈರಲ್ ಆಗಿವೆ.

ಸ್ಥಳೀಯ ನಾಯಕರ ಸ್ವಾರ್ಥಕ್ಕಾಗಿ ಬೆಟ್ಟಗುಡ್ಡಗಳನ್ನು ರಾಸಾಯನಿಕ ಬಳಸಿ ಬ್ಲಾಸ್ಟ್ ಮಾಡಲಾಗುತ್ತಿದ್ದು, ಪರಿಸರ ನಾಶವಾಗುತ್ತಿದೆ ಎಂದು ಪೋಸ್ಟರ್‌ಗಳಲ್ಲಿ ಆರೋಪಿಸಲಾಗಿದೆ. ಇದರಿಂದ ಧೂಳಿನ ಮಾಲಿನ್ಯ ಹೆಚ್ಚಾಗಿ ಸಾರ್ವಜನಿಕರಲ್ಲಿ ಕ್ಯಾನ್ಸರ್ ಭೀತಿ ಮೂಡಿದೆ. ಅಲ್ಲದೆ, ಭೂಗರ್ಭ ಜಲ ಕುಸಿತ ಹಾಗೂ ರೈತರ ಬೆಳೆ ಹಾನಿಯಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಲಾಗಿದೆ.

ಟೇಕಲ್ ವ್ಯಾಪ್ತಿಯಲ್ಲಿ ಸುಮಾರು 30ಕ್ಕೂ ಹೆಚ್ಚು ಕ್ರಷರ್ ಹಾಗೂ 50 ಕ್ವಾರಿಗಳಿದ್ದು, ಇವುಗಳನ್ನು ತಕ್ಷಣವೇ ಬಂದ್ ಮಾಡಬೇಕು ಎಂದು ಶೆಟ್ಟಿಹಳ್ಳಿಯ ಸಾಮಾಜಿಕ ಹೋರಾಟಗಾರ ನವೀನ್ ಕುಮಾರ್ ನೇತೃತ್ವದಲ್ಲಿ ಅಭಿಯಾನ ಆರಂಭವಾಗಿದೆ. ಈ ಹೋರಾಟ ಈಗಾಗಲೇ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಮೆಟ್ಟಿಲೇರಿದ್ದು, ಅಂತಿಮ ಹಂತದಲ್ಲಿದೆ. ಪರಿಸರ ಮತ್ತು ಭವಿಷ್ಯವನ್ನು ಉಳಿಸಲು ಯುವಕರು ಆರಂಭಿಸಿರುವ ಈ ಡಿಜಿಟಲ್ ಅಭಿಯಾನಕ್ಕೆ ಸಾರ್ವಜನಿಕರಿಂದ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದೆ.

ಎಸ್ಸಿ, ಎಸ್ಟಿ ಕುಂದುಕೊರತೆ ಸಭೆ

• ಶ್ರೀರಂಗಪಟ್ಟಣ: ಪಟ್ಟಣದ ಪೊಲೀಸ್ ಠಾಣೆಯ ಆವರಣದಲ್ಲಿ ಉಪವಿಭಾಗದ ಮಟ್ಟದ ಎಸ್ಸಿ,ಎಸ್ಟಿ ಸಮಾಜದ ಮುಖಂಡರೊಂದಿಗೆ ಕುಂದು ಕೊರತೆ ಸಭೆ ನಡೆಯಿತು.

ಸಭೆಯಲ್ಲಿ ತಾಲೂಕಿನ ವಿವಿಧ ಗ್ರಾಮಗಳ ಸಮಾಜದ ಮುಖಂಡರು ಭಾಗವಹಿಸಿ, ತಮ್ಮ ಗ್ರಾಮಗಳಲ್ಲಿನ ಸಮಸ್ಯೆಗಳ ಕುರಿತು ಚರ್ಚೆ ನಡೆಸಿದರು. ಬಡಾವಣೆಗಳಲ್ಲಿನ ನೀರು, ವಿದ್ಯುತ್, ಬಸ್ಸು ಸಮಸ್ಯೆಗಳ ಜತೆ ಅಂಗಡಿಗಳಲ್ಲಿ ಅಕ್ರಮ ಮದ್ಯ ಮಾರಾಟ ತಡೆಗಟ್ಟಲು ಸೇರಿದಂತೆ ಗ್ರಾಮದ ಅಭಿವೃದ್ಧಿ ಕುರಿತು ಸಮಸ್ಯೆಗಳ ತಿಳಿಸಿ ಕೆಲವು ಸಮಸ್ಯೆಗಳ ಬಗ್ಗೆ ದೂರುಗಳ ನೀಡಿದರು. ಬಳಿಕ ಡಿವೈಎಸ್ಪಿ ಕೃಷ್ಣಕುಮಾರ್ ಮಾತನಾಡಿ, ಬಡಾವಣೆ ಹಾಗೂ ಸಂಚಾರ, ಇತರೆ ಸಮಸ್ಯೆಗಳನ್ನು ಪಟ್ಟಿ ಮಾಡಿಕೊಂಡಿದ್ದು, ಸಂಭಂಧಿಸಿದ ಇಲಾಖೆಗಳಿಗೆ ವರದಿ ಮಾಡಿ ಕಳುಹಿಸಿಕೊಡಲಾಗುತ್ತದೆ. ಯಾವುದೇ ಸಮಸ್ಯೆಗಳಿದ್ದರೆ ಖುದ್ದು ನಮ್ಮನ್ನು ಭೇಟಿ ಮಾಡಿ ಚರ್ಚಿಸಿ ಬಗೆ ಹರಿಸಿಕೊಳ್ಳಬೇಕು ಎಂದು ತಿಳಿಸಿದರು.



ಡಿವೈಎಸ್‌ಪಿ ಕೃಷ್ಣ ಕುಮಾರ್ ಯು.ಡಿ ಸಭೆಯ ನೇತೃತ್ವ ವಹಿಸಿದ್ದರು. ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಪೊಲೀಸ್ ವೃತ್ತ ನಿರೀಕ್ಷಕರಾದ ಬಿ.ಜಿ. ಕುಮಾರ್, ವಿವೇಕಾನಂದ, ಆನಂದ್ ಕುಮಾರ್ ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು. ಮುಖಂಡರಾದ ಪುರಸಭಾ ಮಾಜಿ ಸದಸ್ಯ ಶ್ರೀನಿವಾಸ್, ಕುಬೇರಪ್ಪ, ರವಿಚಂದ್ರ, ಪಾಂಡು, ಶೆಟ್ಟಹಳ್ಳಿ ಸುರೇಶ್, ನಗುವನಹಳ್ಳಿ ಮಹದೇವ ಸ್ವಾಮಿ, ಪಾಂಡವಪುರ ಸೋಮಶೇಖರ್ ಅಂಕಯ್ಯ ಹಾಜರಿದ್ದರು.



ನಾಗಮಂಗಲದಲ್ಲಿ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಅಕ್ರಮ ಗೋಮಾಂಸ ಸಾಗಣೆ ಮತ್ತು ಸಾರ್ವಜನಿಕ ಗೋ ಬಲಿ ತಡೆಗಟ್ಟುವಂತೆ ಆಗ್ರಹಿಸಿ ವಿಶ್ವ ಹಿಂದೂ ಪರಿಷತ್ ವತಿಯಿಂದ ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಲಾಯಿತು.

4.26 ಕೋಟಿ ಫಲಾನುಭವಿಗಳಿಗೆ ಆಹಾರ ಭದ್ರತೆ | 'ಹಸಿವು ಮುಕ್ತ ಕರ್ನಾಟಕ'ದ ಕನಸು ನನಸು

ದಾಸೋಹ ಪರಂಪರೆಯ ಆಧುನಿಕ ರೂಪ ಅನ್ನಭಾಗ್ಯ

ಗ್ಯಾರಂಟಿ ವಾರ್ತೆ

ಬೆಂಗಳೂರು: 'ಆಶೆ ಇಚ್ಛೆಗೆನ್ನ ಗಾಸಿ ಮಾಡದಿರಯ್ಯಾ, ದಾಸೋಹಿಯಾಗಿರ್ಪ ದಾಸನಾಗಿರಿಸೆನ್ನ ಕೂಡಲಸಂಗಮದೇವಾ, ನಿಮ್ಮ ಧರ್ಮ'- ಜಗಜ್ಯೋತಿ ಬಸವಣ್ಣನವರ ಈ ಅಮರ ವಚನದ ಸಾಲುಗಳು ಮನುಷ್ಯನಲ್ಲಿರಬೇಕಾದ ಕರುಣೆ ಮತ್ತು ದಾಸೋಹದ ನಿಜವಾದ ಪರಿಕಲ್ಪನೆಯನ್ನು ಎತ್ತಿಹಿಡಿಯುತ್ತವೆ. ಶರಣರ ಈ ಕಲ್ಯಾಣದ ಆಶಯವೇ ಕರ್ನಾಟಕ ಸರ್ಕಾರದ 'ಅನ್ನಭಾಗ್ಯ' ಯೋಜನೆಯಾಗಿ ನಾಡಿನಲ್ಲಿ ಸಾಕಾರಗೊಂಡಿದೆ. 2023ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಪ್ರಕಟಿಸಿದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ 'ಅನ್ನಭಾಗ್ಯ' ಅತ್ಯಂತ ಪ್ರಮುಖ ಹಾಗೂ ತಳಮಟ್ಟದ ಜನರನ್ನು ತಲುಪಿದ ಯೋಜನೆಯಾಗಿ ಯಶಸ್ಸನ್ನೂ ಸಾಧಿಸಿದೆ.

ರಾಜ್ಯದ ಬಡತನ ರೇಖೆಗಿಂತ ಕೆಳಗಿರುವ (BPL) ಮತ್ತು ಅಂತ್ಯೋದಯ ಕಾರ್ಡ್ ಹೊಂದಿರುವ ಕುಟುಂಬಗಳ ಪ್ರತಿಯೊಬ್ಬ ಸದಸ್ಯನಿಗೆ ತಿಂಗಳಿಗೆ ಒಟ್ಟು 10 ಕೆಜಿ ಆಹಾರ ಧಾನ್ಯವನ್ನು ನೀಡುವ ಉದ್ದೇಶದೊಂದಿಗೆ ಈ ಯೋಜನೆಗೆ ಚಾಲನೆ ನೀಡಲಾಗಿತ್ತು, ಕೇಂದ್ರ ಸರ್ಕಾರವು ಬೇಡಿಕೆಯಷ್ಟು ಅಕ್ಕಿಯನ್ನು ಪೂರೈಸಲು ವಿಫಲವಾದಾಗ, ರಾಜ್ಯ ಸರ್ಕಾರವು ಕೈಕಟ್ಟಿ ಕೂರದೆ, ಹೆಚ್ಚುವರಿಯಾಗಿ ಘೋಷಿಸಿದ 5 ಕೆಜಿ ಅಕ್ಕಿಯ ಬದಲಾಗಿ, ಪ್ರತಿ ಕೆಜಿಗೆ 34 ರೂಪಾಯಿಯಂತೆ 2024ರ ಡಿಸೆಂಬರ್‌ವರೆಗೆ ಫಲಾನುಭವಿಗಳ ಬ್ಯಾಂಕ್ ಖಾತೆಗೆ 11,821 ಕೋಟಿ ರೂ. ನೇರವಾಗಿ ನಗದು ವರ್ಗಾವಣೆ (Direct Benefit Transfer - DBT) ಮಾಡುವ ಮೂಲಕ 'ನುಡಿದಂತೆ ನಡೆದ ಸರ್ಕಾರ' ಎಂಬ ಘೋಷವಾಕ್ಯವನ್ನು ಉಳಿಸಿಕೊಂಡಿತ್ತು. ಕಳೆದ ಮೂರು ವರ್ಷಗಳಲ್ಲಿ 4.26 ಕೋಟಿ ಬಡ ಕುಟುಂಬಗಳ ಹಸಿವು ನೀಗಿಸಿರುವ 'ಅನ್ನಭಾಗ್ಯ'ವು, ಮುಖ್ಯಮಂತ್ರಿ ಸಿದ್ದರಾಮಯ್ಯನವರ 'ಹಸಿವು ಮುಕ್ತ ಕರ್ನಾಟಕ'ದ ಕನಸನ್ನು ನನಸಾಗಿಸಿದೆ.



ದಿನಗೂಲಿ ನೌಕರರು, ಆಟೋ ಚಾಲಕರು, ಕೃಷಿ ಕಾರ್ಮಿಕರು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಕುಟುಂಬಗಳಿಗೆ ಅನ್ನಭಾಗ್ಯ ಯೋಜನೆಯಿಂದಾಗಿ ಪ್ರತಿ ತಿಂಗಳು ಆಹಾರಕ್ಕಾಗಿ ವ್ಯಯಿಸುತ್ತಿದ್ದ ಸಾವಿರಾರು ರೂಪಾಯಿಗಳು ಉಳಿತಾಯವಾಗುತ್ತಿವೆ. ಒಂದು ವರ್ಷಗಳವರೆಗೆ ಬ್ಯಾಂಕ್ ಖಾತೆಗೆ ನೇರವಾಗಿ ಜಮೆಯಾದ ನಗದು ಹಣವನ್ನು ಬಡ ಕುಟುಂಬಗಳು ಬೇಳೆಕಾಳು, ಎಣ್ಣೆ, ತರಕಾರಿ ಸೇರಿದಂತೆ ಇನ್ನಿತರ ಪೌಷ್ಟಿಕ ಆಹಾರ ಪದಾರ್ಥಗಳ ಖರೀದಿಗೆ ಹಾಗೂ ಮಕ್ಕಳ ವಿದ್ಯಾಭ್ಯಾಸದ ಖರ್ಚಿಗೆ ಬಳಸಿಕೊಂಡಿದ್ದಾರೆ. ಈ ಯೋಜನೆಯು ರಾಜ್ಯದಲ್ಲಿ ಅಪೌಷ್ಟಿಕತೆಯನ್ನು ನಿವಾರಿಸುವಲ್ಲಿ ಮತ್ತು ಗ್ರಾಮೀಣ ಭಾಗದ ಆರ್ಥಿಕತೆಗೆ ಚೇತರಿಕೆ ನೀಡುವಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದೆ.



ಕೋಟ್ಯಂತರ ಫಲಾನುಭವಿಗಳು: ಸರ್ಕಾರದ ಅಂಕಿ-ಅಂಶಗಳ ಪ್ರಕಾರ, ಅನ್ನಭಾಗ್ಯ ಯೋಜನೆಯಡಿ ರಾಜ್ಯದ 4.26 ಕೋಟಿಗೂ ಅಧಿಕ ಫಲಾನುಭವಿಗಳು ನಿರಂತರವಾಗಿ ಈ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ. 2023- 24ರವರೆಗೆ ಡಿಬಿಟಿಯಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ನೇರವಾಗಿ ಬಡವರ ಖಾತೆಗೆ ವರ್ಗಾಯಿಸುವ ಮೂಲಕ ಪಾರದರ್ಶಕತೆಯನ್ನು ಕಾಯ್ದುಕೊಂಡಿದೆ. ಪಡಿತರ ವಿತರಣಾ ವ್ಯವಸ್ಥೆಯನ್ನು (PDS) ಇನ್ನಷ್ಟು ಬಲಪಡಿಸಲಾಗಿದ್ದು, ಯಾವುದೇ ಸೋರಿಕೆಯಿಲ್ಲದೆ ಅರ್ಹರಿಗೆ ಸೌಲಭ್ಯ ತಲುಪುವಂತೆ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ.

ದೇಶದಲ್ಲೇ ಮಾದರಿ: ಕರ್ನಾಟಕದ 'ಅನ್ನಭಾಗ್ಯ' ಯೋಜನೆಯು ಕೇವಲ ಉಚಿತ ಪಡಿತರ ನೀಡುವುದಕ್ಕೆ ಸೀಮಿತವಾಗಿರದೆ, ಬಡವರ ಆಹಾರದ ಹಕ್ಕನ್ನು ಎತ್ತಿಹಿಡಿದಿದೆ. ದೇಶದ ಯಾವುದೇ ರಾಜ್ಯದಲ್ಲೂ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಉಚಿತ ಆಹಾರ ಧಾನ್ಯ ಮತ್ತು ನಗದು ವರ್ಗಾವಣೆಯ ಸೌಲಭ್ಯವನ್ನು ನೀಡಿದ ಉದಾಹರಣೆಯಿಲ್ಲ. ಕರ್ನಾಟಕದ ಈ ಹಸಿವು ಮುಕ್ತ ಮತ್ತು ಪೌಷ್ಟಿಕ ಭದ್ರತೆಯ ಮಾದರಿಯನ್ನು ಇಂದು ದೇಶದ ಇತರೆ ರಾಜ್ಯಗಳು ಹಾಗೂ ಸಾಮಾಜಿಕ ತಜ್ಞರು ಮುಕ್ತಕಂಠದಿಂದ ಶ್ಲಾಘಿಸುತ್ತಿದ್ದಾರೆ.

'ಇಂದಿರಾ ಕಿಟ್' ಶೀಘ್ರ ಅನುಷ್ಠಾನ

'ಅನ್ನಭಾಗ್ಯ' ಯೋಜನೆಯಡಿ ಹೆಚ್ಚುವರಿ 5 ಕೆ.ಜಿ ಅಕ್ಕಿ ಬದಲಾಗಿ 'ಇಂದಿರಾ' (Integrated Nutrition And Dietary Initiative for Revitalizing Annabhagya Beneficiaries) ಆಹಾರ ಕಿಟ್ ವಿತರಿಸುವ ಕುರಿತು ಈಗಾಗಲೇ ಸಂಪುಟದಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ಯೋಜನೆಯಡಿ ಕುಟುಂಬದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಐದು ಕೆಜಿ ಅಕ್ಕಿ ಬದಲಾಗಿ ತೊಗರಿ ಬೇಳೆ, ಸೂರ್ಯಕಾಂತಿ ಎಣ್ಣೆ, ಸಕ್ಕರೆ, ಉಪ್ಪು ನೀಡಲಾಗುವುದು. ಇದಕ್ಕಾಗಿ ಪ್ರತಿ ತಿಂಗಳು ಒಟ್ಟು 18,628 ಮೆ.ಟನ್ ತೊಗರಿ ಬೇಳೆ ಮತ್ತು ತಲಾ 12,419 ಮೆ.ಟನ್ ಸೂರ್ಯಕಾಂತಿ ಎಣ್ಣೆ,

ಕಿರುಸುದ್ದಿ

ಶ್ರೀ ಗಂಗಮ್ಮದೇವಿಗೆ ವಿಶೇಷ ಪೂಜೆ

• **ತಾವರೆಕೆರೆ:** ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿಯ ಕರಪನಹಳ್ಳಿ ಎಂ.ಹೊಸಹಳ್ಳಿಯ ಪಕ್ಕದಲ್ಲಿರುವ ಮಜ್ಜಿಗೆ ಕುಂಟೆಯ ಚಿಂತಾಮಣಿ ಹೊಸಕೋಟೆ ರಾಜ್ಯ ಹೆದ್ದಾರಿ ಬಳಿ ನೆಲೆಸಿರುವ ಶ್ರೀ ಗಂಗಮ್ಮದೇವಿ ದೇವಾಲಯದಲ್ಲಿ ಶುಭ ಶುಕ್ರವಾರ ಪ್ರಯುಕ್ತ ಭಾರತೀಯ ಸೇವಾ ಸಮಿತಿ ರಾಜ್ಯಾಧ್ಯಕ್ಷ ಡಾ. ಎಂ.ರಾಮಚಂದ್ರ



(ಹೊಡಿಚಿನ್ನಿ) ನೇತೃತ್ವದಲ್ಲಿ ವಿಶೇಷ ಪೂಜೆ ಪೂಜೆ ಹಮ್ಮಿಕೊಂಡಿದ್ದರು. ಪ್ರಧಾನ ಅರ್ಚಕರಾದ ರತ್ನಮ್ಮ ನೇತೃತ್ವದಲ್ಲಿ ಶ್ರೀ ಗಂಗಮ್ಮದೇವಿಗೆ ವಿವಿಧ ಹೂವಿನ ಅಲಂಕಾರದ ಜತೆಗೆ ಅಭಿಷೇಕ ಕುಂಕುಮಾರ್ಚನೆ ಸೇರಿದಂತೆ ಪೂಜಾವಿಧಿ ವಿಧಾನವನ್ನು ನೆರವೇರಿಸಿ ಮಹಾ ಮಂಗಳಾರತಿ ತೀರ್ಥ ಪ್ರಸಾದದೊಂದಿಗೆ'ಅನ್ನಸಂತರ್ಪಣೆ ಸೇವೆಯನ್ನು ಗ್ರಾಮಸ್ಥರು ನೆರವೇರಿಸಿದ್ದರು. ಸುತ್ತಮುತ್ತಲಿನ ಗ್ರಾಮಗಳ ಭಕ್ತರುದೇವಿ ದರ್ಶನ ಪಡೆದ ನಂತರಅನ್ನದಾಸೋಹವನ್ನು ಸ್ವೀಕರಿಸಿ ತೆರಳಿದರು.

ಗೋವುಗಳ ಹತ್ಯೆಗೆ ಕಡಿವಾಣ ಹಾಕಲು ಆಗ್ರಹ



• **ದೊಡ್ಡಬಳ್ಳಾಪುರ:** ಶ್ರೀರಾಮ ಸೇನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ನಡೆಯುತ್ತಿರುವ ಗೋವುಗಳ ಅಕ್ರಮ ಸಾಗಾಟ, ಅನಧಿಕೃತ ಕಸಾಯಿಖಾನೆಗಳು ಹಾಗೂ ಕಾನೂನುಬಾಹಿರ ಗೋಹತ್ಯೆ ತಡೆಗಟ್ಟುವಂತೆ ಆಗ್ರಹಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. ಗೋಮಾತೆಯ ರಕ್ಷಣೆ ಪ್ರತಿಯೊಬ್ಬ ಹಿಂದೂವಿನ ಕರ್ತವ್ಯ. ಕಾನೂನು ಸುವ್ಯವಸ್ಥೆ ಕಾಪಾಡಿ, ಅಕ್ರಮ ಚಟುವಟಿಕೆಯನ್ನು ತಡೆಯುವಂತೆ ಸರ್ಕಾರ ಮತ್ತು ಅಧಿಕಾರಿಗಳಿಗೆ ಒತ್ತಾಯಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀರಾಮ ಸೇನೆಯ ರಾಜ್ಯ ಘಟಕದ ಧರ್ಮ ಪ್ರಚಾರಕ ಶ್ರೀನಿವಾಸ ಗುರೂಜಿ ದೊಡ್ಡಬಳ್ಳಾಪುರದ ತಾಲೂಕು ಅಧ್ಯಕ್ಷ ಮಲ್ಲೇಶ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಧಾನ ಕಾರ್ಯದರ್ಶಿ ಸಿಂಗಂ ಸುರೇಶ್ ,ಕವಿತಾ ,ಸುಮಲತಾ ಹಾಗೂ ಶ್ರೀರಾಮ್ ಸೇನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಒಳಚರಂಡಿ ಕಾಮಗಾರಿ ಪರಿಶೀಲನೆ

• **ಬೆಂಗಳೂರು:** ಬಾಣಸವಾಡಿ ರೈಲ್ವೆ ನಿಲ್ದಾಣದ ಸಮೀಪ ಒಳಚರಂಡಿ ಕಾಮಗಾರಿ ಕೈಗೊಳ್ಳಲು ಸಹಕರಿಸಿ, ರಾಜ್ಯ ಸರ್ಕಾರದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವಂತೆ ಕೆ-ರೈಡ್ ಅಧಿಕಾರಿಗಳಿಗೆ ಇಂಧನ ಸಚಿವ ಕೆ.ಜೆ.ಜಾರ್ಜ್ ಸೂಚಿಸಿದರು. ಬಾಣಸವಾಡಿ ರೈಲ್ವೆ ನಿಲ್ದಾಣದ ಸಮೀಪದಲ್ಲೇ ಕೆ-ರೈಡ್ ಕೈಗೊಂಡಿರುವ ಕಾಮಗಾರಿ ಸ್ಥಳಕ್ಕೆ ತೆರಳಿ, ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡ ಅವರು, ರೈಲ್ವೆ ಅಧಿಕಾರಿಗಳು ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ, ಇದರಿಂದ ನಮ್ಮ ಕೆಲಸಗಳಿಗೆ ಅಡಚಣೆ ಆಗುತ್ತಿದೆ ಎಂದು ಜಿಬಿಎ ಅಧಿಕಾರಿಗಳು ದೂರಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿ,ನೀವು ಅಧಿಕಾರಿಗಳು ಎಲ್ಲಿದ್ದರೂ ಸಂಬಳ ಬರುತ್ತದೆ. ಜನರ ಪರವಾಗಿ ಮಾನವೀಯತೆಯಿಂದ ಸ್ಪಂದಿಸಿ ಕೆಲಸ ಮಾಡಿ. ಜಿಬಿಎ ಅಧಿಕಾರಿಗಳ ಜೊತೆಗೂಡಿ ಕೆಲಸ ನಿರ್ವಹಿಸಿ, ಎಂದು ರೈಲ್ವೆ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ. ಸದ್ಯದಲ್ಲೇ ಕೇಂದ್ರ ರಾಜ್ಯ ಖಾತೆ ರೈಲ್ವೆ ಸಚಿವರಾದ ವಿ.ಸೋಮಣ್ಣ ಅವರು ಸರ್ವಜ್ಞನಗರ ಕ್ಷೇತ್ರಕ್ಕೆ ಬರುತ್ತಾರೆ. ನಮ್ಮ ಅಧಿಕಾರಿಗಳು ಸಮಸ್ಯೆಯ ಕುರಿತು ವಿವರ ನೀಡುತ್ತಾರೆ. ರೈಲ್ವೆ ಉನ್ನತಾಧಿಕಾರಿಗಳು ಬಂದು ಉತ್ತರಿಸಿ, ಸಮಸ್ಯೆ ಬಗೆಹರಿಸಲಿ. ನಮ್ಮ ಜನರಿಗೆ ಯಾವುದೇ ಸಮಸ್ಯೆ ಆಗಬಾರದು, ನಾವು ಜನರಿಗಾಗಿ, ಜನರ ಘನತೆಯ ಬದುಕಿಗಾಗಿ ಕೆಲಸ ಮಾಡಬೇಕು ನಮ್ಮ ಧ್ಯೇಯವೂ ಅದೇ, ನಮ್ಮ ಬದ್ಧತೆಯೂ ಅದೇ ಆಗಿದೆ ಎಂದು ಜಾರ್ಜ್ ಹೇಳಿದ್ದಾರೆ.

ತಾವರೆಕೆರೆಯಲ್ಲಿ ಅದ್ದೂರಿ ಬಸವ ಜಯಂತ್ಯುತ್ಸವ | ಜಾನಪದ ಕಲಾತಂಡಗಳ ಸಹಿತ ಮೆರವಣಿಗೆ

ಸಾಮಾಜಿಕ ಪ್ರಜ್ಞೆ ಮೂಡಿಸಿದ ಶರಣರು

• **ತಾವರೆಕೆರೆ:** ಬಸವಣ್ಣನವರು ವಚನಗಳ ಮೂಲಕ ಜಾತಿ ಪದ್ಧತಿ ಲಿಂಗ ತಾರತಮ್ಯ ಮತ್ತು ಮೂಢನಂಬಿಕೆಯನ್ನು ವಿರೋಧಿಸಿ ಸಮಾನತೆಯ ಸಮಾಜವನ್ನು ನಿರ್ಮಿಸಿದರು ಎಂದು ಬಸವ ಕಲ್ಯಾಣ ಮಠದ ಶ್ರೀ ಮಹಾದೇವ ಸ್ವಾಮೀಜಿ ಹೇಳಿದರು.

ಹೊಸಕೋಟೆ ತಾಲೂಕು ನಂದಗುಡಿ ಹೋಬಳಿಯ ತಾವರೆಕೆರೆ ಗ್ರಾಮದಲಿ ಬಸವ ಸೇವಾ ಸಮಿತಿಯಿಂದ ಏರ್ಪಡಿಸಿದ್ದ ಬಸವ ಜಯಂತೋತ್ಸವ 'ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಅನುಭವ ಮಂಟಪದ ಮೂಲಕ ಎಲ್ಲಾ ವರ್ಗದಜನರಿಗೂ ಆಧ್ಯಾತ್ಮಿಕ ಮತ್ತು ಸಾಮಾಜಿಕ ಚಿಂತನೆಉಮಗಮ ಪರಿಚಯಿಸಿದರು.

12ನೇ ಶತಮಾನದಲ್ಲಿ ಕನ್ನಡದ ಒಬ್ಬ ತತ್ವಜ್ಞಾನಿ ಕಲಚೂರಿ ಅರಸನ ಬಿಜ್ಜಳ ರಾಜನ ಆಸ್ಥಾನದಲ್ಲಿ ಮಂತ್ರಿಯಾಗಿದ್ದರು. ಸಮಾಜ ಸುಧಾರಕರ ಶಿವ ಕೇಂದ್ರಿಕೃತ ಭಕ್ತಿ ಚಳುವಳಿಯಲ್ಲಿ ಕನ್ನಡ ಕವಿಯಾಗಿದ್ದರು. ಬಸವಣ್ಣ ವಚನದ ಮೂಲಕ ಸಾಮಾಜಿಕ ಅರಿವು ಮೂಡಿಸಿದರು ಸಾವಿರಾರು ಪವಾಡಮಾಡಿದ್ದಾರೆ. ತಾಯಿ ತಂದೆಯರು ಮಕ್ಕಳಿಗೆ ದಿನಕ್ಕೊಂದು ವಚನ ಕಲಿಸಿ ಮುಂದಿನ ಜೀವನದಲ್ಲಿ ಆಧ್ಯಾತ್ಮಿಕಕಡೆ ಒಲವು ಇರುತ್ತದೆಂದು ಹೇಳಿದರು.

ನಾಗಲಾಪುರ ಸಂಸ್ಥಾನ ಮಠದ ಶ್ರೀ ತೇಜೇಶಲಿಂಗ ಶಿವಾಚಾರ್ಯ ಮಹಾ ಸ್ವಾಮೀಜಿ ಮಾತನಾಡಿ, ತಂದೆತಾಯಿ ಅವರನ್ನು ಅನಾಥಶ್ರಮಕ್ಕೆ ಹಾಕದೆ ಮಕ್ಕಳು ಚೆನ್ನಾಗಿ ನೋಡಿಕೊಳ್ಳಬೇಕು. ಭಾರತದಲ್ಲಿ ಅನೇಕ ಸಂತರು ಶರಣರು ಹುಟ್ಟಿದ ನಾಡು ಪ್ರತಿಯೊಬ್ಬರು ಶ್ರೀ ಕೃಷ್ಣ ಪರಮಾತ್ಮ ಸಂದೇಶ ನೀಡಿರುವ ಭಗವದ್ಗೀತೆಯಅರ್ಥವನ್ನು ತಿಳಿಸಿದರು.





ಶರಣರಲ್ಲಿ ಬೇಧಭಾವವಿಲ್ಲ

12ನೇ ಶತಮಾನದಲ್ಲಿ ಹೆಣ್ಣುಗಂಡು ಎಂಬ ಭೇದವಿತ್ತು ಹೆಣ್ಣೊಂದು ಭೋಗದ ವಸ್ತು ಎಂದು ಭಾವಿಸುತ್ತಿದ್ದರು. ಅಂತಹ ಪಿಡುಗನ್ನ ಬಸವಣ್ಣನವರು ಸಮಾನತೆಯಿಂದ ಬಾಳಲು ಸಂದೇಶ ನಿಡಿದರು ಅನೇಕ ಸಮಾಜ ಮುಖಿ ಕೆಲಸಗಳು ಇಂದಿಗೂ ಆದರ್ಶವಾಗಿ ಜೀವಂತವಾಗಿದ್ದಾವೆಂದು ಬಸವ ಕಲ್ಯಾಣ ಮಠದ ಶ್ರೀ ಮಹಾದೇವ ಸ್ವಾಮೀಜಿ ಹೇಳಿದರು.

ಸಾಮಾನ್ಯರಿಗೆ ಉತ್ತಮ ಸಂದೇಶ

ಆಧ್ಯಾತ್ಮಿಕ ಬಗ್ಗೆ ಅತೀವಿತ್ತರಕ್ಕೆ ತೆಗೆದುಕೊಂಡು ಹೋದ ಕೀರ್ತಿಅವರದ್ದಾಗಿದೆ. ಸಾವಿರಾರು ವಚನಗಳ ಮುಖಾಂತರ ಜನಕ್ಕೆ ಸಂದೇಶ ನೀಡಿದ್ದಾರೆಂದು ಬಸವ ಕಲ್ಯಾಣ ಮಠದ ಶ್ರೀ ಮಹಾದೇವ ಸ್ವಾಮೀಜಿ ಹೇಳಿದರು.

ಇದೇ ಸಂದರ್ಭದಲ್ಲಿ ನೂರಾರು ಮುತ್ತೈದೆಯರು ಕುಂಭ ಕಳಶದೊಂದಿಗೆ ಸ್ವಾಮೀಜಿಯನ್ನು ಸ್ವಾಗತಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮುಖಾಂತರ ವೇದಿಕೆಗೆ ಕರೆತರಲಾಯಿತು. ವೇದಿಕೆ ಕಾರ್ಯಕ್ರಮದ ಮುಗಿದ ನಂತರ ಅನ್ನದಾಸೋಹವನ್ನು ತಾವರೆಕೆರೆಯ ಬಸವ ಸೇವಾ ಸಮಿತಿ ಏರ್ಪಡಿಸಿದ್ದರು. ಕಾರ್ಯಕ್ರಮದಲ್ಲಿ ವೀರಶೈವ-ಲಿಂಗಾಯತರು ಮತ್ತುತಾವರೆ ಕೆರೆಯ ಗ್ರಾಮಸ್ಥರು ಭಾಗವಹಿಸಿದ್ದರು.

ಸಂಘದ ಸದಸ್ಯರು ಭಾಗವಹಿಸಲು ಅಧ್ಯಕ್ಷ ಬಾಲಕೃಷ್ಣನ್ ಮನವಿ

ಜು.5ಕ್ಕೆ ಸನಾತನ ಸೇವಾ ಸಭಾ ಮಹಾಸಭೆ

• **ದೊಡ್ಡಬಳ್ಳಾಪುರ:** ರಾಷ್ಟ್ರದಲ್ಲಿ ಅತ್ಯುತ್ತಮವಾಗಿ ಸನಾತನ ಸೇವಾ ಸಂಘ ಕಾರ್ಯ ನಿರ್ವಹಿಸುತ್ತಿದೆ. ಈ ಸಂಘದಲ್ಲಿ ನಿವೃತ್ತ ರಕ್ಷಣಾಧಿಕಾರಿಗಳು ರಾಜ್ಯಪಾಲರು, ಕುಲಪತಿಗಳು, ಉಪಕುಲಪತಿಗಳು, ಶಿಕ್ಷಣ ತಜ್ಞರು, ವಿಜ್ಞಾನಿಗಳು, ಕಲಾವಿದರು, ಕ್ರೀಡಾಪಟುಗಳು ಇದರಲ್ಲಿ ಸದಸ್ಯರಾಗಿದ್ದಾರೆ ಎಂದು ಸನಾತನ ಸೇವಾ ಸಂಘದ ಅಧ್ಯಕ್ಷ ಪಿ. ಬಾಲಕೃಷ್ಣನ್ ಹೇಳಿದರು.

ನಗರದ ಸಂಘದ ಕಚೇರಿಯಲ್ಲಿ ಸನಾತನ ಸೇವಾ ಸಂಘ ಕರ್ನಾಟಕ ಘಟಕದ ಪದಾಧಿಕಾರಿಗಳು ಹಾಗೂ ಸದಸ್ಯರನ್ನು ಉದ್ದೇಶಿಸಿ ಮಾತನಾಡಿ, ಸುಮಾರು 500 ಸದ್ಯರು ಸಂಘದಲ್ಲಿ ನೋಂದಣಿಯಾಗಿದ್ದಾರೆ. ಇದರ ವಾರ್ಷಿಕ ಮಹಾಸಭೆ ಜುಲೈ 5ರಂದು ಕೇರಳದ ಪಾಲಕಾಡ್ ನಲ್ಲಿ ನಡೆಯುತ್ತದೆ ಎಂದು ತಿಳಿಸಿದರು.

ಕರ್ನಾಟಕದಲ್ಲಿ ಕರ್ನಾಟಕದ ಘಟಕದಿಂದ ರಕ್ತದಾನ ಶಿಬಿರ, ವೇದಪಾಠ, ಸಂಸ್ಕೃತ ಶಾಲೆ, ವೇದ ವಿಜ್ಞಾನ ಜ್ಯೋತಿಷ್ಯ, ಇದು ಭಾರತ ದೇಶದ ಸನಾತನ ಧರ್ಮದ ಅಂಗವಾಗಿದೆ. ಇದನ್ನು ಉಳಿಸಲು ಮತ್ತು ಬೆಳೆಸಲು ನಮ್ಮೆಲ್ಲರ ಜವಾಬ್ದಾರಿ ಎಂದರು.

ಅಲ್ಲದೇ ಕರ್ನಾಟಕ ಘಟಕದಿಂದ ಮಾತೃಭೋಜನಾ ಕೇಂದ್ರವನ್ನು ರಾಜ್ಯಾದ್ಯಂತ ಸ್ಥಾಪಿಸಲು ತಿಳಿಸಿದಲ್ಲದೆ ಈಗಾಗಲೇ ಮಾತೃ ಭೋಜನ ಕೇಂದ್ರವು ಪ್ರಾರಂಭಿಸಿರುವುದು ಗಮನಿಸಿ ಶ್ಲಾಘನೀಯ ಮಾಡಿದರು.



ಡಾ. ಎಂ.ಆರ್ .ರಂಗನಾಥ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಸನಾತನ ಸೇವಾ ಸಂಘದ ಉಪನಿಯಮವನ್ನು ತಿದ್ದುಪಡಿ ಮಾಡಿ ಇನ್ ಕಂ ಟ್ಯಾಕ್ಸ್ ಕಲಂ ಅಳವಡಿಸಿಕೊಳ್ಳಲು ಸೂಚಿಸಲಾಗಿದೆ. ಅಗತ್ಯವಿದ್ದಲ್ಲಿ ಕೇರಳ ರಾಜ್ಯದ ಸಂಘದ ನಿಬಂಧಕರಿಗೆ ಒತ್ತಾಯಿಸಲಾಗುತ್ತದೆ ಎಂದು ಮನವರಿಕೆ ಮಾಡಿಕೊಡಲಾಗುವುದೆಂದು ತಿಳಿಸಿದ್ದಾರೆ. ಇನ್ ಕಾಂ ಟ್ಯಾಕ್ಸ್ ಆಕ್ಟ್ 80 ಜಿ ಕಲಂ 12 ಎ ಇದನ್ನು ಅಳವಡಿಸಿಕೊಂಡಲ್ಲಿ ಹೆಚ್ಚು ದಾನಿಗಳ ಆರ್ಥಿಕ ನೆರವನ್ನೂ ಸಂಘ ಪಡೆಯಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸದರಿ ಸಭೆಯಲ್ಲಿ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರಾದ ಬಿ.ಕೆ.ನಾರಾಯಣ, ಡಾ.ಪ್ರವೀಣ್ ನಾಯಕ್, ಇಂಜಿನಿಯರ್ ವಿನಯ ದೊಡ್ಡಯ್ಯ, ಮಹೇಶ ರಾಮಣ್ಣ, ಅವಧೂತ ಎಚ್ .ಎನ್. ಶಂಕರನಾರಾಯಣ ಇದ್ದರು.

ಸರಕಾರಿ ನೌಕರರಿಗೆ ಉಪಲೋಕಾಯುಕ್ತ ನ್ಯಾ. ಬಿ. ವೀರಪ್ಪ ಎಚ್ಚರಿಕೆ

ಭ್ರಷ್ಟರನ್ನು ಬಿಡುವ ಪ್ರಶ್ನೆಯೇ ಇಲ್ಲ

• **ಮಂಡ್ಯ:** ಭ್ರಷ್ಟರನ್ನು ಬಿಡುವ ಪ್ರಶ್ನೆಯೇ ಇಲ್ಲ, ಕಾನೂನು ಬದ್ಧವಾಗಿ ಕೆಲಸ ಮಾಡಿದರೆ ನಾನೇ ತಲೆಬಾಗುತ್ತೇನೆ. ಅದು ಬಿಟ್ಟು ಕಾನೂನು ಮೀರಿ ಕೆಲಸ ಮಾಡಿದರೆ ಸುಮ್ಮನಿರುವುದಿಲ್ಲ, ಯಾರೇ ಆದರೂ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇನೆ ಎಂದು ಉಪ ಲೋಕಾಯುಕ್ತ ಬಿ. ವೀರಪ್ಪ ಎಚ್ಚರಿಕೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ 2ನೇ ದಿನ ಮಂಡ್ಯ ತಾಲೂಕಿನ ಬಾಕಿ ಪ್ರಕರಣಗಳ ವಿಚಾರಣೆ ಮತ್ತು ವಿಲೇವಾರಿ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಾಯುಕ್ತದಲ್ಲೂ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಅತ್ಯುತ್ತಮ ಎಸ್ಪಿಗಳು ಸಿಕ್ಕಿದರೆ ಒಳ್ಳೆಯ ಕೆಲಸ ಮಾಡಲು ಸಾಧ್ಯ ಎಂದು ಹೇಳಿದರು.

ಪಿಡಿಒಗಳೇ ಸುಪ್ರೀಂ ಎಂದುಕೊಂಡಿದ್ದಾರೆ: ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ನಾವೇ ಸುಪ್ರೀಂ ಎಂದುಕೊಂಡಿದ್ದಾರೆ. ಮೊದಲು ಪಂಚಾಯತ್ ರಾಜ್ ಕಾಯ್ದೆಯ ನಿಯಮಗಳನ್ನು ಓದಿಕೊಂಡು ಕಾನೂನು ರೀತಿ ಕೆಲಸ ಮಾಡಬೇಕು. ನಾನು ಮತ್ತೆ 6 ತಿಂಗಳ ನಂತರ ಬರುತ್ತೇನೆ ಎಂದು ಎಚ್ಚರಿಸಿದರು. ಪಿಡಿಒಗಳು ನಾವೇ ಇಒ, ಸಿಇಒ, ಡಿಸಿ ಎಂಬ ಭಾವನೆಯಲ್ಲಿದ್ದಾರೆ. ಪಿಡಿಒಗಳಿಗೆ ಭಯವೇ ಇಲ್ಲದಂತಾಗಿದೆ. ಪಂಚಾಯತ್ ರಾಜ್ ನಿಯಮಗಳನ್ನು ಓದಿಕೊಂಡು ಜನರಿಗೆ ನ್ಯಾಯ ಕೊಡಿಸುವ ಕೆಲಸ ಮಾಡಬೇಕು ಎಂದು ಸೂಚಿಸಿದರು.

ಜನಸಾಮಾನ್ಯರಿಗೆ ತೊಂದರೆ ಕೊಡಬೇಡಿ

ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರ ಹಾಗೂ ಅಕ್ರಮ ವಿರುದ್ಧ ಕ್ರಮ ವಹಿಸಬೇಕು. ಜನಸಾಮಾನ್ಯರಿಗೆ ತೊಂದರೆಯಾಗುವ ನೀತಿಗಳ ವಿರುದ್ಧ ಅಧಿಕಾರಿಗಳ ಮೇಲೆ ಕ್ರಮ ವಹಿಸಬೇಕು. ಅಧಿಕಾರಿಗಳು ಕಾನೂನು ಬದ್ಧವಾಗಿ ಹಾಗೂ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕು ಎಂದರು.

ನಿರ್ದಾಕ್ಷಿಣ್ಯ ಕ್ರಮ: ಕಾನೂನು ಬದ್ಧವಾಗಿ ಕೆಲಸ ಮಾಡಿದರೆ ನಾನೇ ತಲೆಬಾಗುತ್ತೇನೆ. ಅದು ಬಿಟ್ಟು ಕಾನೂನು ಮೀರಿ ಕೆಲಸ ಮಾಡಿದರೆ ಸುಮ್ಮನಿರಲ್ಲ, ಯಾರೇ ಆದರೂ ನಿರ್ದಾಕ್ಷೀಣ್ಯವಾಗಿ ಕ್ರಮ ಕೈಗೊಳ್ಳುತ್ತೇನೆ ಎಂದು ಎಚ್ಚರಿಸಿದರು.

ಪುರಾತತ್ವ ಇಲಾಖೆ ನಿಲಕ್ಷ್ಯ | ಗ್ರಾಮಸ್ಥರು, ಜನಪ್ರತಿನಿಧಿಗಳಿಂದ ಜೀರ್ಣೋದ್ಧಾರಕ್ಕೆ ನಿರ್ಧಾರ

ಅವಸಾನ ಸ್ಥಿತಿಯಲ್ಲಿ ಸೋಮೇಶ್ವರ ದೇಗುಲ

▶ **ತಾವರೆಕೆರೆ ಟಿ ನಾಗರಾಜ್**

ದಿಗಂತ ವಿಶೇಷ

• **ತಾವರೆಕೆರೆ:** ಹೊಸಕೋಟೆ ತಾಲೂಕಿನ ದೊಡ್ಡ ಹುಲ್ಲೂರು ಗ್ರಾಮದ ಕೆರೆಯ ಸಮೀಪದಲ್ಲಿರುವ ಹೊಯ್ಸಳರ ಕಾಲದ ಸೋಮೇಶ್ವರ ದೇವಾಲಯ ಅವಸಾನದತ್ತ ಸಾಗಿದೆ. ಅಲ್ಲದೆ, ಕುಸಿಯುವ ಸ್ಥಿತಿ ತಲುಪಿದೆ. ಪುರಾತತ್ವ ಇಲಾಖೆ ಸಂಗ್ರಹಾಲಯ ಹಾಗೂ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಗೆ ಇಲ್ಲೊಂದು ಪುರಾತನ ಕಾಲದ ದೇವಾಲಯವಿದೆ ಎಂಬುವುದೆ ಗೊತ್ತಿಲ್ಲದಂತಿದೆ.

ಮಾಂಡವ್ಯ ಮಹರ್ಷಿ ಈ ಪ್ರದೇಶದಲ್ಲಿ ತಪಸ್ಸು ಮಾಡಿದ ಪುಣ್ಯಾಶ್ರಮದ ವೆಂದು ಹೆಸರಾಗಿದೆ. ಸೋಮೇಶ್ವರ ಲಿಂಗವೇ ದೇವಾಲಯದ ಗರ್ಭಗುಡಿಯಲ್ಲಿದೆ. ಈ ದೇವಾಲಯ ಪೌರಾಣಿಕ ಕಥೆಯಾದ ಮಹಾ ಭಾರತದ ಉಲ್ಲೇಖ ಮತ್ತು ಹೊಯ್ಸಳರ ವಾಸ್ತು ಶಿಲ್ಪದ ಸಮ್ಮಿಲನವಾಗಿದೆ.

ಇದು ಈ ಪ್ರದೇಶದ ಪ್ರಾಚೀನತೆ ಮತ್ತು ಧಾರ್ಮಿಕತೆ ಮಹತ್ವವನ್ನು ಸೂಚಿಸುತ್ತದೆ. ಮಹಾಭಾರತ ಕಾಲದ ಪಾಂಡವರು ವನವಾಸದಲ್ಲಿದ್ದಾಗ ಇಲ್ಲಿಗೆಬಂದ್ದಿದ್ದರು ಎಂಬ ನಂಬಿಕೆ ಇಲ್ಲಿನ ಜನರಲ್ಲಿದೆ. ಭೀಮನು ತನ್ನಗಧೆಯಿಂದ ಗಧಾತೀರ್ಥವನ್ನು



ಸೃಷ್ಟಿಸಿದೆನೆಂಬ ಕಥೆಜನಪ್ರಿಯವಾಗಿದೆ.

ಮಹಾಭಾರತದ ಕಥೆಯ ಪ್ರಕಾರ ಭಕಾಸುರನ ವಧೆಗಿಂತ ಮೊದಲು ಭೀಮನು ಈ ಪ್ರದೇಶದಲ್ಲಿ ತೀರ್ಥ ಸ್ನಾನ ಮಾಡಲು ತನ್ನ ಗಧೆಯಿಂದ ನೆಲವನ್ನು ಬಡೆದುದೊಡ್ಡಕೆರೆಯನ್ನು ಸೃಷ್ಟಿಸಿದನು ಎಂಬ ಪ್ರತೀತಿ ಇಲ್ಲಿದೆ. ಆದರೆ, ಈ ಸ್ಮಾರಕವನ್ನು ಉಳಿಸಿಕೊಳ್ಳಲು ಜನಪ್ರತಿನಿಧಿಗಳು. ಅಧಿಕಾರಿಯಾಗಲಿ ಪ್ರಯತ್ನ ಮಾಡುತ್ತಿಲ್ಲ.

ಆದರೂ, ಗ್ರಾಮಸ್ಥೆ ಕರ್ನಾಟಕ ಇತಿಹಾಸ ಅಕಾಡೆಮಿ ಸದಸ್ಯರಾದ ಪ್ರೊ. ಕೆ.ಆರ್ .ನರಸಿಂಹನ್, ಕೆ.ಧನಪಾಲ್, ಮಂಚೇನಹಳ್ಳಿ ಸುದರ್ಶನ್‌ರೆಡ್ಡಿ, ಭಾರ್ಗವ ಅವರು ಅಧ್ಯಯನ ಮಾಡಿ ಈ ದೇವಾಲಯ ಚೋಳರ ಕಾಲದ್ದಾಗಿದೆ. ಗ್ರಾಮಸ್ಥರ ಜತೆಗೆ ಚರ್ಚಿಸಿ ಈ ದೇವಾಲಯವನ್ನು ಉಳಿಸಿಕೊಳ್ಳಲು ತೀರ್ಮಾನಿಸಲಾಯಿತು.

ದೇವಾಲಯವು 8ನೇ ಶತಮಾನಕ್ಕೆ ಸೇರಿದೆ ಎಂಬುವುದಕ್ಕೆ ಹಲವು ಪುರಾವೆಗಳಿವೆ. ಹೀಗಾಗಿ ಮತ್ತಷ್ಟು ಅಧ್ಯಯನ ಆಗಬೇಕು. ಸ್ಥಳೀಯರಲ್ಲಿ ಇತಿಹಾಸ ಪ್ರಜ್ಞೆ ಪುರಾತತ್ವ ಮತ್ತು ಪ್ರವಾಸೋದ್ಯಮ ಇಲಾಖೆ ಮತ್ತು ಸ್ಥಳೀಯ ಆಡಳಿತ ಸಂಸ್ಥೆ ನಿರ್ಲಕ್ಷ್ಯದಿಂದ ಸ್ಮಾರಕಗಳು ಅವಸಾನದತ್ತ ಸಾಗಿದೆ. ಈ ಕೂಡಲೇ ಸರ್ಕಾರ ಎಚ್ಚೆತ್ತು ಈ ಸ್ಮಾರಕ ಉಳಿಸಿಕೊಳ್ಳಲು ಗಮನಹರಿಸಬೇಕೆಂದು ಪ್ರೊ. ಕೆ.ಆರ್.ನರಸಿಂಹನ್ ಅವರು ತಿಳಿಸಿದ್ದಾರೆ.

ದೇವಾಲಯವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಶಿಲ್ಪಿಗಳು ಮತ್ತು ಹಾಗೂ ತಜ್ಞರನ್ನ ಕರಿಸಿ ಈಗಾಗಲೇ ಚರ್ಚಿಸಲಾಗಿದೆ. ಪ್ರಸ್ತುತ ಇರುವ ದೇವಾಲಯವನ್ನು ಮತ್ತೆ ನಿರ್ಮಿಸುವುದು ಅಥವಾ ಶಿಥಿಲವಸ್ಥೆಯಲ್ಲಿರುವ ದೇವಾಲಯ ವನ್ನು ಮತ್ತೆ ಜೋಡಿಸುವುದರ ಬಗ್ಗೆ ಗ್ರಾಮಸ್ಥರು ಮತ್ತು ಇತಿಹಾಸ ತಜ್ಞರೊಡನೆ ಚರ್ಚೆ ನಡೆಯುತ್ತಿದೆ. ಎಲ್ಲರ ಅಭಿಪ್ರಾಯ ದಂತೆ ದೇವಾಲಯದಅಭಿವೃದ್ಧಿಕಾರ್ಯ ಶುರು ಮಾಡುತ್ತೇವೆ. ಆನಂತರ ಇದೊಂದು ಪ್ರವಾಸಿ ತಾಣ ಮಾಡುವ ಯೋಜನೆ ಯಿದೆ ಎಂದು ಗ್ರಾಮದ ಬಮುಲ್ ಲ್ ನಿರ್ದೇಶಕ ಎಲ್.ಎನ್. ಟಿ ಮಂಜುನಾಥ್ ತಿಳಿಸಿದ್ದಾರೆ.

ಶಿಕ್ಷಣದಿಂದ ಮಕ್ಕಳಿಗೆ ಉತ್ತಮ ಭವಿಷ್ಯ

• **ಬೆಂಗಳೂರು:** ನಮ್ಮ ಮಕ್ಕಳ ಭವಿಷ್ಯ ಉತ್ತಮವಾಗಿ ರಬೇಕು, ಅವರಿಗೆ ಯಶಸ್ಸು ಲಭ್ಯವಾಗಬೇಕೆಂದರೆ ಶಿಕ್ಷಣವೊಂದೇ ಸೂತ್ರ. ಹೀಗಾಗಿ ಎಲ್ಲಾ ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಮುಂದಾಗಬೇಕು ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬ್ಯಾಟರಾಯನಪುರ ಕ್ರೀಡಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ನಮ್ಮೂರ ಹೆಮ್ಮೆ 2026 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉತ್ತಮ ವಿದ್ಯಾರ್ಥಿಗಳನ್ನು ಮತ್ತಷ್ಟು ಉತ್ತೇಜಿಸುವುದು ಹಾಗೂ ಇಂತಹ ವಿದ್ಯಾರ್ಥಿಗಳನ್ನು ಇತರರಿಗೆ ಸ್ಫೂರ್ತಿಯಾಗುವಂತೆ ಮಾಡುವುದೇ ನಮ್ಮೂರ ಹೆಮ್ಮೆ ಕಾರ್ಯಕ್ರಮದ ಉದ್ದೇಶ. ಇದೇ ಕಾರಣಕ್ಕೆ ಈ ಕಾರ್ಯಕ್ರಮವನ್ನು ಕಳೆದ ಐದು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು, ಈ ವರ್ಷ ವಿವಿಧ ವಾರ್ಡ್‌ಗಳ ಕನಿಷ್ಠ 4,000 ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನಿಸಲಾಗುವುದು ಎಂದರು.

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ತರಗತಿಗಳಲ್ಲಿ ಉತ್ತಮ ಅಂಕ ಪಡೆದು ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಇಂದು ಸನ್ಮಾನ ಮಾಡಲಾಗುತ್ತಿದೆ. ನಮ್ಮ ಮಕ್ಕಳ ಭವಿಷ್ಯ ಉತ್ತಮವಾಗಿ ರೂಪಗೊಳ್ಳಲು ಹಾಗೂ ಅವರು ದೊಡ್ಡ ಮಟ್ಟದ ಯಶಸ್ಸನ್ನು ಸಾಧಿಸಲು ಶಿಕ್ಷಣವೇ ಸೂತ್ರ. ಶಿಕ್ಷಣವಿದ್ದರೆ, ನಮ್ಮ ಮಕ್ಕಳು ಜೀವನದಲ್ಲಿ ಗೆಲುವು ಸಾಧಿಸುವುದು ಗ್ಯಾರಂಟಿ ಎಂದು ಅಭಿಪ್ರಾಯಪಟ್ಟರು.



▶▶ ಬ್ಯಾಟರಾಯನಪುರದಲ್ಲಿ ನಮ್ಮೂರ ಹೆಮ್ಮೆ-2026 ಕಾರ್ಯಕ್ರಮ

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ತರಗತಿಯಲ್ಲಿ ಉತ್ತಮ ಅಂಕ ಗಳಿಸಿದ 250ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮೀನಾಕ್ಷಿ ಕೃಷ್ಣ ಬೈರೇಗೌಡ ಸೇರಿದಂತೆ ಬ್ಯಾಟರಾಯನಪುರ ಕ್ಷೇತ್ರ ತಿಂಡ್ಲು ವಾರ್ಡ್‌ನ ಸ್ಥಳೀಯ ನಾಯಕರು ಉಪಸ್ಥಿತರಿದ್ದರು.

ಸಕ್ಕರೆ ಮತ್ತು ಉಪ್ಪು ಅಗತ್ಯ ಎಂದು ಅಂದಾಜಿಸಲಾಗಿದೆ. ಆಹಾರ ಕಿಟ್‌ನಲ್ಲಿ ಪೌಷ್ಟಿಕಾಂಶಗಳಿಂದ ಕೂಡಿರುವ ತೊಗರಿ ಬೇಳೆ ಗರಿಷ್ಠ ಪ್ರಮಾಣದಲ್ಲಿ ನೀಡಲು ಈಗಾಗಲೇ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದು, ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿಯೂ ಸಹ ಕ್ಯೂಆರ್ ಸ್ಕ್ಯಾನ್ ಮಾಡಬಹುದಾದ ತಂತ್ರಾಂಶವನ್ನು ಅಳವಡಿಸಿ ಅದರ ಆಧಾರದ ಮೇಲೆ ಪಡಿತರ ಚೀಟಿದಾರರಿಗೆ 'ಇಂದಿರಾ' ಫುಡ್ ಕಿಟ್ ವಿತರಣೆ ಮಾಡಲಾಗುತ್ತದೆ.



'ಅನ್ನರಾಮಯ್ಯ'ರಾದ ಸಿದ್ದರಾಮಯ್ಯ!

2013ರಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಕೆಲವೇ ಗಂಟೆಗಳಲ್ಲಿ ಸಿದ್ದರಾಮಯ್ಯನವರು ಘೋಷಿಸಿದ ಮೊದಲ ಐತಿಹಾಸಿಕ ಯೋಜನೆ 'ಅನ್ನಭಾಗ್ಯ'. ಅಂದು ಕೇವಲ 1 ರೂಪಾಯಿಗೆ ಅಕ್ಕಿ ನೀಡಿ, ನಂತರ ಅದನ್ನು ಸಂಪೂರ್ಣ ಉಚಿತಗೊಳಿಸಿ ಬಡವರ ಹೊಟ್ಟೆ ತಣಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅಂದಿನಿಂದಲೇ ಕರ್ನಾಟಕದ ಜನತೆ ಅವರನ್ನು ಪ್ರೀತಿಯಿಂದ 'ಅನ್ನರಾಮಯ್ಯ' ಎಂದು ಕರೆಯಲಾರಂಭಿಸಿದರು. ಅಂದು 2013 ರಲ್ಲಿ ಜಾರಿಗೆ ಬಂದ ಅನ್ನಭಾಗ್ಯ ಯೋಜನೆ, 2023 ರ ನಂತರ 'ಪಂಚ ಗ್ಯಾರಂಟಿ'ಗಳಲ್ಲಿ ಒಂದಾಗಿ ಮತ್ತಷ್ಟು ಶಕ್ತಿಶಾಲಿಯಾಗಿ ಮರುಜನ್ಮ ಪಡೆಯಿತು. ಅಂದು ರಾಜಕೀಯ ಇಚ್ಛಾಶಕ್ತಿಯಿಂದ ಆರಂಭವಾದ ಯೋಜನೆ, ಇಂದು ರಾಜ್ಯದ ಕೋಟ್ಯಂತರ ಬಡವರ ಪಾಲಿಗೆ ಬದುಕಿನ ಭರವಸೆಯಾಗಿದೆ.

ಅಂಕಿ-ಅಂಶ

4.26 ಕೋಟಿಗೂ ಅಧಿಕ
ಒಟ್ಟು ಫಲಾನುಭವಿಗಳು

₹18,897 ಕೋಟಿಗೂ ಅಧಿಕ
ಈವರೆಗೆ 'ಅನ್ನಭಾಗ್ಯ'ಕ್ಕೆ ವ್ಯಯಿಸಲಾದ ಅನುದಾನ



ಯಾರ ಮೇಲೂ ಅವಲಂಬಿಸದೇ ಬದುಕಬೇಕೆಂಬ ನನ್ನ ಕನಸಿಗೆ 'ಅನ್ನಭಾಗ್ಯ' ಯೋಜನೆ ಭದ್ರ ಆಸರೆಯಾಗಿದೆ. ಇದರಿಂದಾಗಿ ಹೊಟ್ಟೆಯ ಪಾಡಿನ ಆತಂಕವಿಲ್ಲದೆ, ಎಲ್ಲಾ ಗ್ಯಾರಂಟಿಗಳಿಂದ ಉಳಿತಾಯವಾದ ಹಣದಿಂದ ಒಂದು ಹಸು ಖರೀದಿಸಿ ಹೈನುಗಾರಿಕೆ ಆರಂಭಿಸಲು ಸಾಧ್ಯವಾಯಿತು. ಇಂದು ದಿನಾ ಹಾಲು ಮಾರಿ ಬರುವ ಆದಾಯದಲ್ಲಿ ನನ್ನ ಬದುಕು ಸ್ವಾಭಿಮಾನದಿಂದ ಸಾಗುತ್ತಿದೆ.

▶▶ ನೀಲಮ್ಮ, ಬೆಳ್ತಂಗಡಿ



ನನ್ನ ಗಂಡನ ನಿಧನದ ನಂತರ ಬಂಡವಾಳದ ಕೊರತೆಯಿಂದಾಗಿ ನಮ್ಮ ಸಾಂಪ್ರದಾಯಿಕ ಕುಂಬಾರಿಕೆ ಉದ್ಯಮ ನಡೆಸಲಾಗದೆ ಕಂಗಾಲಾಗಿದ್ದೆ. ಆ ಸಮಯದಲ್ಲಿ ಕುಟುಂಬ ನಿರ್ವಹಣೆಗೆ ದೊಡ್ಡ ಆಸರೆಯಾಗಿ ನಿಂತಿದ್ದು 'ಅನ್ನಭಾಗ್ಯ' ಯೋಜನೆ. ಸರ್ಕಾರದ ಉಚಿತ ಅಕ್ಕಿ ಮತ್ತು ದಿನಸಿ ನನ್ನ ಕುಟುಂಬದ ಮೂರೊತ್ತಿನ ಊಟದ ಆತಂಕವನ್ನು ಸಂಪೂರ್ಣವಾಗಿ ದೂರ ಮಾಡಿದೆ.

▶▶ ಮಹಾದೇವಿ, ಇಂಡಿ



ನನ್ನ ಮಗನಿಗೆ ಆಕ್ಸಿಡೆಂಟ್ ಆಗಿ ಮನೇಲೇ ಇದ್ದಾನೆ. ನಾನೊಬ್ಬಳೇ ದುಡಿದು ಮನೆ ನಡೆಸಬೇಕಾಗಿದೆ. ಮೊದಲೆಲ್ಲಾ ಊಟ ಇಲ್ಲದಿದ್ದಾಗ, ಬರಿ ಕಾಲಲ್ಲೇ ನಡೆದುಕೊಂಡು ಹೋಗಿ ಕಾಡಿನ ಹಣ್ಣು ತಿಂದು ಬದುಕ್ತಿದ್ವಿ. ಈಗ 'ಅನ್ನಭಾಗ್ಯ'ದಿಂದ ಅಕ್ಕಿ ಸಿಗ್ತಿದೆ. ನಮ್ಮಪ್ಪ ಸಿದ್ದರಾಮಯ್ಯ ಪುಣ್ಯಾತ್ಮನಿಂದಾಗಿ ನೆಮ್ಮದಿಯಾಗಿ ಜೀವನ ಮಾಡ್ತಾ ಇದ್ದೀವಿ.

▶▶ ಜಡೆಮಾದಮ್ಮ, ಚಾಮರಾಜನಗರ

ಕರ್ನಾಟಕ ವಾರ್ತೆ



ಬಡತನದ ವಿರುದ್ಧದ ಹೋರಾಟ

ಬಡತನದ ಹಸಿವು ಹೇಗಿರುತ್ತದೆ ಎಂದು ನನಗೆ ಗೊತ್ತು. ಅದಕ್ಕಾಗಿಯೇ ನಾನು ಮುಖ್ಯಮಂತ್ರಿಯಾದ ಮೊದಲ ದಿನವೇ ಅನ್ನಭಾಗ್ಯ ಯೋಜನೆಗೆ ಸಹಿ ಹಾಕಿದ್ದೆ. ರಾಜ್ಯದ ಯಾವುದೇ ವ್ಯಕ್ತಿ ಹಸಿವಿನಿಂದ ಮಲಗಬಾರದು ಎಂಬುದೇ ನನ್ನ ಆಶಯವಾಗಿತ್ತು. ಅಂದು ಆರಂಭವಾದ ಆ ಪವಿತ್ರ ಕಾರ್ಯ ಇಂದು 'ಗ್ಯಾರಂಟಿ'ಯಾಗಿ ಕೋಟ್ಯಂತರ ಮನೆ ತಲುಪಿದೆ ಎನ್ನುವುದೇ ನನಗೆ ತೃಪ್ತಿ.

– ಸಿದ್ದರಾಮಯ್ಯ, ಮುಖ್ಯಮಂತ್ರಿಗಳು



'ಹಸಿವು ಮುಕ್ತ ಸಮಾಜ' ನವ ಕರ್ನಾಟಕದ ಅಡಿಪಾಯ

ಜನರ ಕಷ್ಟಗಳಿಗೆ ಸ್ಪಂದಿಸುವುದು ನಮ್ಮ ಆದ್ಯ ಕರ್ತವ್ಯ. ಹಸಿವು ಮುಕ್ತ ಸಮಾಜದ ನಿರ್ಮಾಣವೇ ನವ ಕರ್ನಾಟಕದ ಅಡಿಪಾಯ. 'ಅನ್ನಭಾಗ್ಯ' ಮತ್ತು 'ಪಂಚ ಗ್ಯಾರಂಟಿ' ಯೋಜನೆಗಳ ಮೂಲಕ ಕರ್ನಾಟಕವನ್ನು ದೇಶದಲ್ಲೇ ಅತ್ಯಂತ ಪ್ರಗತಿಪರ ಹಾಗೂ ಕಲ್ಯಾಣ ರಾಜ್ಯವನ್ನಾಗಿ ಮಾಡುವುದೇ ನಮ್ಮ ಸರ್ಕಾರದ ಸಂಕಲ್ಪ.

– ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು



ಕೊನೆಯ ಪ್ರಜೆಗೂ ಅನ್ನ ಸಿಕ್ಕಿದೆ

ಮುಖ್ಯಮಂತ್ರಿಗಳ ದೂರದರ್ಶಿತ್ವದ 'ಅನ್ನಭಾಗ್ಯ' ಯೋಜನೆಯನ್ನು ಅತ್ಯಂತ ಪಾರದರ್ಶಕವಾಗಿ ಅರ್ಹ ಫಲಾನುಭವಿಗಳಿಗೆ ತಲುಪಿಸುವ ಜವಾಬ್ದಾರಿಯನ್ನು ನಮ್ಮ ಇಲಾಖೆ ಯಶಸ್ವಿಯಾಗಿ ನಿಭಾಯಿಸಿದೆ. ರಾಜ್ಯದ ಕಟ್ಟಕಡೆಯ ವ್ಯಕ್ತಿಗೂ ಆಹಾರ ಭದ್ರತೆ ಸಿಗುವಂತೆ ಮಾಡಲು ನಮ್ಮ ಆಹಾರ ಇಲಾಖೆ ಸದಾ ಬದ್ಧವಾಗಿದೆ.

– ಕೆ.ಎಚ್. ಮುನಿಯಪ್ಪ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು

ಭಾರತದ ಯುವಶಕ್ತಿಗೆ ಉದ್ಯೋಗ


ಪುಟ ೧➡ ಮುಂಬರುವ ವರ್ಷಗಳಲ್ಲಿ ವಿಕಸಿತ ಭಾರತದ ಸಾಕಾರದಲ್ಲಿ ದೇಶದ ಯುವಶಕ್ತಿ ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರೋಜ್‌ಗಾರ್ ಮೇಳದಲ್ಲಿ 51 ಸಾವಿರಕ್ಕೂ ಅಧಿಕ ಯುವಶಕ್ತಿಗೆ ನೇಮಕಾತಿ ಪತ್ರಗಳನ್ನು ವರ್ಚುವಲ್ ಆಗಿ ಪ್ರಧಾನಿ ಮೋದಿ ವಿತರಿಸಿದರು.

ಯಾವ ರಾಷ್ಟ್ರದ ಜತೆ ಯಾವ ಒಪ್ಪಂದ: ಸೆಮಿಕಂಡಕ್ಟರ್‌ಗಳು ಜಲ, ಕೃಷಿ ಮತ್ತು ಅತ್ಯಾಧುನಿಕ ಉತ್ಪಾದನಾ ಪ್ರಕ್ರಿಯೆಗೆ ಸಂಬಂಧಿಸಿ ನೆದರ್‌ಲ್ಯಾಂಡ್ ಜತೆ ಚರ್ಚೆ ನಡೆಯಿತು. ಕೃತಕ ಬುದ್ಧಿಮತ್ತೆ, ಡಿಜಿಟಲ್ ಆವಿಷ್ಕಾರ ಕುರಿತು ಸ್ವೀಡನ್ ಜತೆ, ಹಸಿರು ತಂತ್ರಜ್ಞಾನ ಮತ್ತು ಸಾಗರ ಸಂಬಂಧಿತ ಸಹಕಾರಗಳ ಬಗ್ಗೆ ನಾರ್ವೆ ನಾಯಕರ ಜತೆ ಮಾತುಕತೆ ನಡೆಸಿದ್ದೇನೆ. ವ್ಯೂಹಾತ್ಮಕ ಇಂಧನ ಮತ್ತು ತಂತ್ರಜ್ಞಾನ ಪಾಲುದಾರಿಕೆ ಬಗ್ಗೆ ಯುಎಇ ಜತೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ರಕ್ಷಣೆ, ಅಪೂರ್ವ ಖನಿಜಗಳು ಮತ್ತು ವಿಜ್ಞಾನ-ತಂತ್ರಜ್ಞಾನ ರಂಗಗಳಲ್ಲಿ ಸಹಕಾರ ವರ್ಧನೆಗೆ ಸಂಬಂಧಿಸಿ ಇಟಲಿ ಜತೆ ಮಹತ್ತ್ವದ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ ಎಂದು ಪಂಚ ರಾಷ್ಟ್ರಗಳ ಪ್ರವಾಸದಿಂದಾದ ರಾಜತಾಂತ್ರಿಕ ಮತ್ತು ಆರ್ಥಿಕ ಪರಿಣಾಮಗಳ ಕುರಿತು ಪ್ರಧಾನಿ ಮೋದಿ ಮಾಹಿತಿ ನೀಡಿದರು. ಮುಂದಿನ 25 ವರ್ಷಗಳ ಅವಧಿಗೆ ಜಾಗತಿಕ ಪ್ರಗತಿಯನ್ನು ವ್ಯಾಖ್ಯಾನಿಸಬಲ್ಲ ಉದ್ದಿಮೆಗಳಿಗೆ ರೂಪು ನೀಡಲು ಪ್ರಸ್ತುತ ಸಹಕಾರ -ಸಹಯೋಗಗಳು ಪೂರಕವಾಗಲಿವೆ ಎಂದು ಒಪ್ಪಂದಗಳ ದೀರ್ಘಕಾಲೀನ ಮಹತ್ತ್ವವನ್ನು ಪ್ರಧಾನಿ ವಿವರಿಸಿದರು. ಎಐ ರಂಗದಲ್ಲಿ ಸ್ವೀಡನ್ ಜತೆ ಪಾಲುದಾರಿಕೆ ಮತ್ತು ಸೂಪರ್‌ಕಂಪ್ಯೂಟಿಂಗ್‌ನಲ್ಲಿ ಯುಎಇ ಜತೆಗಿನ ಸಹಕಾರವು ಭಾರತದ ತಂತ್ರಜ್ಞಾನೀಯ ಸಾಮರ್ಥ್ಯಗಳನ್ನು ಮತ್ತಷ್ಟು ಬಲಿಷ್ಠಗೊಳಿಸಲಿದೆ ಎಂದು ಹೇಳಿದರು.

ವಿಶ್ವಾಸಾರ್ಹ ಜಾಗತಿಕ ಪೂರೈಕೆ ಪಾಲುದಾರ

ಅತ್ಯಂತ ವಿಶ್ವಾಸಾರ್ಹ ಜಾಗತಿಕ ಪೂರೈಕೆ ಪಾಲುದಾರನಾಗಿ ಭಾರತದ ಸ್ಥಾನಮಾನ ಬೆಳೆಯುತ್ತಿರುವುದಕ್ಕೆ ಎಎಸ್‌ಎಂಎಲ್-ಟಾಟಾ ಇಲೆಕ್ಟ್ರಾನಿಕ್ಸ್ ಜತೆ ಏರ್ಪಟ್ಟ ಒಪ್ಪಂದ ರಚನಾತ್ಮಕ ನಿದರ್ಶನವಾಗಿದೆ. ಸೆಮಿಕಂಡಕ್ಟರ್ ರಂಗದಲ್ಲಿ ಮುಂಚೂಣಿಯಲ್ಲಿರುವ ಡಚ್ ರಾಷ್ಟ್ರ ಒಪ್ಪಂದ ಮಾಡಿಕೊಂಡಿರುವ ಬೆರಳೆಣಿಕೆಯ ರಾಷ್ಟ್ರಗಳಲ್ಲಿ ಭಾರತ ಒಂದೆಂದು ಪ್ರಧಾನಿ ಮೋದಿ ಹೆಮ್ಮೆ ವ್ಯಕ್ತಪಡಿಸಿದರು.

ರಾಮ ಬಾಣ



ಪೊಲೀಸ್ ಅಧಿಕಾರಿ ಅಮಾನತು!

• **ಕಾಸರಗೋಡು:** ಕೇರಳದ ಸ್ಥಳೀಯಾಡಳಿತ ಸಚಿವ ಹಾಗೂ ಮುಸ್ಲಿಂಲೀಗ್ ನಾಯಕ ಕೆ.ಎಂ.ಶಾಜಿಯ ವಿರುದ್ಧ ಪೊಲೀಸ್ ಸಿಬ್ಬಂದಿಗೆ ಸಂಬಂಧಿಸಿದ ವಾಟ್ಸಾಪ್ ಗ್ರೂಪಿನಲ್ಲಿ ಸಂದೇಶವೊಂದನ್ನು ಹಾಕಿದ್ದಾಗಿ ಆರೋಪಿಸಿ ವೆಳ್ಳರಿಕುಂಡು ಪೊಲೀಸ್ ಠಾಣೆಯ ನಾಗರಿಕ ಆರಕ್ಷಕ ಅಧಿಕಾರಿಯೊಬ್ಬರನ್ನು ಅಮಾನತುಗೊಳಿಸಲಾದ ಘಟನೆ ನಡೆದಿದೆ.

'ಪೊಲೀಸ್ ಫ್ರೆಂಡ್ಸ್' ಹೆಸರಿನ ವಾಟ್ಸಾಪ್ ಗ್ರೂಪಿನಲ್ಲಿ ಸಚಿವ ಶಾಜಿ ಅವರನ್ನು 'ಕೋಮುವಾದಿ' ಎಂಬುದಾಗಿ ಹೇಳಿದ್ದಾರೆಂದು ಆರೋಪಿಸಿ ನಾಗರಿಕ ಪೊಲೀಸ್ ಅಧಿಕಾರಿ ಸುಜಿತ್ ಅವರನ್ನು ಅಮಾನತುಗೊಳಿಸಲಾಗಿದೆ.ಸಚಿವರ ಕುರಿತು ಅವರು ಹೇಳಿದ್ದಾರೆನ್ನಲಾದ ಸಂದೇಶ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾಗಿ ವಿವಾದ ಸೃಷ್ಟಿಸಿದ್ದು, ಅವರನ್ನೀಗ ಕಾಸರಗೋಡು ಜಿಲ್ಲಾ ಪೊಲೀಸ್ ಮುಖ್ಯಸ್ಥರಾದ ಬಿ.ವಿ.ವಿಜಯ ಭರತ್ ರೆಡ್ಡಿ ಅವರು ಅಮಾನತುಗೊಳಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕೇರಳದ ನೂತನ ಸರಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಂಡಿದ್ದನ್ನು ಉಲ್ಲೇಖಿಸುವ ಮೂಲಕ ಆರಂಭಗೊಂಡ ಪೋಸ್ಟ್‌ನಲ್ಲಿ ಸಚಿವ ಶಾಜಿ ಅವರನ್ನು 'ಕೋಮುವಾದಿ' ಎಂದು ಕರೆಯಲಾಗಿತ್ತು. ಈ ಸಂಬಂಧದ ಸ್ಕ್ರೀನ್‌ಶಾಟ್ ಆನ್‌ಲೈನ್‌ನಲ್ಲಿ ಪ್ರಸಾರಗೊಂಡ ಬಳಿಕ ಟೀಕೆಗಳು ವ್ಯಕ್ತವಾಗಿ, ಪೊಲೀಸ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವವರು ರಾಜಕೀಯ ಕಮೆಂಟ್ ಹಾಕಿದ್ದಾರೆಂದು ಆಕ್ಷೇಪಿಸಿ ಅವರ ವಿರುದ್ಧ ಕ್ರಮಕ್ಕೆ ಒತ್ತಡ ಹೇರಲಾಗಿತ್ತು. ಇದೀಗ ಇದರ ಪರಿಣಾಮ ಪೊಲೀಸ್ ಅಧಿಕಾರಿಯ ಅಮಾನತಾಗಿದೆ.

ಅಲ್ಲದೆ ಜಿಲ್ಲಾ ಪೊಲೀಸ್ ಮುಖ್ಯಸ್ಥರ ಆದೇಶದಂತೆ ಜಿಲ್ಲಾ ಕ್ರೈಮ್ ಬ್ರಾಂಚ್ ಡಿವೈಎಸ್‌ಪಿ ಬಾಲಚಂದ್ರನ್ ಅವರು ಪ್ರಾಥಮಿಕ ತನಿಖೆಯೊಂದನ್ನು ನಡೆಸಿ ವರದಿ ನೀಡಿದ್ದು, ಇದರಂತೆ ಶಿಸ್ತುಕ್ರಮ ಕೈಗೊಳ್ಳಲಾಗಿರುವುದಾಗಿ ಹೇಳಲಾಗಿದೆ.ಶಾಜಿ ಹಿಂದೆ ಅಯಿಕೋಡ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರೆ, ಈ ಬಾರಿ ಮಲಪ್ಪುರಂ ಜಿಲ್ಲೆಯ ವೆಂಗರಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನಾನು ಮುಖ್ಯಮಂತ್ರಿ ಆಗುವುದನ್ನು ಕಾಲವೇ ತೀರ್ಮಾನಿಸುತ್ತದೆ - **ಡಿಕೆ**
- ಅಂದರೆ ಪ್ರಯತ್ನ ಮಾಡಬೇಕು, ಫಲಕ್ಕಾಗಿ ಕಾಯಬೇಕು. ಮಾವಿನ ಗಿಡವನ್ನು ನೆಡಬಹುದು, ಆದರೆ ಮಾವಿನಹಣ್ಣು ಯಾವಾಗ ಆಗುತ್ತೆ ಎಷ್ಟು ಆಗುತ್ತೆ ಎನ್ನುವುದು ನಮ್ಮ ಕೈಯಲ್ಲಿ ಇಲ್ಲ. ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ಎಂಬುದು ಶ್ರೀಕೃಷ್ಣನ ಬೋಧನೆ!

ದಿನ ಭವಿಷ್ಯ

ಮೇಷ
ಕೌಟುಂಬಿಕವಾಗಿ ಹೊಸ ಸಮಸ್ಯೆ ಸಂಭವ. ಸೌಹಾರ್ದತೆಗೆ ಧಕ್ಕೆ ಕಾಪಾಡಿ. ದುಡುಕಿನಿಂದ ಪ್ರತಿಕ್ರಿಯಿಸಬೇಡಿ. ಹಣದ ಕೊರತೆ.

ವೃಷಭ
ಇಲ್ಲದ ವಿಷಯಕ್ಕೆ ಚಿಂತೆ ಮಾಡುವಿರಿ. ಎಲ್ಲ ಸರಿಯಿದ್ದರೂ ಏನೋ ಕೊರತೆಯ ಭಾವ. ಧ್ಯಾನ ನಿಮಗೆ ಸಹಕಾರಿಯಾದೀತು.

ಮಿಥುನ
ನಿಮ್ಮ ವರ್ತನೆಯಿಂದ ಎಲ್ಲರ ಮನ ಗೆಲ್ಲುವಿರಿ. ಪ್ರೀತಿಯಲ್ಲಿ ಯಶಸ್ಸು. ಮಕ್ಕಳಿಂದ ಸಂತೋಷ. ಹೆಚ್ಚುತ್ತಿರುವ ಖರ್ಚು ಚಿಂತೆಗೆ ಕಾರಣವಾದೀತು.

ಕಟಕ
ನಿರಾಳವಾಗಿರಲು ಅವಕಾಶ ಸಿಗದು. ಅನವಶ್ಯ ಚಿಂತೆ. ದೃಢವಾಗಿ ವರ್ತಿಸಿದರೆ ಎಲ್ಲವನ್ನು ನಿಭಾಯಿಸಬಲ್ಲಿರಿ. ಆರೋಗ್ಯ ಸುಸ್ಥಿರ.

ಸಿಂಹ
ಪ್ರತಿಕೂಲ ಪರಿಸ್ಥಿತಿ ಇದ್ದರೂ ಅದನ್ನು ನಿಮ್ಮ ಪರವಾಗಿ ಬದಲಿಸಲು ಯತ್ನಿಸಿ. ಕೌಟುಂಬಿಕ ಭಿನ್ನಾಭಿಪ್ರಾಯ ಸಂಭವ. ಪ್ರಬುದ್ಧವಾಗಿ ವರ್ತಿಸಿ.

ಕನ್ಯಾ
ಗುರಿ ಸಾಧನೆಗೆ ಪೂರಕ ದಿನ. ಸಂಬಂಧದಲ್ಲಿ ಒಡಕು ಮೂಡದಂತೆ ಎಚ್ಚರದಿಂದ ನಡಕೊಳ್ಳಿ. ವೃದ್ಧರು ಆಹಾರದಲ್ಲಿ ಎಚ್ಚರ ವಹಿಸಿ.

ತುಲಾ
ನಿಮ್ಮ ಕಾರ್ಯದಲ್ಲಿ ದಿನವಿಡೀ ವ್ಯಸ್ತ. ಇತರರೂ ತಮ್ಮ ಸಮಸ್ಯೆ ಹಿಡಿದುಕೊಂಡು ನಿಮ್ಮ ಬಳಿ ಬರುತ್ತಾರೆ. ನೆಮ್ಮದಿ, ವಿರಾಮ ದೂರ.

ವೃಶ್ಚಿಕ
ಬಿಡುವಿರದ ದಿನ. ಹೆಚ್ಚು ಹೊಣೆಗಾರಿಕೆ. ಸಂಬಂಧದಲ್ಲಿ ಮೂಡಿದ ಬಿಕ್ಕಟ್ಟು ಬಗೆಹರಿಸಲು ಹೆಚ್ಚು ಸಮಯ ವ್ಯಯ. ಖರೀದಿಯಿಂದ ಖರ್ಚು.

ಧನು
ನಿಮ್ಮ ಬದುಕಲ್ಲಿ ಕೆಲವು ಬದಲಾವಣೆ ಉಂಟಾದೀತು. ಗುಣಾತ್ಮಕ ಪ್ರಗತಿ. ಸಂಬಂಧ ಗಟ್ಟಿಗೊಳ್ಳಲಿದೆ. ದೈಹಿಕ ಶ್ರಮ ಅತಿಯಾಗಿಸಬೇಡಿ.

ಮಕರ
ಹಳೆಯ ಚಿಂತೆ ಮರೆತು ಮುಂದೆ ಸಾಗಿರಿ. ಒತ್ತಡವನ್ನು ನಿಭಾಯಿಸುವ ಕಲೆ ಅರಿಯಿರಿ. ಸಣ್ಣ ವಿಷಯಕ್ಕೆ ದುಡುಕಿನ ವರ್ತನೆ ತೋರದಿರಿ.

ಕುಂಭ
ಕುಟುಂಬ, ಸ್ನೇಹಿತರ ಜತೆ ಆತ್ಮೀಯವಾಗಿ ಕಾಲ ಕಳೆಯುವ ಅವಕಾಶ. ಆದರೂ ಯಾವುದೋ ಕೊರಗು ಮನದೊಳಗೆ ಕಾಡುತ್ತಿರುತ್ತದೆ.

ಮೀನ
ಸಣ್ಣ ವಿಷಯಕ್ಕೂ ಅತಿರೇಕದ ಪ್ರತಿಕ್ರಿಯೆ ತೋರದಿರಿ. ಸಮಾಧಾನದ ನಡೆ ಅವಶ್ಯ. ಇತರರ ಜತೆ ಅನ್ಯೋನ್ಯತೆ ಸಾಧಿಸಿ, ಅದರಿಂದ ಕಾರ್ಯಸಿದ್ಧಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 3,7,2,9

ಜಾಗತಿಕ ಬೆಳವಣಿಗೆಯಿಂದ ಬೆಲೆ ಹೆಚ್ಚಳ: ವಿಜಯೇಂದ್ರ

ಸಿಎಂ ತೈಲ ಸುಂಕ ಇಳಿಸಲಿ: ಬಿವೈವಿ

• **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಹಿಂದೆ ತೈಲ ಬೆಲೆ ಹತ್ತು ರೂಪಾಯಿ ಕಡಿಮೆ ಮಾಡುತ್ತೇನೆ ಎಂದಿದ್ದರು. ಈಗ ರಾಜ್ಯದ ಜನರ ಒಳಿತಿಗಾಗಿ ತೈಲದ ಮೇಲಿನ ತೆರಿಗೆ ಕಡಿಮೆ ಮಾಡಲಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸವಾಲು ಹಾಕಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕೇಂದ್ರದಿಂದ ಮೂರನೇ ಬಾರಿಗೆ ತೈಲ ಬೆಲೆ ಏರಿಕೆ ಆಗಿದೆ. ಜಾಗತಿಕ ಬೆಳವಣಿಗೆಯಿಂದ ಅನಿವಾರ್ಯವಾಗಿ ಕೇಂದ್ರ ಸರ್ಕಾರ ತೈಲ ಬೆಲೆ ಏರಿಸಿದೆ. ಸರ್ಕಾರಕ್ಕೆ ಇಷ್ಟ ಇಲ್ಲದೇ ಇದ್ದರೂ ಕಠಿಣ ನಿರ್ಧಾರ ಕೈಗೊಂಡಿದೆ. ಜಾಗತಿಕ ಸ್ಥಿತಿಗತಿಯನ್ನು ಸಿದ್ದರಾಮಯ್ಯ ಅವರು ಅರ್ಥ ಮಾಡಿಕೊಂಡು ತೈಲದ ಮೇಲಿನ ಹೆಚ್ಚುವರಿ ತೆರಿಗೆಯನ್ನು ಇಳಿಸಲಿ ಎಂದು ಆಗ್ರಹಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ಅವರು ಬಿಜೆಪಿಗೆ ಬುದ್ಧಿ ಹೇಳುವುದು ಬಿಟ್ಟು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಹೆಚ್ಚುವರಿ ತೆರಿಗೆಯನ್ನು ಕಡಿಮೆ ಮಾಡಿ ದೇಶಕ್ಕೆ ಮಾದರಿಯಾಗುವ ಕೆಲಸ ಮಾಡಿಸಲಿ. ಈ ವಿಷಯದಲ್ಲಿ ಅವರು ಮುಖ್ಯಮಂತ್ರಿಯವರಿಗೆ ಬುದ್ಧಿ ಹೇಳಲಿ ಎಂದರು.

ರೈತರ ಕುರಿತು ಕಾಳಜಿಯಿಲ್ಲ: ಆನೇಕಲ್ ಸಮೀಪ ರೈತರ ಫಲವತ್ತಾದ ಜಮೀನನ್ನು ಪಡೆದು ಕ್ರಿಕೆಟ್ ಸ್ಟೇಡಿಯಂ ನಿರ್ಮಿಸುತ್ತಿರುವ ಸಂಬಂಧ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ವಿಜಯೇಂದ್ರ, ಕಾಂಗ್ರೆಸ್ ಸರ್ಕಾರಕ್ಕೆ ರೈತರ ಬಗ್ಗೆ ಆಸಕ್ತಿ ಇದೆ. ಅವರ ಸಮಸ್ಯೆ ತಿಳಿದಿಲ್ಲ, ಬದಲಿಗೆ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿದೆ. ರಾಜ್ಯದಲ್ಲಿ ನೆರೆ ಬಂದಾಗ ಸರ್ಕಾರ ರೈತರ ಪರವಾಗಿ ನಿಲ್ಲಲಿಲ್ಲ, ಬರಗಾಲ ಇದ್ದಾಗಲೂ ಸಹಾಯ ಮಾಡಲಿಲ್ಲ, ಉಸ್ತುವಾರಿ ಸಚಿವರು ಹಾಗೂ ಕ್ಷೇತ್ರದ ಶಾಸಕರು ತಮ್ಮ ಜನರ ನೋವು ಆಲಿಸಲಿಲ್ಲ ಎಂದು ಟೀಕಿಸಿದರು.

ಬೆಂಗಳೂರು ವಿಮಾನನಿಲ್ದಾಣದ ಸಮೀಪ ಸಾವಿರಾರು ಎಕರೆ ಜಾಗವಿದೆ. ಅಲ್ಲೇ ಸ್ಟೇಡಿಯಂ ನಿರ್ಮಿಸಬಹುದಿತ್ತು. ಅದು ಬಿಟ್ಟು ಆನೇಕಲ್‌ನಲ್ಲಿ ಫಲವತ್ತಾದ ಜಮೀನು ಪಡೆದು ರೈತರಿಗೆ ಪದೇ ಪದೇ ತೊಂದರೆ ಕೊಡುತ್ತಿದ್ದಾರೆ. ಅನ್ನದಾತರ ಹಿತಾಸಕ್ತಿ ಕಡೆಗಣಿಸಲು ಅವಕಾಶ ನೀಡುವುದಿಲ್ಲ, ರೈತರ ಪರವಾಗಿ ಬಿಜೆಪಿ ನಿಲ್ಲಲಿದೆ ಎಂದು ಹೇಳಿದರು.



ರಾಜ್ಯಸಭೆ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಚರ್ಚೆ ಆಗಿದೆ. ಒಬ್ಬರಿಗೆ ಅವಕಾಶವಿದೆ. ದೇವೇಗೌಡರನ್ನು ರಾಜ್ಯಸಭೆಗೆ ಕಳಿಸಲು ಬಿಜೆಪಿ ವಿರೋಧಿಸಿಲ್ಲ, ದೇವೇಗೌಡರಿಗೆ ಅವಕಾಶ ನೀಡುವ ನಿರ್ಧಾರ ರಾಷ್ಟ್ರೀಯ ನಾಯಕರದ್ದು. ಈ ಸಂಬಂಧ ಯಾವುದೇ ಸೂಚನೆ ಸಿಕ್ಕಿಲ್ಲ.
■ **ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

ಅಮೆರಿಕ-ಭಾರತ ಬಂಧ ವೃದ್ಧಿ ಯತ್ನ

ಪುಟ ೧➡ ಅಮೆರಿಕದ ವಿದೇಶಾಂಗ ಇಲಾಖೆ ಬಿಡುಗಡೆ ಮಾಡಿದ ಮಾಹಿತಿ ಪ್ರಕಾರ, ಎರಡೂ ರಾಷ್ಟ್ರಗಳು ವ್ಯಾಪಾರ, ರಕ್ಷಣಾ ಸಹಕಾರವನ್ನು ಮತ್ತಷ್ಟು ಗಟ್ಟಿಗೊಳಿಸುವುದರ ಜತೆಗೆ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಯೋಗ ವೇಗಗೊಳಿಸಲು ಒಪ್ಪಿಕೊಂಡಿವೆ.

ಕ್ವಾಡ್ ಸಭೆಗೆ ಸಜ್ಜು: ಭಾರತದಲ್ಲಿ ನಡೆಯಲಿರುವ ಕ್ವಾಡ್ ವಿದೇಶಾಂಗ ಸಚಿವರ ಸಭೆಯನ್ನು ಯಶಸ್ವಿಯಾಗಿ ಆಯೋಜಿಸುತ್ತಿರುವುದಕ್ಕೆ ರೂಬಿಯೊ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇಂಡೋ-ಪೆಸಿಫಿಕ್ ಪ್ರದೇಶವನ್ನು ಮುಕ್ತ ಮತ್ತು ಸಮತೋಲನಯುತವಾಗಿಡಲು ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ಸಹಕಾರ ಮುಂದುವರಿಸಲಿದೆ ಎಂದು ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾ ಸ್ಥಿತಿ ಕುರಿತು ಚರ್ಚೆ

ಪುಟ ೧➡ ಮಾರುಕಟ್ಟೆಯನ್ನು ಇರಾನ್ ಒತ್ತೆಯಾಳಾಗಿಸಲು ಅಮೆರಿಕ ಅವಕಾಶ ನೀಡುವುದಿಲ್ಲ ಎಂದು ರೂಬಿಯೊ ಸ್ಪಷ್ಟಪಡಿಸಿದ್ದು, ಅಮೆರಿಕದ ಇಂಧನ ಉತ್ಪನ್ನಗಳು ಭಾರತದ ಇಂಧನ ಮೂಲಗಳನ್ನು ವೈವಿಧ್ಯಗೊಳಿಸಲು ನೆರವಾಗಲಿವೆ ಎಂದಿದ್ದಾರೆ.

ಮದರ್ ಹೌಸ್‌ಗೆ ಭೇಟಿ

ಇದಕ್ಕೂ ಮುನ್ನ ಕೋಲ್ಕತ್ತಾಗೆ ಆಗಮಿಸಿದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಮತ್ತು ಆ ದೇಶದ ಉನ್ನತ ರಾಜತಾಂತ್ರಿಕರು ಸೇಂಟ್ ತೆರೇಸಾ ಅವರ ಮಿಷನರೀಸ್ ಆಫ್ ಚಾರಿಟಿಯ ಪ್ರಧಾನ ಕಚೇರಿಯಾದ ಮದರ್ ಹೌಸ್‌ಗೆ ಭೇಟಿ ನೀಡಿದರು. ಬಳಿಕ ಅವರು ಹೊಸದಿಲ್ಲಿಗೆ ತೆರಳಿದರು.

ಮಿಷನ್ 500 ಗುರಿಗೆ ವೇಗ

2030ರೊಳಗೆ ದ್ವಿಪಕ್ಷೀಯ ವ್ಯಾಪಾರವನ್ನು ದ್ವಿಗುಣಗೊಳಿಸುವ ಮಿಷನ್ 500 ಗುರಿ ಸಾಧನೆಗೆ ಮಹತ್ವದ ಹೂಡಿಕೆಗಳ ಬಗ್ಗೆ ಉಭಯ ನಾಯಕರು ಚರ್ಚೆ ನಡೆಸಿದರು ಎಂದು ಅಮೆರಿಕದ ವಿದೇಶಾಂಗ ಇಲಾಖೆ ತಿಳಿಸಿದೆ.

ಅಮೆರಿಕಗೆ ಭೇಟಿ ನೀಡುವಂತೆ ಮೋದಿಗೆ ಟ್ರಂಪ್ ಆಹ್ವಾನ

ಅಮೆರಿಕಗೆ ಭೇಟಿ ನೀಡುವಂತೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಿ ಮೋದಿ ಅವರನ್ನು ಆಮಂತ್ರಿಸಿದ್ದಾರೆ. ಈ ಕುರಿತು ಶನಿವಾರ ಭಾರತಕ್ಕೆ ಭೇಟಿ ನೀಡಿರುವ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಪ್ರಸ್ತುತ ವಿಚಾರವನ್ನು ಪ್ರಧಾನಿ ಮೋದಿ ಅವರಿಗೆ ಹೇಳಿದ್ದಾರೆ. ದಿಲ್ಲಿಗೆ ಬಂದಿಳಿದ ಬೆನ್ನಲ್ಲೇ ರುಬಿಯೊ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿದ್ದು, ರಕ್ಷಣೆ, ವ್ಯಾಪಾರ, ಇಂಧನ ಮತ್ತು ತಂತ್ರಜ್ಞಾನ ರಂಗಗಳಲ್ಲಿ ಭಾರತ-ಅಮೆರಿಕ ದ್ವಿಪಕ್ಷೀಯ ಬಾಂಧವ್ಯಗಳ ಕುರಿತು ಚರ್ಚಿಸಿದ್ದಾರೆ.

ಎಸ್ಸಿ, ಎಸ್ಟಿ ಮೀಸಲಾತಿಯಲ್ಲಿ ಸರ್ಕಾರಗಳ ಚೆಲ್ಲಾಟ: ಉಗ್ರಪ್ಪ

• **ವಿಜಯನಗರ:** ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಹೆಚ್ಚಿಸಿ, ತಟ್ಟೆಗೆ ಅನ್ನ ಇಟ್ಟಂತೆ ಮಾಡಿದ್ದ ಸರ್ಕಾರಗಳು, ಈಗ ಅದಕ್ಕೆ ಕೋರ್ಟ್ ತಡೆಯಾಜ್ಞೆ (ಸ್ಟೇ) ಬರುವಂತೆ ಮಾಡಿ ನಮ್ಮ ಬದುಕಿನೊಂದಿಗೆ ಆಟವಾಡುತ್ತಿವೆ ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಬಸವರಾಜ್ ಬೊಮ್ಮಾಯಿ ಅವರು ಸಿಎಂ ಆಗಿದ್ದಾಗ ನಾಗ ಮೋಹನ್ ದಾಸ್ ಸಮಿತಿ ವರದಿ ಆಧರಿಸಿ ಮೀಸಲಾತಿ ಹೆಚ್ಚಿಸಲಾಯಿತು. ಇದನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಲು 2023ರ ಕೇಂದ್ರಕ್ಕೆ ಪತ್ರ ಬರೆಯಲಾಗಿತ್ತು ಎಂದರು.

ವಿಬಿ-ಜಿ ರಾಮ್‌ಜಿ ಜು.1ರಿಂದ ಜಾರಿ

ಪುಟ ೧➡ **ವಿಕಸಿತ ಭಾರತಕ್ಕಾಗಿ ಬದಲಾವಣೆ:** ವಿಕಸಿತ ಭಾರತ 2047 ದೃಷ್ಟಿಕೋನಕ್ಕೆ ಹೊಂದಿಕೊಳ್ಳುವಂತೆ ಗ್ರಾಮೀಣ ಅಭಿವೃದ್ಧಿಗೆ ಹೊಸ ತಲೆಮಾರಿನ ರೂಪರೇಷೆಯಾಗಿ ಈ ಕಾಯ್ದೆ ರೂಪಿಸಲಾಗಿದೆ. ಉದ್ಯೋಗ ಖಾತರಿ ಅವಧಿಯನ್ನು 100 ದಿನಗಳಿಂದ 125 ದಿನಗಳಿಗೆ ಹೆಚ್ಚಿಸಲಾಗಿದ್ದು, ಗ್ರಾಮೀಣ ಮೂಲಸೌಕರ್ಯ ನಿರ್ಮಾಣ, ಹವಾಮಾನ ಸಹಿಷ್ಣುತೆ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

ಮಾರ್ಗದರ್ಶಕ ಸಮಿತಿ ರಚನೆ: ಹೊಸ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಮಟ್ಟದ ಮಾರ್ಗದರ್ಶಕ ಸಮಿತಿ ರಚನೆಯಾಗಲಿದ್ದು, ಯೋಜನೆ ಅನುಷ್ಠಾನ, ಹಣಕಾಸು ಹಂಚಿಕೆ, ತಂತ್ರಜ್ಞಾನ ಆಧಾರಿತ ಮೇಲ್ವಿಚಾರಣೆ ಮತ್ತು ವಿವಿಧ ಇಲಾಖೆಗಳ ಸಮನ್ವಯಕ್ಕೆ ಮಾರ್ಗದರ್ಶನ ನೀಡಲಿದೆ. ಈ ಸಮಿತಿಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ, ನೀತಿ ಆಯೋಗ, ವಿವಿಧ ಕೇಂದ್ರ ಸಚಿವಾಲಯಗಳು, ರಾಜ್ಯ ಸರ್ಕಾರಗಳು ಹಾಗೂ ತಾಂತ್ರಿಕ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ತಂತ್ರಜ್ಞಾನ ಆಧರಿತ: ದೂರು ಪರಿಹಾರ ವ್ಯವಸ್ಥೆಯನ್ನು ಸಂಪೂರ್ಣ ತಂತ್ರಜ್ಞಾನ ಆಧಾರಿತವಾಗಿ ರೂಪಿಸುವ ಉದ್ದೇಶವಿದ್ದು, ನೋಂದಣಿ, ಮೇಲ್ಮನವಿ ಅಪೀಲಾತ್ಮಕ ವ್ಯವಸ್ಥೆ ಹಾಗೂ ಮೇಲ್ವಿಚಾರಣೆಗೆ ಡಿಜಿಟಲ್ ಮೂಲಸೌಕರ್ಯ ಬಳಸಲಾಗುತ್ತದೆ.

ವೇತನ ಮತ್ತು ನಿರುದ್ಯೋಗ ಭತ್ಯೆಯನ್ನು ನೇರ ಲಾಭ ವರ್ಗಾವಣೆ (ಡಿಬಿಟಿ) ಮೂಲಕವೇ ಪಾವತಿಸಲಾಗುವುದು. ಕೆಲಸಕ್ಕೆ ಬೇಡಿಕೆ ಬಂದ 15 ದಿನಗಳೊಳಗೆ ಉದ್ಯೋಗ ಒದಗಿಸಬೇಕು. ವಿಫಲವಾದರೆ ನಿರುದ್ಯೋಗ ಭತ್ಯೆ ನೀಡಬೇಕಾಗುತ್ತದೆ ಎಂದು ಕರಡು ನಿಯಮಗಳಲ್ಲಿ ಸ್ಪಷ್ಟಪಡಿಸಲಾಗಿದೆ.

ಸದ್ಯಕ್ಕೆ ಹಳೆಯ ಕಾರ್ಡ್‌ಗಳೇ ಮಾನ್ಯ

ಪುಟ ೧➡ ಕರಡು ನಿಯಮಗಳ ಕುರಿತು ಆಕ್ಷೇಪಣೆ ಹಾಗೂ ಸಲಹೆಗಳನ್ನು ಜೂನ್ 21ರವರೆಗೆ ಸಲ್ಲಿಸಲು ಅವಕಾಶ ನೀಡಲಾಗಿದ್ದು, ಬಳಿಕ ಅಂತಿಮ ನಿಯಮಾವಳಿ ಪ್ರಕಟವಾಗಲಿದೆ.

ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳ

ಪುಟ ೧➡ ನೂತನ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳ ಅಧಿಸೂಚನೆಯು ಖಾಸಗಿ ಶಾಲೆ- ಕಾಲೇಜು ಬೋಧಕೇತರ ಸಿಬ್ಬಂದಿ, ಇ-ಕಾಮರ್ಸ್ ವಲಯದ ನೌಕರರು ಮತ್ತು ಕೊರಿಯರ್ ಸಂಸ್ಥೆಗಳ ನೌಕರರು ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ದುಡಿಯುವ ಸಿಬ್ಬಂದಿಗೂ ಲಾಭ ಮಾಡಿಕೊಟ್ಟಿದೆ. ಒಟ್ಟಾರೆಯಾಗಿ ಕರ್ನಾಟಕದಲ್ಲಿನ 81 ಅನುಸೂಚಿತ ಉದ್ಯೋಗಗಳಲ್ಲಿ ದುಡಿಯುವ ಶ್ರಮಿಕರಿಗೆ ಅನುಕೂಲವಾಗಲಿದೆ. ಕನಿಷ್ಠ ವೇತನ ಪರಿಷ್ಕರಣೆ ಮಾಡಬೇಕು ಎಂಬುದು ಬಹುದಿನಗಳ ಬೇಡಿಕೆಯಾಗಿತ್ತು.

ವಿವಿಧ ಸಂಘಟನೆಗಳು, ಕಾರ್ಮಿಕರ ಒಕ್ಕೂಟಗಳು ಇದಕ್ಕಾಗಿ ಬೇಡಿಕೆ ಇಟ್ಟಿದ್ದವು. ಇದೀಗ ಕಾರ್ಮಿಕ ಇಲಾಖೆ ಸ್ಪಂದಿಸಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಜೀವನ ನಡೆಸಲು ಕಷ್ಟಪಡುತ್ತಿದ್ದ ಕಾರ್ಮಿಕ ವಲಯಕ್ಕೆ ಈ ಕನಿಷ್ಠ ವೇತನ ಪರಿಷ್ಕರಣೆಯು ದೊಡ್ಡ ಮಟ್ಟದ ಅನುಕೂಲ ಮಾಡಿಕೊಡಲಿದೆ. ಪರಿಷ್ಕೃತ ಕನಿಷ್ಠ ವೇತನದ ಕರಡು ಅಧಿಸೂಚನೆಯನ್ನು ಕಳೆದ ವರ್ಷದ ಏಪ್ರಿಲ್ 11ರಂದು ಹೊರಡಿಸಲಾಗಿತ್ತು. 2016-2017ರಲ್ಲಿ ಜಾರಿಗೆ ಬಂದ ಕೊನೆಯ ಪರಿಷ್ಕರಣೆಯ ಒಂದು ದಶಕದ ನಂತರ ಈ ಪರಿಷ್ಕರಣೆ ಜಾರಿಗೆ ಬಂದಿದೆ. ಕಾರ್ಮಿಕ ಸಂಘಗಳು ಕನಿಷ್ಠ ವೇತನ ಅಧಿಸೂಚನೆ ಹೊರಡಿಸಲು ಒತ್ತಾಯಿಸುತ್ತಿದ್ದವು. ಆದರೆ ಕೈಗಾರಿಕೆಗಳು, ವಿಶೇಷವಾಗಿ ಎಂಎಸ್‌ಎಂಇ ವಲಯದಿಂದ ವಿರೋಧ ವ್ಯಕ್ತವಾಗಿತ್ತು.

ಇಎಸ್‌ಐ ಮತ್ತು ಪಿಎಫ್‌ಗಳಿಗೆ ವೇತನ ಕಡಿತ ಮಾಡಿದ ನಂತರ ಕಾರ್ಮಿಕರಿಗೆ ಕಡಿಮೆ ವೇತನ ಉಳಿಯುತ್ತಿತ್ತು. ಕೆಲವರು ಬಿಪಿಎಲ್ ವ್ಯಾಪ್ತಿಯಿಂದಲೂ ಹೊರಗಿದ್ದರು. ಅಂತಹವರಿಗೆಲ್ಲ ಈ ಕನಿಷ್ಠ ವೇತನ ಹೆಚ್ಚಳದಿಂದ ಸಹಾಯವಾಗಲಿದೆ. ಇದೊಂದು ಕ್ರಾಂತಿಕಾರಕ ಕ್ರಮವೆಂದೇ ಹೇಳಬಹುದು. ಹೊಸ ಕನಿಷ್ಠ ವೇತನ ಜಾರಿಯಿಂದ ರಾಜ್ಯದಲ್ಲಿನ ಸಾಕಷ್ಟು ಕಾರ್ಮಿಕರಿಗೆ ಅನುಕೂಲವಾಗಲಿದೆ.
■ **ಸಂತೋಷ್ ಎಸ್. ಲಾಡ್, ಕಾರ್ಮಿಕ ಸಚಿವ**

ಕನಿಷ್ಠ ವೇತನ ಹೆಚ್ಚಿಸಿದ ದೇಶದ 3ನೇ ರಾಜ್ಯ: ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳದ ಅಧಿಸೂಚನೆಯನ್ನು ಹೊರಡಿಸಿದ ದೇಶದ ಮೂರನೇ ರಾಜ್ಯ ಎಂಬ ಕೀರ್ತಿಗೆ ಕರ್ನಾಟಕ ಈಗ ಪಾತ್ರವಾಗಿದೆ. ಈಗಾಗಲೇ ಉತ್ತರ ಪ್ರದೇಶ ಮತ್ತು ಹರಿಯಾಣದಲ್ಲಿ ಈ ಸಂಬಂಧ ಅಧಿಸೂಚನೆ ಹೊರಡಿಸಲಾಗಿದೆ. ಈಗಿನ ಪ್ರಸ್ತುತ ಪರಿಷ್ಕರಣೆಯು 1991ರ ರೆಪ್ಟಕೋಸ್ ಬ್ರೆಟ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನಿಗದಿಪಡಿಸಿರುವ ಮಾರ್ಗಸೂಚಿಗಳ ಪ್ರಕಾರವೇ ಏರಿಕೆ ಮಾಡಲಾಗಿದೆ. ಮನೆಗಳಲ್ಲಿ ದಿನನಿತ್ಯದ ವೆಚ್ಚದ ಲೆಕ್ಕಾಚಾರದ ಮೇಲೆ ಇದನ್ನು ಜಾರಿ ಮಾಡಲಾಗಿದೆ.

ಮುಸ್ಲಿಂ ಲೀಗ್ ಆಗುತ್ತಿರುವ ಕಾಂಗ್ರೆಸ್: ಜೋಶಿ

• **ಹುಬ್ಬಳ್ಳಿ:** ಮುಸ್ಲಿಂ ಸಮುದಾಯ ಓಲೈಕೆಗೆ ಕಾಂಗ್ರೆಸ್ ರಾಜ್ಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ, ಮತಾಂಧ ಶಕ್ತಿಗಳ ಮೇಲಿನ ಪ್ರಕರಣ ಹಿಂಪಡೆಯುವುದು, ವಿಶೇಷ ಅನುದಾನ ಬಿಡುಗಡೆ ಮಾಡುವ ಮೂಲಕ ತುಷ್ಟೀಕರಣ ಮಾಡುತ್ತಿದೆ. ಕಾಂಗ್ರೆಸ್ ಈಗ ಸ್ವಾತಂತ್ರ್ಯೋತ್ತರ, ಆಧುನಿಕ ಮುಸ್ಲಿಂ ಲೀಗ್ ಆಗಿ ಪರಿವರ್ತನೆ ಆಗುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕಿಡಿಕಾರಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್ ಐ ಆರ್ ಮೂಲಕ ಮತದಾರರ ಪಟ್ಟಿಯನ್ನು ಶುದ್ಧೀಕರಿಸಿದ್ದರೆ ಪಶ್ಚಿಮ ಬಂಗಾಳದಲ್ಲಿ 90 ಲಕ್ಷ ಮಂದಿ ಹೊರಗೆ ಹೋಗುತ್ತಿರಲಿಲ್ಲ, ಬಾಂಗ್ಲಾ ನುಸುಳುಕೋರರು ದೇಶದ್ರೋಹ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿರುವುದು, ಪೊಲೀಸರು ಅವರನ್ನು ಬಂಧಿಸಿ ಗಡಿಪಾರು ಮಾಡುತ್ತಿರುವುದು ಕಾಂಗ್ರೆಸ್‌ಗೆ ಗೊತ್ತಿಲ್ಲವೇ? ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಎಸ್ ಐ ಆರ್ ವಿರೋಧಿಸುವ ಕಾಂಗ್ರೆಸ್, ಕೇರಳದಲ್ಲಿ ಎಸ್‌ಐಆರ್ ಬೆಂಬಲಿಸಿ, ತಮಿಳುನಾಡಿನಲ್ಲಿ ಆ ಕುರಿತು ಯಾವುದೇ ಆಕ್ಷೇಪ ವ್ಯಕ್ತಪಡಿಸಿಲ್ಲ, ಅದಕ್ಕೆ ನಿರ್ದಿಷ್ಟ ನೀತಿಯೇ ಇಲ್ಲವಾಗಿದ್ದು, ಭೌತಿಕವಾಗಿ ದಿವಾಳಿಯಾಗಿದೆ ಎಂದು ಹೇಳಿದರು.

ಸಭಾಭವನ ಲಾಭಾಂಶ ಶಿಕ್ಷಣಕ್ಕೆ ವಿನಿಯೋಗ

ಪುಟ ೧➡ ಸಾಮಾಜಿಕ ಬದ್ಧತೆಯೇ ನಮ್ಮ ಧ್ಯೇಯ. ಪಾಲೆಮಾರ್ ಕನ್ವೆನ್ಷನ್ ಸೆಂಟರ್ ವಿಕಾಸ್ ಎಜುಕೇಷನ್ ಟ್ರಸ್ಟ್‌ನಲ್ಲಿ ಕಾರ್ಯ ನಿರ್ವಹಿಸಲಿದೆ. ಈ ಮೂಲಕ ವಿದ್ಯೆಗೆ ಪ್ರೋತ್ಸಾಹ ನೀಡಲಾಗುವುದು. ಹಿಂದಿನಿಂದಲೂ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲಾಗುತ್ತಿದ್ದು, ಅದನ್ನು ಮುಂದುವರಿಸಲಾಗುವುದು. ನೂತನ ಸಭಾಭವನದಲ್ಲಿ ಹೆಚ್ಚು ಹೆಚ್ಚು ಕಾರ್ಯಕ್ರಮಗಳು ನಡೆದರೆ ಅದರ ಲಾಭಾಂಶ ಸಮಾಜಕ್ಕೇ ವಾಪಸು ಸಿಗಲಿದೆ ಎಂದವರು ಹೇಳಿದರು. ಕರಾವಳಿಯ ಸಾಂಸ್ಕೃತಿಕ ಶ್ರೀಮಂತಿಕೆಗೆ ಒತ್ತು ನೀಡುವುದು ಮತ್ತು ಇಲ್ಲಿನ ಜನರಿಗೆ ಸುಲಭವಾಗಿ ಕೈಗೆಟಕುವ ದರದಲ್ಲಿ ಅತ್ಯುನ್ನತ ಸೌಲಭ್ಯಗಳ ಸಭಾಂಗಣಗಳನ್ನು ಒದಗಿಸುವುದು ನಮ್ಮ ಮೂಲ ಉದ್ದೇಶವಾಗಿದೆ. ಜನರ ಪ್ರೀತಿ, ವಿಶ್ವಾಸದಿಂದ ಈ ಕಾರ್ಯ ಸಾಧನೆ ಆಗಿದೆ ಎಂದು ಪಾಲೆಮಾರ್ ಹೇಳಿದರು. ಈ ಸಭಾಭವನಗಳು ವಿವಾಹ ಕಾರ್ಯಕ್ರಮಗಳು, ಸಾಮೂಹಿಕ ವಿವಾಹಗಳು, ಧಾರ್ಮಿಕ-ಸಾಂಸ್ಕೃತಿಕ ಕಾರ್ಯಕ್ರಮಗಳು, ಉದ್ಯೋಗ ಮೇಳ ಗಳು, ವಸ್ತು ಪ್ರದರ್ಶನಗಳು, ಸಾರ್ವಜನಿಕ ಕಾರ್ಯಕ್ರಮಗಳು ಹಾಗೂ ಮಹಿಳಾ ಸಬಲೀಕರಣದಂತಹ ಸಮಾಜಮುಖಿ ಚಟುವಟಿಕೆಗಳಿಗೆ ಮುಕ್ತವಾಗಿರಲಿವೆ ಎಂದು ಕೃಷ್ಣ ಜೆ. ಪಾಲೆಮಾರ್ ತಿಳಿಸಿದರು.

ಜೈಲಿನಲ್ಲಿ ಯಾವುದೇ ಘಟನೆ ನಡೆದಿಲ್ಲ: ಸಚಿವ

• **ಬೆಂಗಳೂರು:** ಜೈಲಿನಲ್ಲಿ ದರ್ಶನ್ ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂಬ ವದಂತಿ ಹರಡಿದ ವಿಚಾರ ತಿಳಿದ ತಕ್ಷಣವೇ ನಾನು ಕಾರಾಗೃಹದ ಅಧಿಕಾರಿಗಳಿಂದ ಮೌಖಿಕವಾಗಿ ಮಾಹಿತಿ ಪಡೆದಿದ್ದೇನೆ. ಅಂತಹ ಯಾವುದೇ ಘಟನೆ ನಡೆದಿಲ್ಲ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಸ್ಪಷ್ಟಪಡಿಸಿದರು. ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದರ್ಶನ್ ಅವರು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಎನ್ನುವುದು ಸತ್ಯಕ್ಕೆ ದೂರ. ಆ ರೀತಿ ಯಾವ ಘಟನೆಗಳು ನಡೆದಿಲ್ಲ ಎಂದರು. ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಕುರ್ಬಾನಿಗೆ ರಕ್ಷಣೆ ನೀಡುವಂತೆ ವಕ್ಫ್ ಬೋರ್ಡ್ ಪತ್ರ ಬರೆದಿರುವ ಕುರಿತು ಮಾತನಾಡಿದ ಸಚಿವರು, ದೊಡ್ಡ ಹಬ್ಬಗಳ ಸಂದರ್ಭಗಳಲ್ಲಿ ಪೊಲೀಸರು ಹೆಚ್ಚುವರಿ ಎಚ್ಚರಿಕೆ ವಹಿಸುವುದು ಸಾಮಾನ್ಯ. ಅಗತ್ಯವಿದ್ದರೆ ಹೆಚ್ಚಿನ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ವಕ್ಫ್ ಬೋರ್ಡ್‌ಗೆ ಯಾವ ಆತಂಕವಿದೆಯೋ ಗೊತ್ತಿಲ್ಲ, ಅವರು ಪತ್ರ ಬರೆದಿದ್ದರೆ, ಅದರ ಪ್ರಕಾರ ಪೊಲೀಸರು ಸ್ಪಂದಿಸುತ್ತಾರೆ ಎಂದು ತಿಳಿಸಿದರು. ಆಳಂದ ಲಾಡ್ಲೆ ಮಶಾಕ್ ದರ್ಗಾ ಪ್ರಕರಣಗಳನ್ನು ವಾಪಸ್ ಪಡೆಯುವ ವಿಚಾರಕ್ಕೆ ಬಿಜೆಪಿ ಹಾಗೂ ಹಿಂದುಪರ ಸಂಘಟನೆಗಳು ವಿರೋಧ ವ್ಯಕ್ತಪಡಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ವಿರೋಧ ಮಾಡುವುದು ಅವರಿಗೆ ಬಿಟ್ಟ ವಿಚಾರ. ಎಲ್ಲರನ್ನೂ ಸಮಾನವಾಗಿ ಕಾಣಬೇಕು ಎಂದು ಸಂವಿಧಾನ ಹೇಳುತ್ತದೆ. ಕಾಂಗ್ರೆಸ್ ಪಕ್ಷವು ಅದನ್ನೇ ಅನುಸರಿಸುತ್ತಿದೆ ಎಂದು ಹೇಳಿದರು.

ಚಿನ್ನಸ್ವಾಮಿಗೆ ಪರ್ಯಾಯ

ಪುಟ ೧➡ ಇದು ಇನ್ನೆರಡು ವರ್ಷದಲ್ಲಿ ಪೂರ್ಣಗೊಳ್ಳಲಿದ್ದು, ಭವಿಷ್ಯದಲ್ಲಿ ಎಂ.ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಪರ್ಯಾಯ ಆಯ್ಕೆಯಾಗಲಿದೆ ಎಂದರು. ಕ್ರೀಡಾಂಗಣ ನಿರ್ಮಾಣದಿಂದ ಈ ಭಾಗದಲ್ಲಿ ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕ ಅಭಿವೃದ್ಧಿಗೆ ಹೆಚ್ಚು ಸಹಕಾರಿಯಾಗಲಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಸೂರು ಇಲ್ಲದ ಬಡವರಿಗೆ ಕಡಿಮೆ ದರದಲ್ಲಿ ಸೂರು ಕಲ್ಪಿಸುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಸಾವಿರಾರು ನಿವೇಶನ ಹಾಗೂ ಮನೆಗಳನ್ನು ನಿರ್ಮಾಣ ಮಾಡಿ ಕಡಿಮೆ ಬೆಲೆಗೆ ಆರ್ಥಿಕವಾಗಿ ಹಿಂದುಳಿದ ಬಡವರಿಗೆ ಹಂಚಿಕೆ ಮಾಡಲಾಗಿದೆ. ಈ ಕ್ರೀಡಾಂಗಣವನ್ನು ಗೃಹ ಮಂಡಳಿ ವತಿಯಿಂದ ನಿರ್ಮಾಣ ಮಾಡಲಾಗುತ್ತಿದೆ. ಇನ್ನು ಕೆಹೆಚ್ ಬಿ ಬಡಾವಣೆಯಲ್ಲಿ ಮೂಲೆ ನಿವೇಶನಗಳನ್ನು ಹರಾಜು ಹಾಕುವ ಮೂಲಕ ಸುಮಾರು 20 ಸಾವಿರ ಕೋಟಿ ಹಣ ಮಂಡಳಿಗೆ ಬರುತ್ತದೆ ಈ ಮೂಲಕ ಮಂಡಳಿಯ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ ಎಂದರು. ಈ ಹಿಂದೆ ಸರ್ಕಾರ ಫಲಾನುಭವಿಗಳಿಗೆ 5 ಲಕ್ಷ ರೂ.ಗಳಿಗೆ ಮನೆ ನೀಡುತ್ತಿತ್ತು. ಇಷ್ಟು ಹಣ ಪಾವತಿಸಲು ಬಡವರಿಗೆ ಸಾಧ್ಯವಿಲ್ಲ ಎಂದು ಭಾವಿಸಿ ನಮ್ಮ ಕಾಂಗ್ರೆಸ್ ಸರ್ಕಾರ ಒಂದು ಲಕ್ಷ ರೂ. ಮಾತ್ರ ಪಡೆದು ಫಲಾನುಭವಿಗಳಿಗೆ ಮನೆ ನೀಡುತ್ತಿದೆ. ಉಳಿದ ಹಣವನ್ನು ಸರ್ಕಾರವೇ ಭರಿಸುತ್ತದೆ. ನಮ್ಮ ಸರ್ಕಾರವು ಈವರೆಗೆ ಒಂದು ಲಕ್ಷ ಮನೆಗಳನ್ನು ಬಡವರಿಗೆ ನೀಡಿದೆ ಎಂದರು. ವಡೇರ ಮಂಚನಹಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿಗೆ 9 ಕೋಟಿ ಹಣ ಮಂಜೂರು ಮಾಡಿ ಕೆಲಸ ಪ್ರಾರಂಭಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

2 ಸಾವಿರ ಕೋಟಿ ವೆಚ್ಚದಲ್ಲಿ ಕ್ರೀಡಾನಗರ: ಡಿಕೆಶಿ

ಪುಟ ೧➡ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅನೇಕ ಜನಪರ ಯೋಜನೆಗಳನ್ನು ಜಾರಿ ಮಾಡಿ ಜನರ ಆಶೋತ್ತರಗಳಿಗೆ ಸ್ಪಂದಿಸಿದೆ. ಐದು ಗ್ಯಾರಂಟಿ ಯೋಜನೆಗಳ ಜತೆ ಭೂ ಗ್ಯಾರಂಟಿಯನ್ನೂ ನೀಡಲಾಗಿದೆ ಎಂದು ಹೇಳಿದರು.



ಶಾಲೆ ನಿರ್ಮಾಣಕ್ಕೆ 10 ಎಕರೆ: ಜಮೀರ್

ಪುಟ ೧➡ **ಈ ಬಡಾವಣೆಯ 2500 ನಿವೇಶನಗಳಿಗೆ ಸುಮಾರು 16 ಸಾವಿರ ಅರ್ಜಿಗಳು ಬಂದಿವೆ. ಅಭಿವೃದ್ಧಿಪಡಿಸಿದ 4 ಸಾವಿರ ನಿವೇಶನಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಲಾಗಿದೆ. ಕೆಎಚ್‌ಬಿ ನಿರ್ಮಿಸಿದ ಈ ಬಡಾವಣೆಯ ನಿವೇಶನಗಳಿಗೆ ಹೆಚ್ಚು ಬೇಡಿಕೆಯಿದ್ದು, ಸ್ಥಳೀಯರಿಗೆ ಶೇ.50 ನಿವೇಶನ ನೀಡಬೇಕು ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಹಾಗೂ ಶಾಸಕ ಬಿ.ಶಿವಣ್ಣ ಮನವಿ ಮಾಡಿದ್ದು, ಮುಂದಿನ ದಿನಗಳಲ್ಲಿ ಇದನ್ನು ಪರಿಗಣಿಸಲಾಗುವುದು ಎಂದರು.**

ನಾಲ್ಕೂ ದಿಕ್ಕಲ್ಲಿ ಕ್ರೀಡಾಂಗಣ- ಡಿ.ಕೆ.ಸುರೇಶ್ ಮನವಿ

ಮಾಜಿ ಸಂಸದ ಡಿ.ಕೆ. ಸುರೇಶ್ ಮಾತನಾಡಿ, ಬೆಂಗಳೂರು ನಗರ ಜಿಲ್ಲೆ ಅರ್ಧಭಾಗ ಆನೇಕಲ್ ತಾಲ್ಲೂಕಿಗೆ ಸೇರಿದೆ. ಈ ಭಾಗದಲ್ಲಿ ಕ್ರೀಡಾಂಗಣ ಮಾಡಬೇಕೆಂದು ಮನವಿ ಮಾಡಿದ್ದೆವು. ಇದರೊಂದಿಗೆ ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲಿಯೂ ಕ್ರೀಡಾಂಗಣ ನಿರ್ಮಾಣ ಮಾಡಬೇಕೆಂಬುದು ನನ್ನ ಒತ್ತಾಯವಾಗಿದೆ ಎಂದು ಹೇಳಿದರು. ಶಾಸಕ ಬಿ.ಶಿವಣ್ಣ ಮಾತನಾಡಿ, ನಮ್ಮ ಕ್ಷೇತ್ರದಲ್ಲಿ ಸಾವಿರಾರು ಎಕರೆ ಭೂಮಿಯನ್ನು ಗೃಹ ಮಂಡಳಿಗೆ ನೀಡಲಾಗಿದ್ದು, ಈ ಕ್ರೀಡಾಂಗಣ ನಿರ್ಮಾಣದಿಂದ ಅನೇಕ ಅಭಿವೃದ್ಧಿ ಕೆಲಸಗಳು ನಡೆಯುತ್ತವೆ ಎಂದರು. ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಶಾಸಕರಾದ ಜಯಚಂದ್ರ, ಕೃಷ್ಣಪ್ಪ, ಮಂಡಳಿಯ ಅಧ್ಯಕ್ಷ ಶಿವಲಿಂಗೇಗೌಡ, ಮಾಜಿ ಸಚಿವ ಎಚ್.ಎಂ.ರೇವಣ್ಣ, ವಿಧಾನಪರಿಷತ್ ಮಾಜಿ ಸದಸ್ಯರಾದ ರಾಮೋಜಿಗೌಡ, ಮಾಜಿ ಸದಸ್ಯರಾದ ವೇಣುಗೋಪಾಲ್, ಮನೋಹರ್, ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮೋಹನ್ ರಾಜು, ಆಯುಕ್ತ ಕೆ.ಎ.ದಯಾನಂದ, ಜಿಲ್ಲಾಧಿಕಾರಿ ಜಗದೀಶ್, ಪೊಲೀಸ್ ಪರಿಷ್ಕಾಧಿಕಾರಿ ಚಂದ್ರಕಾಂತ್ ಮತ್ತಿತರರು ಭಾಗವಹಿಸಿದ್ದರು.



ಏನೇನಿರಲಿದೆ?

ಈ ಅತ್ಯಾಧುನಿಕ ಕ್ರೀಡಾಂಗಣದ ಒಳಾಂಗಣ ಬ್ಯಾಡ್ಮಿಂಟನ್, ಬಾಸ್ಕೆಟ್ ಬಾಲ್, ವಾಲಿಬಾಲ್ ಮತ್ತು ಹ್ಯಾಂಡ್ ಬಾಲ್, ಟೇಬಲ್ ಟೆನ್ನಿಸ್, ಸ್ಕ್ವಾಷ್, ಕಬಡ್ಡಿ, ಖೋ-ಖೋ, ಜುಡೋ, ಟೈಕ್ವಾಂಡೋ, ಕುಸ್ತಿ, ಫೆನ್ಸಿಂಗ್ ಕೋರ್ಟ್ ಸೌಲಭ್ಯ ಹೊಂದಿರಲಿದೆ. ಹೊರಾಂಗಣವು ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್, ಪಾಡೆಲ್ ಮತ್ತು ಪಿಕಲ್‌ಬಾಲ್ ಆಟಗಳಿಗೂ ಅವಕಾಶ ಇರಲಿದೆ. ಅಂತಾರಾಷ್ಟ್ರೀಯ ಗುಣಮಟ್ಟದ ಈಜುಕೊಳ, ಹೈ-ಡೈವಿಂಗ್ ಪೂಲ್ ಸಹ ನಿರ್ಮಾಣವಾಗಲಿದೆ.

ಬಹು ಮಹಡಿ ಪಾರ್ಕಿಂಗ್: ಏಕಕಾಲದಲ್ಲಿ 500ಕ್ಕೂ ಅಧಿಕ ವಾಹನಗಳ ನಿಲುಗಡೆ ಮಾಡಬಹುದಾದ ಸುಸಜ್ಜಿತ ಬಹುಮಹಡಿ ಪಾರ್ಕಿಂಗ್ ವ್ಯವಸ್ಥೆ ಇರಲಿದೆ. ಮಳಿಗೆಗಳು, ಕ್ರೀಡಾ ಪರಿಕರಗಳ ಅಂಗಡಿ ಮತ್ತು ವಿಶಾಲವಾದ ಉಪಾಹಾರ ಗೃಹಗಳು, ಆಟಗಾರರು ಹಾಗೂ ಕ್ರೀಡಾ ಸಿಬ್ಬಂದಿ ವಾಸ್ತವ್ಯಕ್ಕೆ ಹೈಟೆಕ್ ವಸತಿಗೃಹಗಳು, ಹೆಲಿಪ್ಯಾಡ್ ನಿರ್ಮಾಣವಾಗಲಿದೆ.



ಬಿಜೆಪಿ ಕರ್ನಾಟಕ
ಅತ್ಯಂತ ಕಿರಿಯ ವಯಸ್ಸಿಗೆ ಪಕ್ಷದ ಸಾರಥ್ಯ ವಹಿಸಿ, ಅದ್ಭುತ ಸಂಘಟನಾ ಶಕ್ತಿಯಿಂದ ಪಕ್ಷವನ್ನು ಯಶಸ್ವಿನ ಉತ್ತುಂಗಕ್ಕೆ ಕೊಂಡೊಯ್ಯುತ್ತಿರುವ, ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳ ಐತಿಹಾಸಿಕ ಗೆಲುವಿನ ನಂತರ ರಾಜ್ಯಕ್ಕೆ ಪ್ರಥಮ ಬಾರಿಗೆ ಆಗಮಿಸುತ್ತಿರುವ
ನಮ್ಮ ಹೆಮ್ಮೆಯ ರಾಷ್ಟ್ರೀಯ ಅಧ್ಯಕ್ಷರಾದ
ಶ್ರೀ ನಿತಿನ್ ನಬಿನ್
ಅವರಿಗೆ
ಹೃತ್ಪೂರ್ವಕ ಸುಸ್ವಾಗತ
24 ಮೇ 2026
ಭಾನುವಾರ
ಬಿ. ವೈ. ವಿಜಯೇಂದ್ರ
ರಾಜ್ಯಾಧ್ಯಕ್ಷರು, ಬಿ.ಜೆ.ಪಿ ಕರ್ನಾಟಕ
ಶಾಸಕರು, ಶಿಕಾರಿಪುರ ವಿಧಾನಸಭಾ ಕ್ಷೇತ್ರ



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಎಲ್ಲಿ ವಾಸ ಮಾಡಬೇಕು?

ಸಜ್ಜನರ ಸನಿಹ ಅಥವಾ ಕಾಶಿಯಲ್ಲಿ.

ಈ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಾವು ಏಕೆ ಬದುಕಬೇಕು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಈ ಬದುಕು ಎಂಬುದು ಜನನ ಮತ್ತು ಮರಣದ ನಡುವಿನ ವ್ಯಾಪಾರ ಎಂಬುದಾಗಿ ನಾವು ತಿಳಿದಿದ್ದೇವೆ. ಆದರೆ ಈ ಅರಿವು ಬದಲಾಗಬೇಕಾಗಿದೆ. ಭಾರತೀಯರ ಜೀವನ ಎಂದರೆ ಕೇವಲ ಹುಟ್ಟು ಸಾವುಗಳ ನಡುವಿನ ವ್ಯಾಪಾರ ಅಲ್ಲ. ಜೀವಭಾವ ಎಲ್ಲಿಂದ ಆರಂಭವಾಗುತ್ತದೆಯೋ ಮತ್ತು ಆ ಜೀವಭಾವ ಯಾವಾಗ ಮುಕ್ತಾಯವಾಗುತ್ತದೆಯೋ ಅವೆರಡರ ನಡುವಿನ ವ್ಯಾಪಾರವನ್ನೇ 'ಜೀವನ' ಎಂಬುದಾಗಿ ಕರೆಯಬೇಕು ಎಂಬುದಾಗಿ ಶ್ರೀರಂಗ ಮಹಾಗುರುಗಳ ಆಶಯವಾಗಿತ್ತು. ಹಾಗಾದರೆ ಈ ಜೀವಭಾಗವೂ ಕಳೆಯುವುದು ಎಂದರೇನು? ಜೀವಭಾವವು ಕಳೆಯಲು ಯಾವ ಉಪಾಯವನ್ನು ಮಾಡಬೇಕು ಎಂಬುದು ಇಲ್ಲಿನ ವಿಷಯವಾಗಿದೆ. ಜೀವಭಾವ ಕಳೆಯುವುದನ್ನೇ 'ಮೋಕ್ಷ' ಎಂಬುದಾಗಿ ಕರೆಯಲಾಗಿದೆ. ಸಂಸಾರ ಭಾವವು ಕಳೆಯಬೇಕು. ಸಂಸಾರದಿಂದ ಮುಕ್ತಿಯಾಗಿ ಮತ್ತೆ ಜನ್ಮ ಎಂಬ ಹೊಸತನವನ್ನು ಪಡೆದುಕೊಳ್ಳದೇ ಇರುವಂತಾಗಬೇಕು. ಇದನ್ನೇ ಮಾನವಜೀವನ ಎಂಬುದಾಗಿ ಕರೆದಿದ್ದಾರೆ. ಇಂತಹ ಉತ್ಕೃಷ್ಟವಾದ ಮಾನವಜನ್ಮ ಸಾರ್ಥಕವಾಗಬೇಕಾದರೆ ಅದಕ್ಕೆ ಇರುವ ಅತ್ಯಂತ ಶ್ರೇಷ್ಠವಾದ ಸಾಧನ ಎಂದರೆ ಸಜ್ಜನರ ಸಾನ್ನಿಧ್ಯ. ನಾವು ಎಷ್ಟೆಷ್ಟು ಸುಜನರ ಸಂಬಂಧವನ್ನು ಬೆಳೆಸಿಕೊಳ್ಳುತ್ತೇವೋ ಅಷ್ಟಷ್ಟು ನಮ್ಮ ಜೀವನ ಸುಲಭವಾಗುತ್ತದೆ. ಏಕೆಂದರೆ ಆ ಸಜ್ಜನರು ಜೀವನದ ಸಾರ್ಥಕ್ಯವನ್ನು ಪಡೆಯುವುದು ಹೇಗೆ ಎಂಬುದನ್ನು ಅವರು ತಮ್ಮ ಜೀವನದುದ್ದಕ್ಕೂ ಸಾಧಿಸಿ ತೋರಿಸಿದವರು. ಹಾಗಾಗಿ ಅವರು ನಡೆದ ಹಾದಿಯಲ್ಲಿ ನಡೆದರೆ ನಮಗೆ ಗಮ್ಯವೂ ಅತ್ಯಂತ ಸುಲಭವಾಗಿ ಲಭಿಸುತ್ತದೆ ಎಂಬುದು ಇದರ ತಾತ್ಪರ್ಯ. ಹಾಗಾಗಿ ಸಜ್ಜನರ ಸಂಬಂಧ ಅತ್ಯಂತ ಅಗತ್ಯವಾದ್ದು. ಹಾಗಾದರೆ ಸಜ್ಜನರು ಯಾರು? ಯಾವ ನಿತ್ಯವಾದ ಸಚ್ಚಿದಾನಂದ ರೂಪವಾದ ಯಾವ ಪರಬ್ರಹ್ಮ ಇದೆಯೋ, ಅದನ್ನೇ "ಸತ್" ಎಂದು ಕರೆದು ಆ ಸತ್ತಿನಲ್ಲೇ ಯಾವಾಗಲೂ ತಮ್ಮ ಮನಸ್ಸನ್ನು ಇಡುವವರು ಸಜ್ಜನರು. ಅವರ ನಡೆ ನುಡಿ ಯಾವಾಗಲೂ ಆ ಪರಬ್ರಹ್ಮದ ಕಡೆಗೆ ಇರುತ್ತದೆ. ಹಾಗಾಗಿ ಎಲ್ಲೂ ಅವರು ಚ್ಯುತರಾಗುವುದಿಲ್ಲ ಅಂತಹ ಜೀವನಕ್ರಮ ಅವರದ್ದಾಗಿರುತ್ತದೆ.

ಈ ಪ್ರಶ್ನೆಯ ಇನ್ನೊಂದು ಭಾಗ ಕಾಶಿಯಲ್ಲಿ ವಾಸ ಮಾಡಬೇಕು ಎಂಬುದಾಗಿ. ಈಗ ನಾವು ಯಾವ ಭಾರತದ ಭೂಗೋಳದಲ್ಲಿ ಕಾಶಿ ಎಂಬ ನಗರವನ್ನು ನೋಡುತ್ತೇವೋ ಅದರಲ್ಲಿ ವಾಸ ಮಾಡಬೇಕು ಎಂಬ ಅರ್ಥದಲ್ಲಿ ಈ ವಾಕ್ಯ ಬಂದಿದ್ದಲ್ಲ. ಸನಾತನ ಭಾರತದ ಮಹರ್ಷಿಗಳು ಯಾವ ಯಾವ ಭ್ರೂಮಧ್ಯದಲ್ಲಿ ಇರುವ 'ಕಾಶೀ' ಎಂಬ ಭಾಗವಿದೆಯೋ, ಅಲ್ಲಿ ಯಾವ ವಿಶ್ವನಾಥನನ್ನು ದರುಶನವನ್ನು ಮಾಡಿದರೋ, ಅಂತಹ ದರ್ಶನಕ್ಕೆ ಯೋಗ್ಯವಾದ ಕ್ಷೇತ್ರ ಯಾವುದೋ, ಅದೂ ಕೂಡ ಭಾರತದ ಉತ್ತರ ಭಾಗದಲ್ಲಿರುವ ಕಾಶಿ ಎಂಬುದಾಗಿ ಅವರು ಉದ್ಘೋಷಿಸಿದರು. 'ಕಾಶ್ಯಾಂ ತು ಮರಣಾತ್ ಮುಕ್ತಿಃ' ಎಂಬುದಾಗಿ ಅಂದರೆ ಮುಕ್ತಿ ಪಡೆಯಬೇಕಾದರೆ ಕಾಶಿಯಲ್ಲಿ ಮರಣವನ್ನು ಹೊಂದಬೇಕು. ಅಂದರೆ ಜೀವನದಲ್ಲಿ ತನ್ನ ಪ್ರಾಣವನ್ನು ಅಲ್ಲಿ ಲಯಗೊಳಿಸಿಕೊಂಡರೆ ಆಗ ಜೀವಭಾವವು ನಷ್ಟವಾಗುತ್ತದೆ; ದೇವಭಾವವು ಪ್ರಾಪ್ತವಾಗುತ್ತದೆ. ಇದರಿಂದಲೇ ಅವನ ಜನ್ಮ ಸಾರ್ಥಕ ಎಂಬ ಅರ್ಥದಲ್ಲಿ ಈ ಪ್ರಶ್ನೋತ್ತರವನ್ನು ನಾವು ಗಮನಿಸಬೇಕಾಗಿದೆ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಪಾಂಡವರ ದಿಗ್ವಿಜಯ

ಕೃಷ್ಣ-ಭೀಮಾರ್ಜುನರು ಜರಾಸಂಧವಧಾನಂತರ ಹಿಂತಿರುಗಿ ಬಂದರಷ್ಟೆ. ಅತ್ತ ಕೃಷ್ಣನೂ ಹೊರಟಮೇಲೆ ಪಾಂಡವರಲ್ಲೇ ಮಾತುಕತೆಗಳಾದವು.

ಶ್ರೇಷ್ಠವಾದ ಧನುಸ್ಸನ್ನೂ ಅಕ್ಷಯವಾದ ಬತ್ತಳಿಕೆಗಳನ್ನೂ ದಿವ್ಯವೆನಿಸುವ ರಥ-ಧ್ವಜಗಳನ್ನೂ ಅದ್ಭುತವಾದ ಸಭೆಯನ್ನೂ ಪಡೆದವನಾಗಿದ್ದ ಅರ್ಜುನನು ಯುಧಿಷ್ಠಿರನನ್ನು ಕುರಿತು ಹೀಗೆ ಹೇಳಿದನು: ರಾಜನೇ ಬಹಳ ವಿಶೇಷವಾದ ಧನುಸ್ಸು, ಅಸ್ತ್ರ ಬಾಣ, ಪರಾಕ್ರಮ, ಕೃಷ್ಣನಂತಹ ಜೊತೆಗಾರ, ರಾಜ್ಯ ಹಾಗೂ ಇಂದ್ರಪ್ರಸ್ಥಭೂಮಿ, ಯಶಸ್ಸು ಹಾಗೂ ಸೈನ್ಯ-ಹೀಗೆ ನನಗೆ ಏನೇನು ಬಹಳವಾಗಿ ಅಪೇಕ್ಷೆಯಾಗಿತ್ತೋ ಹಾಗೂ ಪಡೆಯಲು ಸುಲಭವಲ್ಲವೋ ಅದೆಲ್ಲವೂ ಈಗ ದೊರೆತಿದೆ. ನಮ್ಮ ಈಗಿನ ಕರ್ತವ್ಯವೆಂದರೆ ಕೋಶದ ಪರಿವರ್ಧನೆಯೆಂಬುದೇ ನನ್ನ ಅಭಿಪ್ರಾಯ. ಆದ್ದರಿಂದ ರಾಜರೆಲ್ಲರೂ ಕರವನ್ನೊಪ್ಪಿಸುವಂತೆ ಮಾಡಿಬಿಡುವೆ. ಅದಕ್ಕಾಗಿ ನಾನು ಮೊದಲು ಕುಬೇರ ದಿಕ್ಕಿಗೆ ಹೊರಡಲಿರುವೆ. ಅದಕ್ಕಾಗಿ ಅಭಿಪೂಜಿತವಾದ ತಿಥಿಮುಹೂರ್ತಗಳಲ್ಲಿ ಹಾಗೂ ಅಭಿಪೂಜಿತವಾದ ನಕ್ಷತ್ರದಲ್ಲಿ ಹೊರಡುವೆ.

ಇದನ್ನು ಕೇಳಿ ಧರ್ಮರಾಜನು ಸಂತುಷ್ಟನಾದನು. ತಮ್ಮಂದಿರು, ಮಂತ್ರಿಗಳು ಇವರೊಂದಿಗೆ, ವ್ಯಾಸರನ್ನೂ ಧೌಮ್ಯರನ್ನೂ ಕಾಣಲು ಹೊರಟನು. ಆಗ ಮಹಾಬುದ್ಧಿಶಾಲಿಗಳಾದ ವ್ಯಾಸರು ಅರ್ಜುನನನ್ನು ಕುರಿತು ಹೀಗೆ ಹೇಳಿದರು: ಭೇಷ್ ಅರ್ಜುನ, ನಿನಗೆ ಇಂತಹ ಬುದ್ಧಿ ಬಂದುದೇ ಶ್ಲಾಘ್ಯ. ಏಕೆಂದರೆ ಅಖಂಡ ಭೂಮಂಡಲವನ್ನೇ ನೀನು ಜಯಿಸಲು ಸಂಕಲ್ಪಿಸಿರುವೆ. ಪಾಂಡು ಮಹಾರಾಜನೇ ಧನ್ಯ. ಏಕೆಂದರೆ ಆತನ ಪುತ್ರನಾದ ನೀನು ಇಂತಹವನಾಗಿರುವೆ! ನಿನ್ನ ವೀರ್ಯದಿಂದಾಗಿ ಆ ಧರ್ಮಾತ್ಮನು ಸಾರ್ವಭೌಮ ಪದವಿಯನ್ನು ಹೊಂದಲಿರುವನು. ನಿನ್ನ ಬಾಹುಬಲವನ್ನು ಆಶ್ರಯಿಸಿ ಆತನು ರಾಜಸೂಯವನ್ನು ನೆರವೇರಿಸುವನು. ಶ್ರೀಕೃಷ್ಣನ ನೀತಿ, ಭೀಮ-ಅರ್ಜುನರ ಬಲ ಹಾಗೂ ನಕುಲ-ಸಹದೇವರ ವೀರ್ಯಗಳಿಂದಾಗಿ ಧರ್ಮರಾಜನು ಎಲ್ಲವನ್ನೂ ಹೊಂದುವನು.

ಆದ್ದರಿಂದ ಅರ್ಜುನನೇ, ದೇವತೆಗಳು ಕಾಪಾಡಿರುವ ಉತ್ತರ ದಿಕ್ಕಿಗೆ ನೀನು ಹೊರಡು, ಫಾಲ್ಗುನ! ನೀನು ದೇವತೆಗಳನ್ನೂ ಜಯಿಸಿ ಬಲಪ್ರಯೋಗದಿಂದ ರತ್ನಗಳನ್ನು ತರಲು ಸಮರ್ಥನೇ ಸರಿ.

ಬಲವನ್ನು ಮೆಚ್ಚುವ ಭೀಮಸೇನನು ಪೂರ್ವದಿಕ್ಕಿಗೆ ಹೋಗಲಿ. ಮಹಾರಥನಾದ ಸಹದೇವನು ಯಮನ ದಿಕ್ಕಿಗೆ ಹೋಗಲಿ. ವರುಣರಕ್ಷಿತವಾದ ಪಶ್ಚಿಮಕ್ಕೆ ನಕುಲನು ಹೋಗಲಿ. ನನ್ನ ಬುದ್ಧಿ ಹೀಗೆ ನಿಶ್ಚಯಿಸಿದೆ. ಭರತವಂಶದ ಶ್ರೇಷ್ಠರಾದ ಪಾಂಡವರೇ, ಇದನ್ನು ಕಾರ್ಯಗತಗೊಳಿಸಿರಿ. ವ್ಯಾಸರ ಈ ಮಾತುಗಳನ್ನು ಕೇಳಿ ಪಾಂಡವರು ಸಂತೋಷಗೊಂಡರು. ಅರ್ಜುನನು ಮೊದಲಾಡಿದ ಮಾತಿಗೆ ಯುಧಿಷ್ಠಿರನು ಪ್ರತಿಭಾಷಣವನ್ನು ಮಾಡಿದನು. ಆತನ ಮಾತು ಸ್ನಿಗ್ಧವೂ ಗಂಭೀರವೂ ಆಗಿತ್ತು. ಅರ್ಜುನನೇ, ಸ್ವಸ್ತಿವಾಚನ ಮಾಡತಕ್ಕ ಬ್ರಾಹ್ಮಣರಲ್ಲಿಗೆ ಮೊದಲು ಹೋಗು. ನಿನ್ನ ಜೈತ್ರಯಾತ್ರೆಯೆಂಬುದು ನಮ್ಮ ಬಗ್ಗೆ ದ್ವೇಷವಿರತಕ್ಕವರಿಗೆ ಶೋಕವನ್ನೂ, ನಮ್ಮ ಮಿತ್ರರಿಗೆ ಸಂತೋಷವನ್ನೂ ಉಂಟುಮಾಡಲಿ. ಪಾರ್ಥನೇ, ನಿನಗೆ ವಿಜಯವೆಂಬುದು ಸಿದ್ಧವೇ ಸರಿ. ನಿನಗೆ ಅಭೀಷ್ಟವಾದದ್ದನ್ನು ಪಡೆದೇ ಪಡೆಯುತ್ತೀಯೇ.

ಈ ಮಾತುಗಳನ್ನು ಕೇಳಿದ ಬಳಿಕ ದೊಡ್ಡ ಸೈನ್ಯದೊಂದಿಗೆ ಅರ್ಜುನನು ಹೊರಟನು. ಆತನ ರಥವು ಅದ್ಭುತವಾದ ಶಬ್ದವನ್ನು ಮಾಡುವುದಾಗಿತ್ತು. ಎಷ್ಟಾದರೂ ಅದು ಅಗ್ನಿದತ್ತವಾದುದಲ್ಲವೇ? ಅವನು ಮಾತ್ರವಲ್ಲದೆ ಧರ್ಮರಾಜನಿಂದ ಸಂಮಾನಿತರಾದ ಭೀಮನೂ, ನಕುಲ-ಸಹದೇವರೂ ಸೈನ್ಯಸಮೇತರಾಗಿ ಹೊರಟುಬಂದರು.

ಸ್ಕ್ರೀನನು ಕೊಂಡೀರಾ

ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com



'ಮಿಕ್ಕಿದ್ದೆಲ್ಲ ಆಯ್ತು. ಸ್ಕ್ರೀನಿಂಗ್ ಒಂದು ಬಾಕಿ' ಎಂದೆ.

'ಸ್ಕ್ರೀನಿಂಗ್? ಯಾವ ಫಿಲ್ಮ್ ಅಪ್ಪ?' ಎಂದಳು ಮಗಳು.

'ಏನಾಯ್ತಪ್ಪ? ಯಾವ ಸ್ಕ್ಯಾನ್ ಆಗಬೇಕು? ಸಿಟಿ ಸ್ಕ್ಯಾನೋ, ಕ್ಯಾಟ್ ಸ್ಕ್ಯಾನೋ? ಇಂಷುರೆನ್ಸ್ ಪ್ರೀಮಿಯಮ್ ಅಪ್ ಟು ಡೇಟ್ ಇದೆಯಾ?' ಆತಂಕದಿಂದ ಕೇಳಿದ ಮಗ.

'ಫಿಲ್ಮ್‌ದೂ ಅಲ್ಲ, ರೋಗದ್ದೂ ಅಲ್ಲ, ಮನೆಯದು. ಮನೆಯ ಕಿಟಕಿಗಳಿಗೆ ಸ್ಕ್ರೀನ್ ತರಬೇಕು. The act of providing screensಗೆ ನಾನು ಸ್ಕ್ರೀನಿಂಗ್ ಅನ್ನೋ ಪದವನ್ನ ಹುಟ್ಟುಹಾಕಿದೆ ಅಷ್ಟೆ' ಎಂದೆ.

'ಅಂಗಡಿಗೆ ಹೋದಾಗಲೂ ನಿನ್ನ 'ಪದಜನಕತನ'ವನ್ನ ಬದಿಗಿಟ್ಟು ಪರದೆ ಅರಿಸಿಕೊಂಡು ಬಾ' ಎಂದಳು ಮಗಳು.

ಮಡದಿಯೊಡನೆ 'ಹೈಡ್ ಅಂಡ್ ಸೀಕ್' ಸ್ಕ್ರೀನ್ ಶಾಪ್‌ಗೆ ಹೋದೆ. ಬಳಿ ಸಾರಿದ ಅಂಗಡಿಯವನನ್ನು ಕುರಿತು 'ತೆರೆ ಬೇಕು' ಎಂದೆ.

'ಅದು ಎರಡು ವಾಕ್ಯಗಳೋ, ಒಂದೋ?' ಎಂದನವ.

'ಇದು ಎರಡು ಪದಗಳ ವಾಕ್ಯವಲ್ಲವೆ?' ಮಾತಾಡಿದ ನನಗೇ ಸಂಶಯ ಮೂಡುವ ಸ್ಥಿತಿ!

'ಇದ್ದೀತು. ಒಂದೊಂದು ಪದಗಳ ಎರಡು ವಾಕ್ಯವೂ ಆದೀತು. ತೆರೆ ಬೇಕು ಎಂದರೆ ಪರದೆ ಬೇಕು ಎಂದಾಗುತ್ತದೆ. ತೆರೆ ಎಂದರೆ ತೆರವುಗೊಳಿಸು, ಮುಸುಕು ಸರಿಸು ಎಂದಾಗುತ್ತದೆ, ಬೇಕು ಎಂಬುದು ಬೇಡಿಕೆಯನ್ನು ಸಲ್ಲಿಸಿದಂತಾಗುತ್ತದೆ. ನಿಮಗೆ ಇರುವ ಪರದೆಯ ಸರಿಸುವಿಕೆ ಆಗಬೇಕೋ ಅಥವಾ ಪರದೆಯ ಅವಶ್ಯಕತೆಯೋ?'

'ಇದ್ಯಾವುದೋ ಶುದ್ಧಕನ್ನಡದ ಶನಿ ಒಕ್ಕರಿಸಿತು' ಎಂದು ಮನದಲ್ಲೇ ಹಳಿಯುತ್ತಾ 'ನಿಮ್ಮ ಲವ್ ಆಫ್ ಲಾಂಗ್ವೇಜ್ ನನಗೆ ವೆರಿ ಮಚ್ ಲೈಕ್ ಆಯ್ತು' ಎಂದೆ. 'ವಿಚ್ ಸ್ಕ್ರೀನ್ ಡು ಯೂ ವಾಂಟ್ ಸರ್?' ಎನ್ನುತ್ತಾ ಶುದ್ಧಕನ್ನಡಿಗನು ಕೈಲಾಸಂ ವ್ಯಾಖ್ಯಾನ ನೀಡಿದ ಕನ್ನಡಿಗನಾದ. ಅವರವರೊಡನೆ ಅವರವರ ಭಾಷೆಯಲ್ಲಿ ಮಾತನಾಡಿ ಕನ್ನಡಿಗನೊಡನೆ ಇಂಗ್ಲಿಷ್‌ನಲ್ಲಿ ಮಾತನಾಡುವವನೇ ಕನ್ನಡಿಗನೆಂದು ಕೈಲಾಸಂ ನುಡಿದಿದ್ದರು.

'ನಮ್ಮ ಮನೆಗೆ ಮಾಟಗಾತಿಯರೇನೂ ಬರುವುದಿಲ್ಲವಾದ್ದರಿಂದ witch screen ಅವಶ್ಯವಿಲ್ಲ' ಎಂದು ನುಡಿಯೇಟಿಗೆ ನುಡಿಯೇಟು ಬೀರಿದೆ.

'ಗುಡ್. ಇಲ್ಲಿ ಸ್ಕ್ರೀನ್‌ಗಳ ಡಿಸ್‌ಪ್ಲೇ ಇದೆ. ನೋಡಿ ಸೆಲೆಕ್ಟ್ ಮಾಡಿ' ಎಂದನವ. 'ಅವರಿಗೇನೂ ಗೊತ್ತಾಗಲ್ಲ, ನೀವೇ ಸೂಟೆಬಲ್ಲಾದ್ದನ್ನ ಸೆಲೆಕ್ಟ್ ಮಾಡಿಕೊಡಿ' ಎಂದಳು ಮಡದಿ. ಪುರುಷನ ಅಹಂಕಾರದ ಬಲೂನಿಗೆ ಸತ್ಯದ ಸೂಜಿಯಿಂದ ಚುಚ್ಚುವವಳೇ ಮಡದಿ! 'ನಿಮ್ಮ ಫರ್ನೀಚರ್ ಕಲರ್ ಯಾವುದು?' ಎಂದ ಮಾರಪ್ಪ. ಅಂಗಡಿಯ ಸೇಲ್ಸ್‌ಮನ್‌ಗೆ ಕನ್ನಡದ 'ಮಾರಪ್ಪ' ಸರಿಯಾದ ಪದ!

'ಏಂತು ಪೇಳ್ವುದು? ನನ್ನ ಮೇಜಿನ ಬಣ್ಣ ಕಪ್ಪು; ಕುರ್ಚಿಗಳದು ತೇಗದ ಬಣ್ಣ. ಹಾಂ! ತೇಗುವ ಬಣ್ಣವೂ ಇದೆಯೇ ಎಂದು ಕೇಳಬೇಡಿ' ಎಂದೆ.

'ನೀವು ಟೀಕ್ ವುಡ್ ಎಂದಿದ್ದರೂ 'ಗಲತ್' ವುಡ್ ಇರತ್ತಾ ಅಂತ ಕೇಳಬಹುದಾಗಿತ್ತು. ಟೀಕ್ ಎಂದರೆ ಸರಿ, ಗಲತ್ ಎಂದರೆ ತಪ್ಪು ಅಂತ ಅರ್ಥಗಳಿವೆಯಲ್ಲ ಹಿಂದಿಯಲ್ಲಿ. ಪನ್ ಅತ್ತ ಬಿಟ್ಟು ಮಾ ಪನಿ ಚೂಸ್ತಾಮಾ (ನಮ್ಮ ಕೆಲಸ ನೋಡೋಣವೇ)?' ಎಂದನವ. ಮಡದಿಯ ಗೋಣು ಸಮ್ಮತಿ ಸೂಚಿಸಿತು.

'ಸ್ಕ್ರೀನ್ ಪ್ಲೇನೋ ಪ್ಲೀಟೆಡ್ಡೋ?'

'ಏನು ವ್ಯತ್ಯಾಸ?'

'ಪ್ಲೇನ್ ಆದರೆ ಹೊರಗಿನದು ಸ್ಪಷ್ಟವಾಗಿ ಕಾಣತ್ತೆ. ನೆರಿಗೆ ಇರುವುದಾದರೆ ಕಾಣಲ್ಲ.'

'ಪ್ಲೇನೇ ಇರಲಿ' ಎಂದೆ.

'ಪ್ಲೀಟೆಡ್ಡೇ ಇರಲಿ. ಪ್ಲೇನ್ ಆದರೆ ಹೋಗಿಬರುವವರಿಗೆಲ್ಲ ನಮ್ಮ ಮನೆ ಪೀಪಿಂಗ್ ಪ್ಲೇಸ್ ಆಗತ್ತೆ' ಎಂದಳು ಮಡದಿ.

'ಓಲ್ಡನ್ ಡೇಸಲ್ಲಿ ಹಾಗಿತ್ತು ಮೇಡಂ. ಈಗ ಯಾರಂದ್ರೆ ಯಾರೂ ನಿಮ್ಮ ಮನೆಯೊಳಕ್ಕೆ ಇಣುಕುವುದಿಲ್ಲ' ಮಾರಪ್ಪ ಉವಾಚ.

'ಅದು ಹೇಗೆ ಅಷ್ಟು ಖಚಿತವಾಗಿ ಹೇಳುತ್ತೀರಿ?'

'ಈಗಿನವರು ತಲೆ ತಗ್ಗಿಸಿಯೇ ನಡೆಯುವ ಮೊಬೈಲಾಕ್ಷರು. ಮಳೆ ಬರುತ್ತಿದೆ ಎಂದು ಅವರಿಗೆ ತಿಳಿಯಬೇಕಾದರೂ ಮೊಬೈಲಲ್ಲಿ ವೆದರ್ ರಿಪೋರ್ಟ್ ನೋಡಿದಾಗಲೇ' ಎಂದನವ.

'ಮಾಮೂಲಿ ಜನರು ಹಾಗಿದ್ದಾರು. ಮನೆಗಳ್ಳರು?'

'ಹ್ಯಾಗೋ ಮನೆಯಲ್ಲಿ ಸೇರಿ ಕದಿಯುವುದಕ್ಕಿಂತ ಕುಳಿತಲ್ಲೇ ಹ್ಯಾಕ್ ಮಾಡಿ ಕದಿಯೋದು ಸುಲಭ ಅಂತ ಕಂಡ್ಕೊಂಡಿದಾರೆ. ತೆರೆ ತೆರೆದಿದ್ದರೂ ಜನರ ದೃಷ್ಟಿ ಒಳಕ್ಕೆ ಸರಿಯುವುದಿಲ್ಲ.'

'ಮನೆಯಲ್ಲಿ ಟೀನೇಜ್ಡ್ ಡಾಟರ್ ಇದ್ದಾಳೆ.'

'ಓಹ್! ಹಾಗಿದ್ದರೆ ಇಣುಕುವೀರರು ಇದ್ದಾರು. ಮೊಬೈಲ್ ಸ್ಕ್ರೀನಿನಿಂದ ಮನೆಯ ಸ್ಕ್ರೀನಿನ ಕಡೆಗೆ ಗಮನ ಸೆಳೆಯಲು ಟೀನೇಜಿಗೆ ಮಾತ್ರ ಸಾಧ್ಯ.'

ನನಗೆ ಈ ಮಾತು ಸರಿಕಾಣಲಿಲ್ಲ. ಹೋದವಾರ ನಮ್ಮ ಮನೆಯಲ್ಲಿ ಟೀನೇಜರ್ಸ್ ಫೋರಂ ಸೇರಿತ್ತು. ಆರು ಜನರು ಆರು ಮೊಬೈಲುಗಳಲ್ಲಿ ಆರು ಗಂಟೆಗಳ ಕಾಲ ತಮ್ಮ ಕತ್ತನ್ನು ಹುದುಗಿಸಿ ಕುಳಿತಿದ್ದರು. ಆಗಾಗ್ಗೆ ಓಹ್! ಆಹ್! ಎಂಬ ಉದ್ಗಾರಗಳು ಹೊರಟರೂ ಅವು ಸ್ಕ್ರೀನ್ ರಿಲೇಟೆಡ್ಡೇ ಆಗಿದ್ದ ಸ್ಕ್ರೀಮುಗಳಾಗಿದ್ದವು. ಪರಸ್ಪರರು ಮಾತನಾಡಿದ್ದು ವಾಟ್ಸಪ್ ಸಂದೇಶಗಳ ಮೂಲಕ! 'ಡಾಟರ್ ತಲೆ ತಗ್ಗಿಸಿಯೇ ಕುಳಿತಿರುತ್ತಾಳೆ. ಮೊಗ ತೋರದ ಹುಡುಗಿಯನ್ನು ನೋಡಲು ಯಾವ ಹುಡುಗರೂ ಕ್ಯೂ ನಿಲ್ಲುವುದಿಲ್ಲ. ಪ್ಲೇನ್ ಪರದೆಯೇ ಇರಲಿ' ಎಂದೆ ನಾನು. 'ಪ್ಲೀಟೆಡ್' ಎಂದಳು ಮಡದಿ.

'ಕಾಂಬೋ ಇರಲಿ. ಒಂದು ಶೀರ್ (ತೆಳು), ಒಂದು ಪ್ಲೀಟ್ ಹಾಕಿಕೊಳ್ಳಿ. ಈಗ ಡಬಲ್ ಕರ್ಟನ್ನೇ ಫ್ಯಾಶನ್' ಎಂದ ಮಾರಪ್ಪ. ಆ ಒಂದು ವಾಕ್ಯದಿಂದ ನನ್ನ ಬ್ಯಾಂಕ್ ಅಕೌಂಟ್‌ಗೆ ತಗಲುವ ಕ್ಷಯದ ತೀವ್ರತೆ ದುಪ್ಪಟ್ಟಾಯಿತು.

ನನ್ನಜ್ಜನ ಕಾಲದ ಪರದೆಗಳು ಮನಃಪಟಲದಲ್ಲಿ ಮೈದೋರಿದವು. ಬಾಗಿಲುಗಳಿಗೆ ಗೋಣಿನಂತೆ ಅಪ್ಪುದ್ದವೂ ಇರುತ್ತಿದ್ದ ಪರದೆಗಳು ಕಿಟಕಿಯ ವಿಷಯದಲ್ಲಿ ಸ್ಕರ್ಟ್‌ಗಳಂತೆ ಇದ್ದು, ಜೋರುಗಾಳಿ ಬೀಸಿದಾಗ ಮರ್ಲಿನ್ ಮನ್ರೋಳ ಸ್ಕರ್ಟಿನಂತೆಯೇ ಹಾರಾಡುತ್ತಿದ್ದವು. ಆಗಿನ ಪರದೆಗಳದು ಕೇವಲ ನೋಟನಿರೋಧಕ ಕಾಯಕವಲ್ಲ, ಕಿಟಕಿಯ ಗೂಡಿನಲ್ಲಿರಿಸಿದ ಎಂಜಲು ಲೋಟಗಳು, ಪೆನ್ನಿಲ್ಲಿನ ಹೆರೆದ ತುಣುಕುಗಳು, ತುಂಡಾದ ಹೇರ್ ಕ್ಲಿಪ್ ಮೊದಲಾದವು ಇತರರಿಗೆ ಕಾಣದಂತಾಗಿಸುವ ಮರೆಗಳೂ ಆಗಿದ್ದವು. ಕೆಲವೊಮ್ಮೆ ತಳದಲ್ಲಿಷ್ಟು ಕಾಫಿಯನ್ನು ಬಿಟ್ಟು ಅಂತಹ ಲೋಟವು ಗೂಡಿನಲ್ಲಿದ್ದು, ಗಾಳಿಗೆ ತೆರೆಯ ಚುಂಗು ಕಾಫಿಲೋಟದ ತಳಕ್ಕೆ ಮುತ್ತಿಕ್ಕಿ, ತೆರೆಗೆ ವಿಶೇಷ ಕರೆಗಳು ಮೂಡಿ, ಮಾಮೂಲಿ ಪರದೆಗಳು 'ಕಲಾಪರದೆ'ಗಳಾಗುತ್ತಿದ್ದವು. ಈಗಿನ ಕಿಟಕಿಗಳ ಬುಡದಲ್ಲಿನ ಜಾಗವು ಎರಡು ಇಂಚಿಗಿಂತ ಕಡಿಮೆ ಇರುವುದರಿಂದ ಆ 'ಮರುತಚಾಲಿತ ಕಲಾವಂತಿಕೆ'ಯ ಭಾಗ್ಯವು ಇಂದಿನ ಪರದೆಗಳಿಗೆ ದೊರಕುವುದಿಲ್ಲ.

'ಮನೆಗೆಟೂಟ್ರ್ಯಾಕ್ ಕರ್ಟನ್ ರಾಡ್ ಹಾಕ್ಸಿದೀವಿ' ಎಂದಳು ಮಡದಿ. ನನ್ನ ಹಣಕ್ಕೆ ಖೆಡ್ಡಾವನ್ನು ಮೊದಲೇ ತೋಡಿದ್ದದ್ದು ನನ್ನ ಗಮನಕ್ಕೆ ಬಂದದ್ದು ಆಗಲೇ. ಡಬಲ್ ಕರ್ಟನ್ ಖರೀದಿಗೆ ಸಮ್ಮತಿಸಿದ್ದರಿಂದ ನನ್ನ ಉಳಿತಾಯಬುದ್ಧಿಗೆ ತೆರೆ ಎಳೆದಂತಾಯಿತು. ಮಾರಪ್ಪ ತನ್ನ ಮಾರು-ವೇಷವನ್ನು ಪ್ರದರ್ಶಿಸಲಾರಂಭಿಸಿದ.

'ಸ್ಕ್ರೀನ್ ಕ್ಲಾತ್ ಕಾಟನ್ ಫೀಲ್ ಇರಲೀನೋ, ಫ್ಯಾಬ್ರಿಕ್ ಫೀಲ್ ಇರಲೀನೋ?'

ನಾನು ಅವರೆಗೆ ಕಾಟನ್ ಸಹ ಫ್ಯಾಬ್ರಿಕ್ ಎಂದೇ ತಿಳಿದಿದ್ದೆ.

'ಫ್ಯಾಬ್ರಿಕ್' ಎಂದಳು ಮಡದಿ.

'ಒರಟು ಫೀಲ್ ಇರಲೀನೋ, ಸಾಫ್ಟೋ?'

'ನೋಡಕ್ಕೆ ಒರಟು, ಮುಟ್ಟಕ್ಕೆ ಸಾಫ್ಟು.'

'ಸೌಂಡ್ ಪ್ರೂಫೋ, ಸೌಂಡ್ ಫ್ರೆಂಡ್ಲೀನೋ?'

'ಸೌಂಡ್ ಪ್ರೂಫ್.'

ನನಗೆ ಒಳಗೇ ತಳಮಳ. ಮಡದಿ ಸೀರಿಯಲ್ ನೋಡುವಾಗ ಪಕ್ಕದ ಮನೆಯವನು ನೋಡುವ ಐಪಿಎಲ್‌ನ ಸೌಂಡನ್ನಾದರೂ ಕೇಳಿ ಸ್ಕೋರ್ ತಿಳಿಯುವ ಅವಕಾಶವು ಕರ್ಟನ್ ಸೌಂಡೂಪ್ರೂಫ್ ಆದರೆ ತಪ್ಪಿಹೋಗುವುದಲ್ಲ!

'ಕರ್ಟನ್ ಫುಲ್ ಲೆಂತ್ ಇರಲಿ.'

'ಇರಲಿ.'

'ಛೆ! ಬಟ್ಟೆ ದಂಡವಷ್ಟೆ. ಕಿಟಕಿಯಿಂದ ಒಂದು ಅಡಿ ಕೆಳಗಿದ್ದರೆ ಸಾಕು' ಎಂದೆ.

'ಛೆ! ಸುಮ್ಮನಿರಿ! ಅಷ್ಟು ಪುಟ್ಟದಾದ ವಸ್ತ್ರಗಳನ್ನು ತೊಡಕ್ಕೆ ಕಿಟಕಿಗಳೇನು ಟೀನೇಜರ್ಸಾ?' ಗುಡುಗಿದಳು ಮಡದಿ.

ಮಾರಪ್ಪ ವಿವಿಧ ಪರದೆಗಳ ತುಣುಕುಗಳಿರುವ ಬೃಹತ್ ಆಲ್ಬಮ್ ಅನ್ನು ಮುಂದಿರಿಸಿದ. ಮಡದಿಯು ಪ್ರತಿಯೊಂದನ್ನೂ ಮುಟ್ಟಿ, ಸವರಿ, ನೇವರಿಸಿ, ಪ್ರತಿಯೊಂದಕ್ಕೂ 'ಇದು ತುಂಬಾ ಸಾಫ್ಟು', 'ಇದು ಸೂಪರ್ ಫೀಲ್, ಬಟ್ ನೋಡಕ್ಕೆ ಅಗ್ಲಿ', 'ಇದು ಓಕೆ; ಆದರೆ ಕಲರ್ ನನ್ನ ಹತ್ತಿರ ಇರುವ ಯಾವ ಡ್ರೆಸ್‌ಗೂ ಮ್ಯಾಚ್ ಆಗಲ್ಲ' ಎನ್ನುತ್ತಾ ಸಾಗಿ, ಕಡೆಗೆ ಎರಡು ವಿಧದ ಪರದೆಗಳನ್ನು ಆಯ್ಕೆ ಮಾಡಿದಳು.

ಮಾರಪ್ಪ ಅವುಗಳ ಬೆಲೆ ಹೇಳಿದ. ನಾನು ಹೌಹಾರಿದೆ. ಮಡದಿಯ ಮುಖ ಉಬ್ಬಿತು. ಮಗನಿಗೆ ಫೋನ್ ಹೋಯಿತು.

'ಅಮ್ಮ ಹೇಳಿದ್ದನ್ನ ತೊಗೊ' ಎಂದ ಮಗ.

'ಅಪ್ಪ ಹೇಳೋದನ್ನ ಕೇಳು' ಎಂದಳು ಮಗಳು.

'ನೀವಿಬ್ಬರೂ ಸ್ಕ್ರೀನಿಂಗ್ ಕಮಿಟಿ ಆಗಕ್ಕೆ ನಾಲಾಯಕ್ಕು. ನಿಮ್ಮ ಮಕ್ಕಳನ್ನು ಕಳುಹಿಸಿ' ಎಂದ ಮಾರಪ್ಪ. ಅವನು ಹೇಳಿದ್ದು ನಮಗೆ ವೇದವಾಕ್ಯವಾಯಿತು.

ಪ್ರಧಾನಿ ಮನವಿಯ ಹಿಂದಿನ ಕಾರಣಗಳು

ಪ್ರಸನ್ನ ಕಂಬದಮಣಿ

ಪ್ರಧಾನಮಂತ್ರಿಗಳು ಇತ್ತೀಚೆಗೆ ದೇಶದ ಜನರಿಗೆ ಒಂದು ವರ್ಷದ ಕಾಲ ಚಿನ್ನ ಖರೀದಿಸಬೇಡಿ, ವಿದೇಶಿ ಪ್ರವಾಸಗಳನ್ನು ಕಡಿಮೆ ಮಾಡಿ, ಸಾಧ್ಯವಾದರೆ ಮನೆಯಿಂದಲೇ ಕೆಲಸ ಮಾಡಿ ಮತ್ತು ಇಂಧನ ಉಳಿಸುವ ಕ್ರಮಗಳನ್ನು ಅನುಸರಿಸಿ ಎಂದು ಮನವಿ ಮಾಡಿದರು. ಸಾಮಾನ್ಯವಾಗಿ ಸರ್ಕಾರಗಳು ಜನರಿಗೆ ನೇರವಾಗಿ ಇಂತಹ ಸಲಹೆಗಳನ್ನು ನೀಡುವುದಿಲ್ಲ, ಅದರಲ್ಲೂ ದೇಶದಲ್ಲಿ ಆಗುತ್ತಿರುವ ಆರ್ಥಿಕ ಬದಲಾವಣೆಗೆ ಸಂಬಂಧಿಸಿ 'ಪ್ರಧಾನಿ'ಯವರೇ ಸಂದೇಶ ನೀಡುವುದು ವಿರಳಾತಿ ವಿರಳ. ವಿಶೇಷವಾಗಿ ಜಗತ್ತಿನ ದೊಡ್ಡ ಆರ್ಥಿಕತೆಗಳಲ್ಲಿ ಒಂದಾದ ಭಾರತದಲ್ಲಿ ಇಂತಹ ಮನವಿಗಳು ಕೇಳಿಬಂದಾಗ, ಅದರ ಹಿಂದೆ ಕೇವಲ ರಾಜಕೀಯ ಸಂದೇಶವಷ್ಟೇ ಅಲ್ಲ, ಆರ್ಥಿಕ ಹೊಣೆಗಾರಿಕೆಯೂ ಅಡಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಕಳೆದ ಕೆಲವು ತಿಂಗಳಿಂದ ದೇಶದಲ್ಲಿ ನಡೆಯುತ್ತಿರುವ ಆರ್ಥಿಕ ಚರ್ಚೆಗಳಲ್ಲಿ ''ರೂಪಾಯಿ ಮೌಲ್ಯ ಕುಸಿತ'', ''ತೈಲ ಬೆಲೆ ಏರಿಕೆ'', ''ಜಾಗತಿಕ ಯುದ್ಧದ ಪರಿಣಾಮ'' ಎಂಬ ಪದಗಳು ಹೆಚ್ಚಾಗಿ ಕೇಳಿಬರುತ್ತಿವೆ. ಆದರೆ ಈ ಘಟನೆಗಳನ್ನು ಪ್ರತ್ಯೇಕವಾಗಿ ನೋಡುವುದಕ್ಕಿಂತ, ಅವುಗಳ ನಡುವೆ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು ಹೆಚ್ಚು ಮುಖ್ಯ. ಮಧ್ಯಪ್ರಾಚ್ಯದಲ್ಲಿ ಉಂಟಾದ ಉದ್ವಿಗ್ನತೆ, ಹೋರ್ಮುಜ್ ಜಲ ಮಾರ್ಗದಲ್ಲಿನ ಅಸ್ಥಿರತೆ, ಜಾಗತಿಕ ತೈಲ ಸರಬರಾಜಿನ ವ್ಯತ್ಯಯ, ಭಾರತದ ಹೆಚ್ಚುತ್ತಿರುವ ಆಮದು ವೆಚ್ಚ, ರೂಪಾಯಿ ಮೇಲಿನ ಒತ್ತಡ ಮತ್ತು ಸರ್ಕಾರದ ಕ್ರಮಗಳು ಇವೆಲ್ಲವೂ ಒಂದೇ ಆರ್ಥಿಕ ಸರಪಳಿಯ ವಿಭಿನ್ನ ಹಂತಗಳಾಗಿವೆ. ಮೊದಲು ಸರ್ಕಾರಗಳು ಆರ್ಥಿಕ ನೀತಿಗಳ ಮೂಲಕ ಇಂತಹ ಸಮಸ್ಯೆಗಳನ್ನು ಸರಿ ಮಾಡಲು ಪ್ರಯತ್ನಿಸುತ್ತವೆ. ನಂತರ ಆಡಳಿತಾತ್ಮಕವಾಗಿ ಪ್ರಯತ್ನ ಮಾಡುತ್ತವೆ. ಮುಂದುವರೆದು ಜನರ ಬಳಿ ವಿನಂತಿ ಮಾಡಲು ಪ್ರಯತ್ನಿಸುತ್ತದೆ ಮತ್ತು ಇವೆಲ್ಲವೂ ಆದ ನಂತರ ಕೊನೆಯದಾಗಿ ಒಂದಿಷ್ಟು ಕಠಿಣ ನಿಯಮಗಳು ಜಾರಿ ಆದರೆ ಅಚ್ಚರಿಯಿಲ್ಲ.



ಜಗತ್ತಿನ ಒಟ್ಟು ಕಚ್ಚಾ ತೈಲ ಸಾಗಣೆಯ ಸುಮಾರು 20 ಶೇಕಡಾ ಹೋರ್ಮುಜ್ ಜಲಸಂಧಿಯ ಮೂಲಕ ಸಾಗುತ್ತದೆ. 2026ರ ಫೆಬ್ರವರಿ ಕೊನೆಯಲ್ಲಿ ಇರಾನ್, ಅಮೆರಿಕಾ ಮತ್ತು ಕೆಲವು ದೇಶಗಳ ನಡುವೆ ಉಂಟಾದ ಯುದ್ಧದ ಉದ್ವಿಗ್ನತೆ ಈ ಮಾರ್ಗವನ್ನು ಅಸ್ಥಿರಗೊಳಿಸಿತು. ಅನೇಕ ವಾಣಿಜ್ಯ ಹಡಗುಗಳಿಗೆ ಭದ್ರತಾ ಆತಂಕ ಎದುರಾಯಿತು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಸರಬರಾಜಿನ ಬಗ್ಗೆ ಭಯ ಹೆಚ್ಚಾಯಿತು. ಪರಿಣಾಮವಾಗಿ 2025ರಲ್ಲಿ ಸುಮಾರು 70 ರಿಂದ 80 ಡಾಲರ್ ನಡುವೆ ಸ್ಥಿರವಾಗಿದ್ದ ಬ್ರೆಂಟ್ ಕ್ರೂಡ್ ಬೆಲೆ ಕೆಲವೇ ವಾರಗಳಲ್ಲಿ 100 ರಿಂದ 115 ಡಾಲರ್ ಮಟ್ಟಕ್ಕೆ ಏರಿತು.

ಈ ಬೆಳವಣಿಗೆಗಳು ಭಾರತಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದವು. ಭಾರತ ತನ್ನ ಅಗತ್ಯದ ಸುಮಾರು 85 ಶೇಕಡಾ ಕಚ್ಚಾ ತೈಲವನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ಅದರಲ್ಲಿ ಅರ್ಧದಷ್ಟು ತೈಲ ಹೋರ್ಮುಜ್ ಮಾರ್ಗದ ಮೂಲಕವೇ ಬರುತ್ತದೆ. 2025.26 ಹಣಕಾಸು ವರ್ಷದಲ್ಲಿ ಭಾರತ ಸುಮಾರು 174.9 ಬಿಲಿಯನ್ ಡಾಲರ್ ಮೌಲ್ಯದ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿತ್ತು. ಇದು ದೇಶದ ಒಟ್ಟು ಆಮದು ವೆಚ್ಚದ ಸುಮಾರು 22 ಶೇಕಡಾ. ತೈಲದ ಬೆಲೆ ಪ್ರತಿ 10 ಡಾಲರ್ ಏರಿದಾಗ ಭಾರತದ ವಾರ್ಷಿಕ ಆಮದು ಬಿಲ್ ಸುಮಾರು 15 ರಿಂದ 20 ಬಿಲಿಯನ್ ಡಾಲರ್ ಹೆಚ್ಚಾಗುತ್ತದೆ ಎಂದು ಅಂದಾಜಿಸಲಾಗಿದೆ. ಅಂದರೆ ಜಾಗತಿಕ ಮಾರುಕಟ್ಟೆಯ ಅಸ್ಥಿರತೆ ನೇರವಾಗಿ ಭಾರತದ ಹಣಕಾಸಿನ ಮೇಲೆ ಪರಿಣಾಮ ಬೀರುತ್ತದೆ.

ತೈಲದ ಬೆಲೆ ಏರಿದಂತೆ ಭಾರತಕ್ಕೆ ಹೆಚ್ಚು ಡಾಲರ್ ಅಗತ್ಯವಾಗುತ್ತದೆ. ತೈಲ ಖರೀದಿಸಲು ಭಾರತೀಯ ಕಂಪನಿಗಳು ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚು ಡಾಲರ್ ಖರೀದಿಸಬೇಕಾಗುತ್ತದೆ. ಡಾಲರ್‌ಗೆ ಬೇಡಿಕೆ ಹೆಚ್ಚಿದಂತೆ ರೂಪಾಯಿ ಮೌಲ್ಯ ಕುಸಿಯುವುದು ಸಹಜ. 2026ರ ಆರಂಭದಲ್ಲಿ ಒಂದು ಡಾಲರ್‌ಗೆ ಸುಮಾರು 85.64 ರೂಪಾಯಿ ಇದ್ದ ಮೌಲ್ಯ, ಮಾರ್ಚ್ ವೇಳೆಗೆ 90 ದಾಟಿ, ತಿಂಗಳ ಅಂತ್ಯದ ವೇಳೆಗೆ 95.22 ಎಂಬ ಐತಿಹಾಸಿಕ ಕನಿಷ್ಠ ಮಟ್ಟವನ್ನು ತಲುಪಿತು. ಪ್ರಸ್ತುತ ರೂಪಾಯಿ ಸುಮಾರು 95ರ ಮಟ್ಟದಲ್ಲಿ ವಹಿವಾಟು ನಡೆಸುತ್ತಿದೆ. ಕೇವಲ ಐದು ತಿಂಗಳಲ್ಲಿ ಸುಮಾರು 6.5 ಶೇಕಡಾ ಮೌಲ್ಯ ಕುಸಿತ ಕಂಡಿರುವುದು ಏಷ್ಯಾದ ಪ್ರಮುಖ ಕರೆನ್ಸಿಗಳಲ್ಲಿ ಅತ್ಯಂತ ದುರ್ಬಲ ಪ್ರದರ್ಶನವಾಗಿದೆ. ಹೋಲಿಕೆಗೆ ಥಾಯ್ಲೆಂಡ್‌ನ ಬಾಟ್ ಕೇವಲ 3.5 ಶೇಕಡಾ ಕುಸಿದರೆ, ಚೀನಾದ ಯುವಾನ್ ಮೌಲ್ಯದಲ್ಲಿ ಸ್ವಲ್ಪ ಏರಿಕೆಯೇ ಕಂಡಿದೆ.

ರೂಪಾಯಿ ಕುಸಿತ ಎಂದರೆ ಕೇವಲ ಕರೆನ್ಸಿ ಮೌಲ್ಯದ ಪ್ರಶ್ನೆಯಲ್ಲ, ಅದರ ಪರಿಣಾಮ ಸಾಮಾನ್ಯ ಜನರ ದೈನಂದಿನ ಜೀವನದ ಮೇಲೆ ಬೀಳುತ್ತದೆ. ಪೆಟ್ರೋಲ್ ಮತ್ತು ಡೀಸೆಲ್ ದುಬಾರಿಯಾಗುತ್ತದೆ. ಆಮದು ಮಾಡಿಕೊಂಡ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ಬೆಲೆ ಏರಿಕೆಯಾಗುತ್ತದೆ. ವಿದೇಶಿ ಶಿಕ್ಷಣ ಮತ್ತು ಪ್ರವಾಸ ವೆಚ್ಚ ಹೆಚ್ಚುತ್ತದೆ. ರೂಪಾಯಿ ಕುಸಿತವನ್ನು ನಿಯಂತ್ರಿಸಲು ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ವಿದೇಶಿ ವಿನಿಮಯ ಸಂಗ್ರಹವನ್ನು ಬಳಸತೊಡಗಿತು. ಆರ್‌ಬಿಐ ಮಾರುಕಟ್ಟೆಯಲ್ಲಿ ಡಾಲರ್ ಮಾರಾಟ ಮಾಡಿ ರೂಪಾಯಿಯನ್ನು ಸಪೋರ್ಟ್ ಮಾಡುತ್ತಿದೆ. 2026ರ ಫೆಬ್ರವರಿ 27ರಂದು ಭಾರತದ ವಿದೇಶಿ ವಿನಿಮಯ ಸಂಗ್ರಹ 728.5 ಬಿಲಿಯನ್ ಡಾಲರ್ ಮಟ್ಟದಲ್ಲಿತ್ತು. ಆದರೆ ಮೇ 1ರ ವೇಳೆಗೆ ಅದು 690.7 ಬಿಲಿಯನ್ ಡಾಲರ್‌ಗೆ ಇಳಿದಿದೆ. ಅಂದರೆ ಕೇವಲ ಒಂಬತ್ತು ವಾರಗಳಲ್ಲಿ ಸುಮಾರು 38 ಬಿಲಿಯನ್ ಡಾಲರ್ ಸಂಗ್ರಹ ಕಡಿಮೆಯಾಗಿದೆ. ಮೇ 1ರಂದು ಕೊನೆಯಾದ ವಾರದಲ್ಲೊಂದರಲ್ಲೇ 7.79 ಬಿಲಿಯನ್ ಡಾಲರ್ ಕುಸಿತ ದಾಖಲಾಗಿದೆ.

ಈಗಿನ ಪರಿಸ್ಥಿತಿಯನ್ನು ಕೆಲವರು 1991ರ ಆರ್ಥಿಕ ಬಿಕ್ಕಟ್ಟಿನೊಂದಿಗೆ ಹೋಲಿಸುತ್ತಿದ್ದರೂ, ವಾಸ್ತವದಲ್ಲಿ ಪರಿಸ್ಥಿತಿ ಅದಕ್ಕಿಂತ ಭಿನ್ನವಾಗಿದೆ. 1991ರಲ್ಲಿ ಭಾರತದ ಬಳಿ ಕೇವಲ ಮೂರು ವಾರಗಳ ಆಮದಿಗೆ ಸಾಕಾಗುವಷ್ಟು ಮಾತ್ರ ವಿದೇಶಿ ವಿನಿಮಯ ಸಂಗ್ರಹ ಇತ್ತು. ಆದರೆ ಈಗಲೂ ಭಾರತಕ್ಕೆ ಸುಮಾರು 10 ರಿಂದ 11 ತಿಂಗಳ imports cover ಇದೆ. ಹೀಗಾಗಿ ಇದು ತಕ್ಷಣದ solvency crisis ಅಲ್ಲ, ಆದರೆ ಸಮಸ್ಯೆ ಸಂಗ್ರಹದ ಪ್ರಮಾಣದಲ್ಲಲ್ಲ; ಅದು ಕಡಿಮೆಯಾಗುತ್ತಿರುವ ವೇಗದಲ್ಲಿದೆ. ಆರ್‌ಬಿಐ ನಿರಂತರವಾಗಿ ವಾರಕ್ಕೆ 5 ರಿಂದ 8 ಬಿಲಿಯನ್ ಡಾಲರ್ ಬಳಸಬೇಕಾದರೆ, ಸರ್ಕಾರ ಮತ್ತು ಹಣಕಾಸು ವ್ಯವಸ್ಥೆಯ ಮೇಲೆ ಒತ್ತಡ ಹೆಚ್ಚಾಗುವುದು ಅನಿವಾರ್ಯ.

ಈ ಒತ್ತಡದ ಹಿನ್ನೆಲೆಯಲ್ಲಿ ಸರ್ಕಾರ ಕ್ರಮೇಣ ತನ್ನ ನೀತಿಗಳನ್ನು ಗಟ್ಟಿಗೊಳಿಸುತ್ತಿದೆ. ಮೊದಲ ಹಂತದಲ್ಲಿ ಆರ್‌ಬಿಐ ಮಾರುಕಟ್ಟೆಯಲ್ಲಿ ಹಸ್ತಕ್ಷೇಪ ನಡೆಸಿತು. ನಂತರ ಬ್ಯಾಂಕ್‌ಗಳ foreign exchange positions ಮೇಲೆ ನಿಯಂತ್ರಣ ತರಲಾಯಿತು. ರಫ್ತುದಾರರು ತಮ್ಮ ಡಾಲರ್ ಆದಾಯವನ್ನು ತಕ್ಷಣ ಭಾರತಕ್ಕೆ ತರಬೇಕು ಎಂಬ ಚರ್ಚೆಗಳು ಆರಂಭವಾದವು. ಈಗ ಸರ್ಕಾರ ಜನರ ಮಟ್ಟಕ್ಕೆ ಸಂದೇಶ ಕಳುಹಿಸುತ್ತಿದೆ. ಚಿನ್ನ ಖರೀದಿ ಕಡಿಮೆ ಮಾಡಿ, ವಿದೇಶ ಪ್ರವಾಸ ತಪ್ಪಿಸಿ, ಇಂಧನ ಉಳಿಸಿ ಎಂಬ ಮನವಿಗಳು ಇದೇ ಭಾಗ. ಈ ಪರಿಸ್ಥಿತಿಯ ಪರಿಣಾಮ ವಿವಿಧ ಕ್ಷೇತ್ರಗಳ ಮೇಲೆ ವಿಭಿನ್ನ ರೀತಿಯಲ್ಲಿ ಕಾಣಿಸಿಕೊಳ್ಳುತ್ತಿದೆ. ಭಾರತವು ಜಗತ್ತಿನ ಅತಿದೊಡ್ಡ ಚಿನ್ನ ಬಳಕೆದಾರ ರಾಷ್ಟ್ರಗಳಲ್ಲಿ ಒಂದಾಗಿರುವುದರಿಂದ, ಚಿನ್ನದ ಆಮದು ಕಡಿಮೆ ಮಾಡುವ ಸರ್ಕಾರದ ಪ್ರಯತ್ನ ಮಾರುಕಟ್ಟೆಯ ಮೇಲೆ ಪರಿಣಾಮ ಬೀರುತ್ತಿದೆ. ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲೂ ಅನಿಶ್ಚಿತತೆ ಹೆಚ್ಚಾಗಿದೆ. ಭಾರತದಲ್ಲಿ assemble ಆಗುವ ಅನೇಕ ಮೊಬೈಲ್, ಲ್ಯಾಪ್‌ಟಾಪ್ ಮತ್ತು ಟಿವಿಗಳು port restrictions ಮೇಲೆ ಅವಲಂಬಿತವಾಗಿವೆ. ಸರ್ಕಾರ import restrictions ತಂದರೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಬೆಲೆ ಎರಡೂ ಏರಬಹುದು. ಆದರೆ ಪ್ರತಿಯೊಂದು ಕ್ಷೇತ್ರಕ್ಕೂ ಈ ಪರಿಸ್ಥಿತಿ ಒಂದೇ ರೀತಿಯ ಪರಿಣಾಮ ಬೀರುವುದಿಲ್ಲ. ಭಾರತೀಯ ಐಟಿ ಕಂಪನಿಗಳಿಗೆ ದುರ್ಬಲ ರೂಪಾಯಿ ಕೆಲ ಮಟ್ಟಿಗೆ ಲಾಭಕರವಾಗಬಹುದು. ಏಕೆಂದರೆ ಅವರ ಆದಾಯದ ಬಹುಪಾಲು ಡಾಲರ್‌ನಲ್ಲಿ ಬರುತ್ತದೆ, ಆದರೆ ವೆಚ್ಚಗಳು ರೂಪಾಯಿಯಲ್ಲಿ ಇರುತ್ತವೆ. ಹೀಗಾಗಿ ರೂಪಾಯಿ ಕುಸಿತದಿಂದ ಅವರ operating margins ಹೆಚ್ಚಾಗುವ ಸಾಧ್ಯತೆ ಇದೆ.

ಮುಂದಿನ ಕೆಲವು ವಾರಗಳು ಮತ್ತು ತಿಂಗಳುಗಳು ಭಾರತದ ಆರ್ಥಿಕತೆಗೆ ಅತ್ಯಂತ ಮಹತ್ವದ್ದಾಗಿರಬಹುದು. ಪರಿಸ್ಥಿತಿ ಸುಧಾರಿಸಬೇಕಾದರೆ ಮಧ್ಯಪ್ರಾಚ್ಯದ ಉದ್ವಿಗ್ನತೆ ಕಡಿಮೆಯಾಗಬೇಕು ಮತ್ತು ಹೋರ್ಮುಜ್ ಮಾರ್ಗ ಪುನಃ ಸ್ಥಿರವಾಗಬೇಕು. ಒಂದು ವೇಳೆ ತೈಲದ ಬೆಲೆ 90 ಡಾಲರ್‌ಗಿಂತ ಕೆಳಗೆ ಇಳಿದರೆ ರೂಪಾಯಿ ಸ್ಥಿರವಾಗಬಹುದು ಮತ್ತು ಸರ್ಕಾರದ ಕಠಿಣ ಕ್ರಮಗಳ ಅಗತ್ಯವೂ ಕಡಿಮೆಯಾಗಬಹುದು. ಆದರೆ ತೈಲದ ಬೆಲೆ 110 ಡಾಲರ್ ಮೇಲಾಗಿಯೇ ಉಳಿದರೆ ಸರ್ಕಾರ ಚಿನ್ನ ಮತ್ತು ಎಲೆಕ್ಟ್ರಾನಿಕ್ ಆಮದಿನ ಮೇಲೆ ಗಟ್ಟಿಯಾದ ನಿಯಂತ್ರಣ ತರಬಹುದು. ಇಂಧನ ಬೆಲೆ ಏರಿಕೆ ಮತ್ತು ವಿದೇಶಿ ವಿನಿಮಯ ನಿಯಂತ್ರಣಗಳ ಸಾಧ್ಯತೆಯನ್ನೂ ತಳ್ಳಿ ಹಾಕಲು ಸಾಧ್ಯವಿಲ್ಲ. ಭಾರತ ಇಂದು 1991ರಂತಿಲ್ಲ. ದೇಶದ IT exports, banking system, domestic consumption ಎಲ್ಲವೂ ಬಹಳ ಬಲಿಷ್ಠವಾಗಿವೆ. ಆದರೆ ಇದೊಂದು ಸಾಮಾನ್ಯ ಪರಿಸ್ಥಿತಿ ಕೂಡ ಅಲ್ಲ. ಇದು ಜಾಗತಿಕ ರಾಜಕೀಯ ಸಂಘರ್ಷದಿಂದ ಭಾರತದ ಆರ್ಥಿಕತೆಯ ಮೇಲೆ ಬಂದಿರುವ ದೊಡ್ಡ ಒತ್ತಡ ಪರೀಕ್ಷೆ ಅಷ್ಟೆ. ಈ ಸಂದರ್ಭದಲ್ಲಿ ಅತ್ಯಂತ ಮುಖ್ಯವಾದುದು ಬ್ರೇಕಿಂಗ್ ನ್ಯೂಸ್ ನೋಡಿ ಆತಂಕಪಡುವುದಲ್ಲ; ಬದಲಾಗಿ ಆರ್ಥಿಕ ಸಂಕೇತಗಳನ್ನು ಗಮನಿಸುವುದು ಬಹಳ ಮುಖ್ಯ. ಏಕೆಂದರೆ ಆರ್ಥಿಕತೆಯ ನಿಜವಾದ ಕಥೆ ಯಾವಾಗಲೂ ಸುದ್ದಿಶೀರ್ಷಿಕೆಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ, ಅದು ಅಂಕಿ ಸಂಖ್ಯೆಗಳ ಒಳಗೆ ಅಡಗಿರುತ್ತದೆ.

ಮೋದಿಯವರ ಈ ಮನವಿಯನ್ನು ಕೆಲವರು ಬೇರೆ ದೃಷ್ಟಿಕೋನದಲ್ಲಿ ವಿಶ್ಲೇಷಿಸಲು ಶುರು ಮಾಡಿಯಾಗಿದೆ. ಭಾರತವನ್ನು 'ದುರ್ಬಲ ದೇಶ' ಎಂದು ಬಿಂಬಿಸುವ ಕೆಲಸವೂ ನಡೆದಿದೆ. ಸರ್ಕಾರ ಯಾವುದಾದರೂ ಇರಲಿ, ದೇಶದ ನಾಗರಿಕನಿಗೆ ತನ್ನ ದೇಶದ ಮೇಲೆ 'ನಂಬಿಕೆ' ಮತ್ತು ಪ್ರೀತಿ ಎರಡೂ ಇರಬೇಕು, ಅಷ್ಟೇ!

ಸೈದ್ಧಾಂತಿಕ ಶೂನ್ಯದಲ್ಲಿ ಮೇಲೆದ್ದು ಬಂದ ವಿಜಯ್

ಪೂರ್ಣಿಮಾ

ವಿಜಯ್ ಈಗ ತಮಿಳ್ನಾಡು ರಾಜಕೀಯದ ಕೇಂದ್ರ ಬಿಂದುವಾಗಿದ್ದಾರೆ. ಆಡಳಿತ ವಿರೋಧಿ ರಾಜಕೀಯ ಮತ್ತು ನವಪೀಳಿಗೆಯ ಆಕ್ರೋಶದ ಸಂಕೇತವಾಗಿದ್ದಾರೆ. ಆದರೆ ಅವರ ಏಳಿಗೆಯು ರಾಜಕೀಯ ಶೂನ್ಯವೊಂದನ್ನೂ ತೋರಿಸುತ್ತಿದೆ. ಹಳೆಯ ದ್ರಾವಿಡ ವ್ಯವಸ್ಥೆಯು ವಿಶ್ವಾಸ ಕಳೆಕೊಳ್ಳುತ್ತಿದೆ. ಇದೇವೇಳೆ, ನೂತನ ಪರ್ಯಾಯ ವ್ಯವಸ್ಥೆಯು ಇನ್ನೂ ಅನನುಭವಿಯಾಗಿ ಮತ್ತು ಸಂಘಟನಾತ್ಮಕವಾಗಿ ದುರ್ಬಲವಾಗಿ ಕಂಡುಬರುತ್ತಿದೆ.

ಜೋಸೆಫ್ ವಿಜಯ್ ಈಗ ಸಿನಿಮೀಯ ಕಲ್ಪನೆಗಿಂತಲೂ ಕಠಿಣವಾದ ವಾಸ್ತವಿಕತೆಯೆಗೆ ಕಣ್ಣು ತೆರೆಯುತ್ತಿದ್ದಾರೆ. ತಮಿಳ್ನಾಡು ರಾಜ್ಯವು ಹೀರೋ ಒಬ್ಬನ ಪ್ರವೇಶಕ್ಕೆ ತೆರವಾಗಿ ನಿಂತ ಥಿಯೇಟರ್ ಅಲ್ಲ. ತಮಿಳ್ನಾಡು ದೇಶದ ಅತ್ಯಂತ ರಾಜಕೀಯ ಸೂಕ್ಷ್ಮತೆಯ ರಾಜ್ಯವೂ ಹೌದು. ದಶಕಗಳ ಕಾಲದ ಸೈದ್ಧಾಂತಿಕ ಸಂಘರ್ಷಗಳು, ಭಾಷಾಭಿಮಾನ ಮುಂತಾದವು ಅದನ್ನು ರೂಪಿಸಿದೆ. ವಿಜಯ್ ಚುನಾವಣೆ ಗೆದ್ದಿರಬಹುದು, ಆದರೆ ಆಡಳಿತ ಯಂತ್ರವನ್ನು ಸುಗಮವಾಗಿ ನಡೆಸುವುದು ಅವರಿಗೆ ಸವಾಲು ಒಡ್ಡಲಿದೆ.

ತಮಿಳ್ನಾಡು ಈಗ ಐತಿಹಾಸಿಕ ಕವಲುದಾರಿಯಲ್ಲಿದೆ. ಆರು ದಶಕಗಳ ಕಾಲ ರಾಜ್ಯವನ್ನು ಪ್ರಭಾವಿಸಿದ ದ್ರಾವಿಡ ವ್ಯವಸ್ಥೆಯು ಈಗ ದುರ್ಬಲಗೊಳ್ಳುತ್ತಿದೆ. ಹಾಗೆಂದು ಅದಕ್ಕೆ ಪ್ರಭಾವಿ ಪರ್ಯಾಯ ವ್ಯವಸ್ಥೆಯೂ ಬೆಳೆದಿಲ್ಲ, ಸಂಘಟನಾ ಶಕ್ತಿ ಇನ್ನೂ ಡಿಎಂಕೆಯಲ್ಲೇ ಉಳಿದಿದೆ. ಎಐಎಡಿಎಂಕೆ ಪಕ್ಷವು ಎಂಜಿಆರ್, ಜಯಲಲಿತಾ ಕಾಲದ ನಿಷ್ಠಾವಂತರನ್ನು ಮತ್ತು ಜಾತಿ ಸಮೀಕರಣವನ್ನು ನಂಬಿಕೊಂಡು ಉಳಿದಿದೆ. ಆದರೆ ಇವೆರಡೂ ಪಕ್ಷಗಳು ಸೈದ್ಧಾಂತಿಕವಾಗಿ ಬಸವಳಿದಿವೆ. ಸಾಮಾಜಿಕ ನ್ಯಾಯ, ಗಣರಾಜ್ಯ ವ್ಯವಸ್ಥೆ, ತಮಿಳು ಅಸ್ಮಿತೆ ಮುಂತಾಗಿ ಅವು ಮಾತನಾಡುತ್ತಲೇ ಇರುತ್ತವಾದರೂ ಅವುಗಳ ರಾಜಕೀಯವು ಬಹುವಾಗಿ ಅಧಿಕಾರಶಾಹಿ ಮ್ಯಾನೇಜ್‌ಮೆಂಟ್‌ನಂತೆ ಕಾಣುತ್ತದೆಯೇ ಹೊರತು ಜನರನ್ನು ಒಳಗೊಳ್ಳುವ ನೀತಿಯಾಗಿ ಅಲ್ಲ. ಈ ಶೂನ್ಯದ ಕಾರಣದಿಂದಲೇ ವಿಜಯ್ ಎದ್ದುಬರುವಂತಾದುದು.

ತಮಿಳ್ನಾಡು ಸಿನಿಮಾ ರಾಜಕೀಯಕ್ಕೆ ಅಂಟಿಕೊಂಡಿದೆ ಎಂಬುದಾಗಿ ರಾಷ್ಟ್ರೀಯ ರಾಜಕೀಯ ವಿಶ್ಲೇಷಕರು ಹೇಳುವುದಿದೆ. ಆದರೆ ಈ ವ್ಯಾಖ್ಯಾನವು ಆಳವಾದ ಐತಿಹಾಸಿಕ ಸತ್ಯವನ್ನು ಮರೆಮಾಚುತ್ತದೆ. ಎಂಜಿಆರ್ ಮತ್ತು ಜಯಲಲಿತಾ ತಾವು ಸಿನಿಮಾ ತಾರೆಯರೆಂಬ ಕಾರಣಕ್ಕಷ್ಟೇ ಯಶಸ್ಸು ಕಂಡುದಲ್ಲ, ದ್ರಾವಿಡ ಆಂದೋಲನವು ರೂಪಿಸಿದ ಭಾವನಾತ್ಮಕ ಮತ್ತು ಸೈದ್ಧಾಂತಿಕ ಚೌಕಟ್ಟಿನೊಳಗೆ ತಮ್ಮನ್ನು ತೊಡಗಿಸಿಕೊಂಡ ಕಾರಣಕ್ಕಾಗಿ ಕೂಡಾ ಅವರು ಯಶಸ್ಸು ಕಂಡರು. ತಮಿಳ್ನಾಡಿನಲ್ಲಿ ಸಿನಿಮಾಗಳು ರಾಜಕೀಯ ಪ್ರತಿರೂಪಗಳಾಗಿವೆ. ಸಿನಿಮಾ ಡೈಲಾಗ್‌ಗಳು ರಾಜಕೀಯ ಸಂದೇಶ ಸಾರುತ್ತವೆ. ಸಾಮಾನ್ಯ ಜನರ ಆಶೋತ್ತರಗಳನ್ನು ಭಾವನೆಗಳನ್ನು ಬಿಂಬಿಸಿದಾಗಲಷ್ಟೇ ಯಾವುದೇ ನಟನ 'ತಾರಾಗಿರಿ'ಗೆ ಅರ್ಥ ಬರುತ್ತದೆ. ಅದನ್ನು ಸಮರ್ಥವಾಗಿ ಬಳಸಿಕೊಂಡವರು ಮಾತ್ರ ರಾಜಕೀಯದಲ್ಲೂ ಮಿಂಚುತ್ತಾರೆ.



ಜನಪರ ಕಲ್ಯಾಣ ಕಾರ್ಯಕ್ರಮಗಳನ್ನು ಅಳವಡಿಸುವಲ್ಲಿ ತಮಿಳ್ನಾಡು ಯಾವತ್ತೂ ಮುಂದೆ. ಕಾಮರಾಜ್ ಆರಂಭಿಸಿದ ಮಧ್ಯಾಹ್ನದೂಟ ಯೋಜನೆ ಇದಕ್ಕೆ ನಿದರ್ಶನ. ಅದನ್ನು ಎಂಜಿಆರ್ ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೆ ತಂದರು.

ಕರುಣಾನಿಧಿ ಮತ್ತು ಬಳಿಕ ಅವರ ಪುತ್ರ ಸ್ಟಾಲಿನ್ ಅವಧಿಯಲ್ಲಿ ಡಿಎಂಕೆ ಪಕ್ಷವು ಆಡಳಿತ ವ್ಯವಸ್ಥೆಯಲ್ಲೇನೂ ಹಿಂದೆ ಬೀಳಲಿಲ್ಲ, ಕಲ್ಯಾಣ ಕಾರ್ಯಕ್ರಮಗಳನ್ನು ಅದೂ ಜಾರಿಗೆ ತಂದ ನಿದರ್ಶನಗಳಿವೆ. ಆಡಳಿತ ವೈಫಲ್ಯಕ್ಕಿಂತಲೂ ಹೆಚ್ಚಾಗಿ ಡಿಎಂಕೆಯ ಭಾವನಾತ್ಮಕ ಮತ್ತು ಸೈದ್ಧಾಂತಿಕ ದಿವಾಳಿತನವು ಅದರ ಪತನಕ್ಕೆ ಕಾರಣವಾಯಿತು. ಯುವ ಪೀಳಿಗೆಯ ಜನರನ್ನು ದ್ರಾವಿಡ ರಾಜಕೀಯ ಸೆಳೆಯುವುದಿಲ್ಲ, ಅವರಿಗೆ ಅದರಲ್ಲಿ ಆಸಕ್ತಿಯೂ ಮೂಡುವುದಿಲ್ಲ, ಐಟಿ ಜಗತ್ತಿನಲ್ಲಿ ಬದುಕುವ ಝೆನ್-ಜಿ ಮಂದಿಗೆ ಬ್ರಾಹ್ಮಣ ವಿರೋಧಿ ಹೇಳಿಕೆಗಳು ರೋಮಾಂಚಕವೆನಿಸುವುದಿಲ್ಲ, ನಿರುದ್ಯೋಗ ಸಮಸ್ಯೆ ಎದುರಿಸುತ್ತಿರುವ ಯುವಕರಿಗೂ ಬ್ರಾಹ್ಮಣ ವಿರೋಧಿ, ಹಿಂದಿ ವಿರೋಧಿ, ಸನಾತನ ವಿರೋಧಿ ಭಾವಕ್ಕಿಂತಲೂ ವಾಸ್ತವಿಕ ಜೀವನ ಹೆಚ್ಚು ಮುಖ್ಯವಾಗುತ್ತದೆ. ಹಾಗಾಗಿ ಡಿಎಂಕೆ, ಎಐಎಡಿಎಂಕೆಗಳನ್ನು ತಿರಸ್ಕರಿಸಲು ಜನರು ಕಾದಿದ್ದರು. ಅವರಿಗೆ ಪರ್ಯಾಯವಾಗಿ ವಿಜಯ್ ಒದಗಿದರು ಅಷ್ಟೆ.

ಚಿತ್ರನಟ ಕಮಲಹಾಸನ್ ರಾಜಕೀಯ ಪಕ್ಷ ಕಟ್ಟಿದರೂ ಅವರು ರಾಜಕೀಯದಲ್ಲಿ ಯಶಸ್ವಿಯಾಗಲಿಲ್ಲವೇಕೆಂದರೆ ಅವರು ರಾಜ್ಯದ ಜನರ ಭಾವನಾತ್ಮಕ ಮಿಡಿತ ಅರಿಯಲಿಲ್ಲ, ಅವರು ಸಿದ್ಧಾಂತವಾದಿಯಾಗಿ ವರ್ತಿಸಿದರು. ವಿಜಯ್ ಭಾವನಾತ್ಮಕ ಜನಪ್ರಿಯತೆಗೆ ಆದ್ಯತೆ ನೀಡಿದರು. ವಿಜಯ್ ದೊಡ್ಡ ಸಿದ್ಧಾಂತಗಳನ್ನು ಮಂಡಿಸಲಿಲ್ಲ, ಅವರು ಜನರ ಅವಶ್ಯಕತೆಗಳನ್ನು ಪೂರೈಸುವ ಮಾತನಾಡಿದರು. ವಂಶ ರಾಜಕೀಯ ವಿರೋಧಿಸುವ, ಭ್ರಷ್ಟಾಚಾರ ಕಿತ್ತೊಗೆಯುವ ಮಾತನಾಡಿದರು. ಅವರು ದ್ರಾವಿಡ ಸಿದ್ಧಾಂತವನ್ನೆ ಮುಂದುವರಿಸುವ ಮಾತನಾಡಲಿಲ್ಲ.

ವಿಜಯ್‌ರ ರಾಜಕೀಯ ಅನುಭವದ ಕೊರತೆಯು ಸರಕಾರ ರಚನೆಯ ಪ್ರಕ್ರಿಯೆಯಲ್ಲಿ ಎದ್ದು ಕಂಡಿತು. ಸಿನಿಮಾ ವರ್ಚಸ್ಸು ಬೇರೆ, ರಾಜಕೀಯದ ಹೊಂದಾಣಿಕೆಗಳು ಬೇರೆ ಎಂಬುದು ಅವರ ಅರಿವಿಗೆ ಈಗಾಗಲೆ ಬಂದಿರಬಹುದು.

ಒಟ್ಟಿನಲ್ಲಿ ವಿಜಯ್ ರಾಜಕೀಯ ಪ್ರಗತಿಯು ಪವಾಡಸದೃಶವೂ ಅಲ್ಲ, ಆಕಸ್ಮಿಕವೂ ಅಲ್ಲ, ತಮಿಳ್ನಾಡಲ್ಲಿ ಉಂಟಾದ ಸೈದ್ಧಾಂತಿಕ ಶೂನ್ಯದಿಂದಾಗಿ ಅವರ ಪಕ್ಷವು ಹಠಾತ್ತನೆ ಮೇಲೇಳುವಂತಾಯಿತು. ಹಳೆಯ ಸ್ಲೋಗನ್‌ಗಳಿಂದ ರೋಸಿಹೋದ ಸಮಾಜವು ಹೊಸ ಸಿದ್ಧಾಂತಗಳನ್ನು ಕಂಡುಕೊಳ್ಳದಾಗ ಹೀಗೆ ಯಾವುದಾದರೊಂದು ಹೊಸ ವ್ಯವಸ್ಥೆಯನ್ನು ಅಧಿಕಾರಕ್ಕೇರಿಸುವುದಿದೆ. ಅಪಾಯವೇನೆಂದರೆ ತಮಿಳ್ನಾಡು ಮತ್ತೆ ವ್ಯಕ್ತಿ ಕೇಂದ್ರಿತ ರಾಜಕೀಯದೆಡೆಗೆ ಹೊರಳುವ ಸಾಧ್ಯತೆಯಿದೆ. ಆಗ ಸಿದ್ಧಾಂತ ಮರೆಗೆ ಸರಿಯುತ್ತದೆ. ಅದು ಕೂಡಾ ರಾಜಕೀಯಕ್ಕೆ ಒಳಿತೇನಲ್ಲ.

ಡಾ.ಚಿನ್ಮಯಿ ಜೆ.ತ್ರಿಶೂಲಮೂರ್ತಿ, ಸಂತೋಷ್‌ದೇವರಾಜಪ್ಪ ತಂಡ

ಎವರೆಸ್ಟ್ ಶಿಖರವೇರಿದ ಸಾಧಕರು

• **ಬೆಂಗಳೂರು:** ವಿಶ್ವದ ಅತಿ ಎತ್ತರದ ಶಿಖರವಾದ ಮೌಂಟ್ ಎವರೆಸ್ಟ್ ಅನ್ನು ಕರ್ನಾಟಕದ ಇಬ್ಬರು ಪರ್ವತಾರೋಹಿಗಳು ಯಶಸ್ವಿಯಾಗಿ ಏರಿ ಹೊಸ ಸಾಧನೆ ಮಾಡಿದ್ದಾರೆ.

ದಿ ಕರ್ನಾಟಕ ಮೌಂಟೇನೀರಿಂಗ್ ಅಸೋಸಿಯೇಷನ್ ಸದಸ್ಯರಾದ ಬೆಂಗಳೂರಿನ ನೇತ್ರತಜ್ಞೆ ಡಾ. ಚಿನ್ಮಯಿ ಜೆ.ತ್ರಿಶೂಲಮೂರ್ತಿ ಹಾಗೂ ಸಂತೋಷ್ ದೇವರಾಜಪ್ಪ ಅವರು ನೇಪಾಳದ ಮಾರ್ಗವಾಗಿ 8,848.86 ಮೀಟರ್ ಎತ್ತರದ ಎವರೆಸ್ಟ್ ಶಿಖರವನ್ನು ತಲುಪಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ದಿ ಕರ್ನಾಟಕ ಮೌಂಟೇನೀರಿಂಗ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಕೆ. ಮೆಹತಾ, ಸಂಸ್ಥೆಯ 60ನೇ ವಾರ್ಷಿಕೋತ್ಸವದ ಸಂಭ್ರಮದ ಸಂದರ್ಭದಲ್ಲಿ ಈ ಸಾಧನೆ ನಡೆದಿರುವುದು ವಿಶೇಷ ಹೆಮ್ಮೆ ತಂದಿದೆ. ಮಾ 9ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದಲ್ಲಿ ಈ ಇಬ್ಬರು ಪರ್ವತಾರೋಹಿಗಳಿಗೆ ಶುಭ ಹಾರೈಸಿ ಬೀಳ್ಕೊಟ್ಟಿದ್ದರು. ಸುಮಾರು 46 ದಿನಗಳ ಕಠಿಣ ಅಭಿಯಾನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಅವರು ಎವರೆಸ್ಟ್ ಶಿಖರ ತಲುಪಿದ್ದಾರೆ ಎಂದು ತಿಳಿಸಿದ್ದಾರೆ.

ಹವಾಮಾನ ವೈಪರೀತ್ಯ, ಆಮ್ಲಜನಕದ ಕೊರತೆ ಹಾಗೂ ತೀವ್ರ ಚಳಿಯಂತಹ ಸವಾಲಿನ ನಡುವೆಯೂ ಇಬ್ಬರು ಕನ್ನಡಿಗರು ಸಾಧನೆ ಮಾಡಿರುವುದು ಯುವ ಪೀಳಿಗೆಗೆ



ಪ್ರೇರಣೆಯಾಗಿದೆ. ದಿ ಕರ್ನಾಟಕ ಮೌಂಟೇನೀರಿಂಗ್ ಅಸೋಸಿಯೇಷನ್ ಕಳೆದ ಹಲವು ವರ್ಷದಿಂದ ರಾಜ್ಯದಲ್ಲಿ ಟ್ರೆಕ್ಕಿಂಗ್ ಹಾಗೂ ಪರ್ವತಾರೋಹಣ ಚಟುವಟಿಕೆಯನ್ನು ಉತ್ತೇಜಿಸುತ್ತಿದೆ.

ಈಗಾಗಲೇ 300ಕ್ಕೂ ಹೆಚ್ಚು ಟ್ರೆಕ್ಕಿಂಗ್ ಮತ್ತು ಕ್ಲೈಂಬಿಂಗ್ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಸುಮಾರು 20 ಸಾವಿರಕ್ಕೂ ಹೆಚ್ಚು ಮಂದಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಸಂಸ್ಥೆಯ ಒಬ್ಬ ಸದಸ್ಯರು ರಾಜ್ಯ ಪ್ರಶಸ್ತಿ ಹಾಗೂ ಐವರು ದಸರಾ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಎಸ್.ಕೆ.ಮೆಹತಾ ತಿಳಿಸಿದ್ದಾರೆ.

ಜಿಬಿಎ ಅರಣ್ಯ ವಿಭಾಗದಿಂದ ಮಾಹಿತಿ

500ಕ್ಕೂ ಹೆಚ್ಚು ಮರಗಳು ನೆಲಸಮ

• **ಬೆಂಗಳೂರು:** ಪೂರ್ವ ಮುಂಗಾರು ಮಳೆಯ ಅರ್ಭಟಕ್ಕೆ ನಗರದಲ್ಲಿ ನೂರಾರು ಮರಗಳು ನೆಲಕ್ಕುರುಳಿವೆ. ಆದರೆ, ಅವುಗಳಲ್ಲಿ ಕೆಲವು ನಿರ್ದಿಷ್ಟ ಜಾತಿಯ ಮರಗಳು ಮಾತ್ರ ಬಿದ್ದಿರುವುದು ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಅರಣ್ಯ ವಿಭಾಗ ತಿಳಿಸಿದೆ.

ಬೆಂಗಳೂರಿನ ನಗರದಲ್ಲಿರುವ ಕೆಲವು ಮರಗಳು ನಗರದ ಸೌಂದರ್ಯವನ್ನು ಹೆಚ್ಚಿಸಿವೆ. ಆದರೆ, ಆ ಮರಗಳು ಈಗ ಹೊರೆಯಾಗುತ್ತಿವೆ. ಕಳೆದ ಎರಡು ಮಳೆಗೆ ನಗರದಲ್ಲಿ 500ಕ್ಕೂ ಹೆಚ್ಚಿನ ಮರ ನೆಲಕಚ್ಚಿವೆ. ಈ ಮರಗಳ ಪೈಕಿ ಶೇ.66ಕ್ಕಿಂತ ಹೆಚ್ಚು ಮರಗಳು ಕಾಪರ್‌ಪಾಡ್ ಅಥವಾ ಹಳದಿ ಗುಲ್ಮೋಹರ್, ಆಫ್ರಿಕನ್ ಟುಲಿಪ್ ಮತ್ತು ನೈಲ್ ಟುಲಿಪ್ ಜಾತಿಗೆ ಸೇರಿದ ಮರಗಳಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೀಮಿತ ಜಾತಿಯ ಮರಗಳು ಹೆಚ್ಚಾಗಿ ಬೀಳಲು ಕಾರಣ ಗುರುತಿಸಿರುವ ಜಿಬಿಎ ಅಧಿಕಾರಿಗಳು, ಮಳೆಗೆ ಬಿದ್ದ ಮರಗಳಲ್ಲಿ ಹೆಚ್ಚಿನವು ಮೃದುವಾದ ಮರಗಳಾಗಿದ್ದವು. ಈ ಮರಗಳನ್ನು ಸುಮಾರು 30ವರ್ಷಗಳ ಹಿಂದೆ ನೆಡಲಾಗಿತ್ತು. ನಗರದಾದ್ಯಂತ ಇರುವ ಮರಗಳ ವೈಜ್ಞಾನಿಕ ಮೌಲ್ಯಮಾಪನ ಮತ್ತು ಸಮಯಕ್ಕೆ ಅನುಗುಣವಾಗಿ ಈ ಜಾತಿಗಳನ್ನು ಹಂತಹಂತವಾಗಿ ನಿರ್ಮೂಲನೆ ಮಾಡುವ ಅಗತ್ಯವಿದೆ. ಅವುಗಳ ಸ್ಥಾನದಲ್ಲಿ, ಭಾರೀ ಮಳೆ ಮತ್ತು ಬಿರುಗಾಳಿಗಳನ್ನು ತಡೆದುಕೊಳ್ಳಬಲ್ಲ ಸ್ಥಳೀಯ ಜಾತಿಗಳನ್ನು ನೆಡಬೇಕಾಗಿದೆ ಎಂದು ಜಿಬಿಎ ಅರಣ್ಯ ವಿಭಾಗ ತಿಳಿಸಿದೆ.

ಪರಿಶೀಲನೆ



ಸರ್ಕಾರದ 6ನೇ ಗ್ಯಾರಂಟಿಯಾದ ಭೂ ಗ್ಯಾರಂಟಿ ಯೋಜನೆಯಲ್ಲಿ ನಗರದಾದ್ಯಂತ ಹಮ್ಮಿಕೊಂಡಿರುವ ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನದ ಅಂಗವಾಗಿ, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಗೊಟ್ಟಿಗೆರೆ 194ನೇ ವಾರ್ಡ್‌ನಲ್ಲಿನ ಕೇಂದ್ರಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಭೇಟಿ ನೀಡಿ, ಪರಿಶೀಲಿಸಿದರು. ಶಾಸಕ ಕೃಷ್ಣಪ್ಪ, ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಉಪಸ್ಥಿತರಿದ್ದರು.

ಕಿರುಸುದ್ದಿ

ಸಮಗ್ರ ಅಭಿವೃದ್ಧಿಯೇ ನನ್ನ ಆದ್ಯತೆ



• **ಕೆ.ಆರ್.ಪುರ:** ಕ್ಷೇತ್ರದ ಸಮಗ್ರ ಅಭಿವೃದ್ಧಿಯೇ ನನ್ನ ಆದ್ಯತೆ, ನನ್ನ ಕನಸು ಎಂದು ಶಾಸಕ ಬೈರತಿ ಬಸವರಾಜ ಹೇಳಿದರು. ಕ್ಷೇತ್ರದ ರಾಮಮೂರ್ತಿನಗರದ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಅವರು, ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಕೈಗೊಳ್ಳಲಾಗಿದೆ. ಜನರು ಯಾವುದೇ ಸಮಸ್ಯೆ ಹೇಳಿದರೂ ಪರಿಹರಿಸುವ ಕೆಲಸ ಮಾಡುತ್ತೇನೆ. ಮುಖಂಡರು ಕೂಡ ಜನರೊಂದಿಗೆ ನಿರಂತರ ಸಂಪರ್ಕದಲ್ಲಿ ಸಾರ್ವಜನಿಕರ ಕೆಲಸ ಮಾಡಬೇಕು ಎಂದರು. ರಾಮಮೂರ್ತಿನಗರ ಸಿಗ್ನಲ್‌ನಿಂದ ಮುಖ್ಯರಸ್ತೆಯ ಅಭಿವೃದ್ಧಿಗೆ ಡಾಂಬರೀಕರಣವನ್ನು ಮಾಡಲು ಪೂಜೆ ಮಾಡಲಾಗಿದೆ. ಸಾರ್ವಜನಿಕರು ಕೆಲಸ ಮುಗಿಯುವವರೆಗೂ ಕೆಲಸ ಅಡೆತಡೆ ಆಗದಂತೆ ಸಹಕರಿಸುವಂತೆ ಹೇಳಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಅಧ್ಯಕ್ಷ ಮುನೇಗೌಡ, ದೂರವಾಣಿನಗರ ಆಕಾಂಕ್ಷಿ ಪ್ರದೀಪ್ ಗೌಡ, ಮುಖಂಡರಾದ ದುಷ್ಯಂತ್ ರಾಜ್, ಎಂಎಲ್ ಡಿಸಿ ಮುನಿರಾಜು, ದೇವರಾಜ್, ದೀಪು ಸೇರಿದಂತೆ ಇತರರಿದ್ದರು.

ಯುವತಿ ಮೇಲೆ ನಾಯಿಗಳ ದಾಳಿ

• **ಬೆಂಗಳೂರು:** ನಗರದಲ್ಲಿ ಮತ್ತೆ ಬೀದಿ ನಾಯಿಗಳ ಹಾವಳಿ ಹೆಚ್ಚಾಗುತ್ತಿರುವ ನಡುವೆ ಯುವತಿಯೊಬ್ಬಳ ಮೇಲೆ ಬೀದಿ ನಾಯಿಗಳ ಹಿಂಡು ದಾಳಿ ಮಾಡಲು ಯತ್ನಿಸಿರುವ ಘಟನೆ ರಾಮಮೂರ್ತಿ ನಗರ ಸಮೀಪದ ಹೊಯ್ಸಳ ನಗರದಲ್ಲಿ ನಡೆದಿದೆ. ನಾಯಿ ದಾಳಿಗೆ ಒಳಗಾದ ಯುವತಿಯನ್ನು ಮೇಘನಾ ಎಂದು ಗುರುತಿಸಲಾಗಿದೆ. ಶುಕ್ರವಾರ ರಾತ್ರಿ 8.30ರ ಸುಮಾರಿಗೆ ಈ ಘಟನೆ ನಡೆದಿದೆ. ಮೇಘನಾ ಮೇಲೆ ಏಕಾಏಕಿ 15ಕ್ಕೂ ಹೆಚ್ಚು ಬೀದಿ ನಾಯಿಗಳು ದಾಳಿಗೆ ಯತ್ನಿಸಿವೆ. ಮೊಬೈಲ್‌ನಲ್ಲಿ ಮಾತನಾಡಿಕೊಂಡು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವೇಳೆ ನಾಯಿಗಳ ಹಿಂಡು ಬೆನ್ನಟ್ಟಿದ ಪರಿಣಾಮ ಭಯಗೊಂಡು ಆಕೆ ಓಡಲು ಯತ್ನಿಸಿದ್ದಾಳೆ. ಆದರೆ ನಾಯಿಗಳು ಬೆನ್ನಟ್ಟಿದ್ದು, ಯುವತಿಯ ಕಿರುಚಾಟ ಹಾಗೂ ನಾಯಿಗಳ ಬೊಗಳುವ ಶಬ್ದ ಕೇಳಿ ಸ್ಥಳೀಯರು ತಕ್ಷಣವೇ ನೆರವಿಗೆ ಧಾವಿಸಿದ್ದಾರೆ. ನಾಯಿಗಳ ದಾಳಿಯಿಂದ ಯುವತಿಗೆ ಸಣ್ಣ-ಪುಟ್ಟ ಗಾಯಗಳಾಗಿದ್ದು, ಕೆ.ಆರ್.ಪುರ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ.



ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗೆ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಚಾಲನೆ ನೀಡಿದರು. ಸಂಘದ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಜಿಬಿಎಯಿಂದ ಇ-ಖಾತಾ ವಿಶೇಷ ಅಭಿಯಾನ

1,164 ಅರ್ಜಿ ಇತ್ಯರ್ಥ

• **ಬೆಂಗಳೂರು:** ನಗರದ ನಾಗರಿಕರಿಗೆ ಇ-ಖಾತಾ ಹಾಗೂ ಇತರೆ ಖಾತಾ ಸೇವೆಯನ್ನು ಸುಲಭವಾಗಿ ಒದಗಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿದ್ದ ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನಕ್ಕೆ ಸಾರ್ವಜನಿಕರಿಂದ ವ್ಯಾಪಕ ಸ್ಪಂದನೆ ವ್ಯಕ್ತವಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ಯಿಂದ ನಡೆದ ವಿಶೇಷ ಅಭಿಯಾನದಲ್ಲಿ ಸಾವಿರಾರು ನಾಗರಿಕರು ಪಾಲ್ಗೊಂಡು ತಮ್ಮ ಖಾತಾಗಳಿಗೆ ಸಂಬಂಧಿಸಿದ ಸಮಸ್ಯೆಯನ್ನು ಬಗೆಹರಿಸಿಕೊಂಡಿದ್ದಾರೆ.

ಶನಿವಾರ ನಡೆದ ಅಭಿಯಾನದಲ್ಲಿ ಜಿಬಿಎಯ ಐದು ಪಾಲಿಕೆಗಳಿಂದ ಖಾತಾ ಸಂಬಂಧ ವಿವಿಧ ಒಟ್ಟು 1,972 ಅರ್ಜಿಯನ್ನು ಸ್ವೀಕರಿಸಲಾಗಿದೆ. ಈ ಪೈಕಿ 1,164 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಜಿಬಿಎ ತಿಳಿಸಿದೆ.

ಈ ಅಭಿಯಾನದಲ್ಲಿ ದಕ್ಷಿಣ ನಗರ ಪಾಲಿಕೆಯಲ್ಲಿ ಮುಂಚೂಣಿಯಲ್ಲಿದ್ದು, ಇಲ್ಲಿ ಗರಿಷ್ಠ ಸಂಖ್ಯೆಯ ಅಂದರೆ 870 ನಾಗರಿಕರು ಪಾಲ್ಗೊಂಡಿದ್ದಾರೆ. ಇಲ್ಲಿ ಒಟ್ಟು 717 ಅರ್ಜಿಗಳು ಸ್ವೀಕೃತವಾಗಿದ್ದು, 438 ಅರ್ಜಿಗಳನ್ನು ಯಶಸ್ವಿಯಾಗಿ ವಿಲೇವಾರಿ ಮಾಡಲಾಗಿದೆ.

ಪೂರ್ವ ನಗರ ಪಾಲಿಕೆಯಲ್ಲಿ 625 ನಾಗರಿಕರು ಭಾಗವಹಿಸಿದ್ದು, ಸ್ವೀಕೃತವಾದ547 ಅರ್ಜಿಗಳಪೈಕಿ242 ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿದೆ. ಪಶ್ಚಿಮ ನಗರ ಪಾಲಿಕೆಯಲ್ಲಿ 532 ನಾಗರಿಕರು ಭೇಟಿ ನೀಡಿದ್ದು, 294 ಅರ್ಜಿಗಳು ಸಲ್ಲಿಕೆಯಾಗಿದ್ದವು. ಇದರಲ್ಲಿ 237 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಉತ್ತರ ನಗರ ಪಾಲಿಕೆಯಲ್ಲಿ 354 ನಾಗರಿಕರು ಪಾಲ್ಗೊಂಡಿದ್ದು, ಸ್ವೀಕೃತವಾದ 241 ಅರ್ಜಿಗಳ ಪೈಕಿ 121 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ.ಕೇಂದ್ರ ನಗರ ಪಾಲಿಕೆಯಲ್ಲಿ 323 ನಾಗರಿಕರು ಭೇಟಿ ನೀಡಿ ಮಾಹಿತಿ ಹಾಗೂ ಸೇವೆಗಳನ್ನು ಪಡೆದುಕೊಂಡಿದ್ದಾರೆ.



ಸೇವೆ ಆಧಾರದ ಮೇಲೆ ವಿಲೇವಾರಿ ವಿವರ

ಸೇವೆಯ ವಿವರ	ಸ್ವೀಕೃತವಾದ ಅರ್ಜಿಗಳು	ವಿಲೇವಾರಿಯಾದ ಅರ್ಜಿಗಳು	ಬಾಕಿ ಇರುವ ಅರ್ಜಿಗಳು
ಇ-ಖಾತಾ	809	573	356
ಖಾತಾ ಬದಲಾವಣೆ	123	73	70
ದೋಷಗಳ ತಿದ್ದುಪಡಿ	493	370	233
ಬಿ ಟು ಎ ಖಾತಾ	304	70	325
ಹೊಸ ಖಾತಾ	234	66	199

ನಕಲಿ ಚಿನ್ನ ಅಡವಿಟ್ಟು ವಂಚನೆ

• **ಬೆಂಗಳೂರು:** ಅಸಲಿ ಚಿನ್ನದ ಸೋಗಿನಲ್ಲಿ ನಕಲಿ ಚಿನ್ನಾಭರಣಗಳನ್ನು ಅಡವಿಟ್ಟು ಬ್ಯಾಂಕ್‌ವೊಂದಕ್ಕೆ 16.53 ಲಕ್ಷ ರೂ. ವಂಚನೆ ಮಾಡಿದ ಆರೋಪದಲ್ಲಿ, ಬ್ಯಾಂಕ್ ಸಿಬ್ಬಂದಿ ಸೇರಿದಂತೆ ನಾಲ್ವರ ವಿರುದ್ಧ ವರ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರ್ತೂರು ಶಾಖೆಯ ಕರ್ನಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಎಸ್.ಎಸ್. ಆದರ್ಶ್ ನೀಡಿದ ದೂರಿನ ಮೇರೆಗೆ ರವಿಕುಮಾರ್, ಮೋಹನ್ ರೆಡ್ಡಿ, ಎಚ್.ಎಸ್. ಕೇಶವ ಹಾಗೂ ಮಾದೇಶ್ ವಿರುದ್ಧ ಪ್ರಕರಣ ದಾಖಲಾಗಿದೆ.

ಆರೋಪಿ ರವಿಕುಮಾರ್ ಹಲವು ವರ್ಷಗಳಿಂದ ವರ್ತೂರು, ಗುಂಜೂರು ಹಾಗೂ ಮಾರತ್ ಹಳ್ಳಿ ಶಾಖೆಗಳಲ್ಲಿ ಚಿನ್ನ ಮೌಲ್ಯಮಾಪಕನಾಗಿ ಕೆಲಸ ಮಾಡುತ್ತಿದ್ದ. ಬ್ಯಾಂಕ್‌ಗೆ ಬರುವ ಗ್ರಾಹಕರ ಪರಿಚಯವನ್ನು ಬಳಸಿಕೊಂಡು ಈ ವಂಚನೆ ನಡೆಸಿರುವ ಆರೋಪ ಕೇಳಿಬಂದಿದೆ.

ಬ್ಯಾಂಕ್ ನಿಯಮದಂತೆ ಪ್ರತಿ ಮೂರು ತಿಂಗಳಿಗೊಮ್ಮೆ ಅಡಮಾನವಿಟ್ಟ ಚಿನ್ನದ ಮರು ಮೌಲ್ಯಮಾಪನ ನಡೆಸಲಾಗುತ್ತದೆ. ಮೇ 12ರಂದು ಮತ್ತೊಬ್ಬರು ಚಿನ್ನ ಮೌಲ್ಯಮಾಪಕ ಪರಿಶೀಲನೆ ನಡೆಸಿದ ವೇಳೆ ಮೋಹನ್ ರೆಡ್ಡಿ ಖಾತೆಯಲ್ಲಿ ಅಡವಿಟ್ಟಿದ್ದ 56.20 ಗ್ರಾಂ ಚಿನ್ನ ನಕಲಿ ಎಂಬುದು ಪತ್ತೆಯಾಗಿದೆ.

ಈ ಕುರಿತು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದ ಬಳಿಕ ಎಲ್ಲಾ ಗೋಲ್ಡ್ ಲೋನ್ ಖಾತೆಗಳ ಪರಿಶೀಲನೆ ನಡೆಸಲಾಗಿದೆ. ಈ ವೇಳೆ ಕೇಶವ್

» **ಕರ್ನಾಟಕ ಬ್ಯಾಂಕ್ ವ್ಯವಸ್ಥಾಪಕ ದೂರು: ನಾಲ್ವರ ವಿರುದ್ಧ ಪ್ರಕರಣ ದಾಖಲು**

ಹಾಗೂ ಮಾದೇಶ್ ಹೆಸರಿನಲ್ಲಿ ಅಡವಿಟ್ಟಿದ್ದ ಚಿನ್ನವೂ ನಕಲಿ ಎಂದು ತಿಳಿದುಬಂದಿದೆ. ಈ ಬಗ್ಗೆ ರವಿಕುಮಾರ್‌ನನ್ನು ಸಂಪರ್ಕಿಸಲು ಯತ್ನಿಸಿದಾಗ ಆತ ನಾಪತ್ತೆಯಾಗಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಬ್ಯಾಂಕ್ ಅಧಿಕಾರಿಗಳು ವಿಚಾರಣೆ ನಡೆಸಿದ ವೇಳೆ ಆರೋಪಿಗಳು, ರವಿಕುಮಾರ್ ಸೂಚನೆಯಂತೆ ನಕಲಿ ಚಿನ್ನ ಅಡವಿಟ್ಟಿದ್ದೇವೆ ಎಂದು ಒಪ್ಪಿಕೊಂಡಿದ್ದಾರೆ. ತನ್ನ ಬಳಿ ಇರುವ ಚಿನ್ನವನ್ನು ಸ್ವಂತ ಹೆಸರಿನಲ್ಲಿ ಅಡವಿಡಲು ಸಾಧ್ಯವಿಲ್ಲ ಎಂದು ಹೇಳಿ, ಅವರ ಹೆಸರಿನಲ್ಲಿ ಗೋಲ್ಡ್ ಲೋನ್ ಪಡೆಯಲು ರವಿಕುಮಾರ್ ಪ್ರೇರೇಪಿಸಿದ್ದಾನೆ. ಇದಕ್ಕಾಗಿ ಕಮಿಷನ್ ಹಣ ನೀಡುವುದಾಗಿ ಹೇಳಿ, ವಿಷಯವನ್ನು ಯಾರಿಗೂ ತಿಳಿಸಬಾರದು ಎಂದು ಸೂಚಿಸಿದ್ದಾನೆ ಎಂದು ಆರೋಪಿಗಳು ಹೇಳಿದ್ದಾರೆ.

ಆರೋಪಿಗಳು ಬ್ಯಾಂಕ್ ಸಿಬ್ಬಂದಿಯೊಂದಿಗೆ ಸೇರಿಕೊಂಡು ಒಳಸಂಚು ರೂಪಿಸಿ, ನಕಲಿ ಚಿನ್ನವನ್ನು ಅಸಲಿ ಚಿನ್ನವೆಂದು ತೋರಿಸಿ ಬ್ಯಾಂಕ್‌ಗೆ ವಂಚನೆ ಎಸಗಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.ಅಸಲು ಹಾಗೂ ಬಡ್ಡಿ ಸೇರಿ ಒಟ್ಟು 16.53 ಲಕ್ಷ ರೂ. ನಷ್ಟ ಉಂಟಾಗಿದೆ ಎಂದು ಬ್ಯಾಂಕ್ ಅಧಿಕಾರಿಗಳು ತಿಳಿಸಿದ್ದಾರೆ.

ಶಿವನಪಾಳ್ಯ ವಾರ್ಡಿನ ಮನೆ ಮನೆಗೆ ಶಾಸಕರ ಭೇಟಿ

ಜಿಬಿಎ ಚುನಾವಣೆ ನಿಶ್ಚಿತ

• **ಕೆಂಗೇರಿ:** ಜಿಬಿಎ ಚುನಾವಣೆ ನಡೆಯುವುದು ನಿಶ್ಚಿತ, ಜನ ಸೇವ ಮನೋಭಾವನೆ ಹೊಂದಿರುವವರಿಗೆ ನನ್ನ ಸಹಕಾರ ಇರುತ್ತದೆ ಎಂದು ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಶಿವನಪಾಳ್ಯ ವಾರ್ಡಿನ ಅಭಯ ಹಸ್ತ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಮನೆ ಮನೆಗೆ ಭೇಟಿಗೆ ಚಾಲನೆ ನೀಡಿದ ಅವರು, ಸೇವಾ ಮನೋಭಾವ ಹೊಂದಿರುವ ಸವಿತಾ ಮಹೇಶ್ ವಾರ್ಡಿನ ಮನೆ ಮನೆಗೆ ತೆರಳಿ ಜನರ ಸಮಸ್ಯೆಗಳನ್ನು ಆಲಿಸಿ ಬಗೆಹರಿಸಲು ಮುಂದಾಗಿದ್ದಾರೆ. ಶಿವನಪಾಳ್ಯ ವಾರ್ಡಿನ ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಮೂಲಕ ವಾರ್ಡಿನಲ್ಲಿ ಉತ್ತಮ ಸೇವೆ ಮಾಡುತ್ತಿರುವ ಇವರಿಗೆ ನನ್ನ ಸಹಕಾರ ನೀಡುವ ಮೂಲಕ ಇವರ ಪರವಾಗಿ ನಿಲ್ಲುತ್ತೇನೆ ಎಂದು ತಿಳಿಸಿದರು.

ಕೆಲವರು ಚುನಾವಣೆ ಹಿಂದಕ್ಕೆ ಹಾಕುವುದಕ್ಕೆ ಬೇರೆ ಬೇರೆ ದಾರಿ ಹುಡುಕುತ್ತಿದ್ದಾರೆ. ಆದರೆ, ಸುಪ್ರೀಂಕೋರ್ಟ್ ಆದೇಶ ಮಾಡಿರುವ ಕಾರಣ ಚುನಾವಣೆ ನಡೆಯುವುದು ನಿಶ್ಚಿತ,



ಕ್ಷೇತ್ರದ 12 ವಾರ್ಡ್‌ಗಳಲ್ಲಿ ಸಕ್ರಿಯವಾಗಿ ಜನರ ಮಧ್ಯೆ ಇದ್ದು, ಜನರ ಸೇವೆ ಮಾಡಿದವರನ್ನು ಸ್ಥಳೀಯರು ಗುರುತಿಸಿ ಜಿಬಿಎ ಅಭ್ಯರ್ಥಿಗಳಿಗೆ ಟಿಕೆಟ್ ನೀಡಲಾಗುತ್ತದೆ. ಕೆಲವರು ಚುನಾವಣೆ ಆಗುವುದಿಲ್ಲ ಎಂದು ಮೀನಾಮೇಷ ಎಣಿಸುತ್ತಿದ್ದಾರೆ, ಅಂತಹವರನ್ನು ಪರಿಗಣಿಸುವುದಿಲ್ಲ ಎಂದು ಖಡಕ್ ಎಚ್ಚರಿಕೆ ನೀಡಿದರು.

ಈ ವೇಳೆ ಶಿವನಪಾಳ್ಯ ವಾರ್ಡ್ ಅಧ್ಯಕ್ಷ ಕೆ.ವೈ.ಕೃಷ್ಣ, ರಾಮೋಹಳ್ಳಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಮಹೇಶ್ ಜೆ., ಟಿಎಪಿಸಿಎಂಎಸ್ ಉಪಾಧ್ಯಕ್ಷ ಅನಿಲ್ ಕುಮಾರ್, ವಾರ್ಡ್ ಅಧ್ಯಕ್ಷ ಪುರುಷೋತ್ತಮ್ ಮತ್ತಿತರರು ಉಪಸ್ಥಿತರಿದ್ದರು.

ಬಾಕ್ಸಿಂಗ್ ತರಬೇತುದಾರನಿಂದ ಕಿರುಕುಳ: ದೂರು

• **ಬೆಂಗಳೂರು:** ಖಾಸಗಿ ಬಾಕ್ಸಿಂಗ್ ಕ್ಲಬ್‌ನಲ್ಲಿ ತರಬೇತಿ ಪಡೆಯುತ್ತಿದ್ದ 17ವರ್ಷದ ಬಾಲಕಿ ಮೇಲೆ ಬಾಕ್ಸಿಂಗ್ ತರಬೇತುದಾರನು ಲೈಂಗಿಕ ಕಿರುಕುಳ ನೀಡಿದ ಗಂಭೀರ ಆರೋಪದಲ್ಲಿ ಸಂಪಂಗಿರಾಮನಗರ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಪ್ರಕರಣ ದಾಖಲಾಗಿದೆ. ತಮಿಳುನಾಡು ಮೂಲದ 50ರ ಹರೆಯದ ತರಬೇತುದಾರನನ್ನು ಬಂಧಿಸಿರುವ ಪೊಲೀಸರು ಕಾರಾಗೃಹಕ್ಕೆ ಕಳುಹಿಸಿದ್ದಾರೆ. ನಗರದ ಕಸ್ತೂರಬಾ ರಸ್ತೆಯಲ್ಲಿನ ಕ್ರೀಡಾಂಗಣ ಆವರಣದಲ್ಲಿರುವ ಖಾಸಗಿ ಬಾಕ್ಸಿಂಗ್ ಕ್ಲಬ್‌ನಲ್ಲಿ ತರಬೇತಿ ಪಡೆಯಲು ಬರುತ್ತಿದ್ದ ಬಾಲಕಿಗೆ ನಾಲ್ಕು ತಿಂಗಳಿಂದ ನಿರಂತರವಾಗಿ ಲೈಂಗಿಕ ಕಿರುಕುಳ ನೀಡುತ್ತಿದ್ದನು. ಬಾಲಕಿಯ ತಾಯಿ ನೀಡಿರುವ ದೂರಿನ ಅನ್ವಯ ಮೇ 22ರಂದು ಆರೋಪಿಯನ್ನು ಬಂಧಿಸಿ, ಪೋಕ್ಸೋ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅಲ್ಲದೇ, ಈ ಬಗ್ಗೆ ಜೀವ ಬೆದರಿಕೆಯೂ ಹಾಕಿದ್ದ. ಬಾಲಕಿಯ ಹೇಳಿಕೆ ಆಧಾರದ ಮೇಲೆ ತಾಯಿ ದೂರಿನಲ್ಲಿ ವಿವರಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಕೆವಿಕೆ ಆವರಣದಲ್ಲಿ ರೈತ ಸಂತೆ | ಆಕರ್ಷಿಸಿದ ನಾಟಿ ಕೃಷಿ ಬೇಸಾಯ

ಗಮನ ಸೆಳೆದ ಮೌಲ್ಯವರ್ಧಿತ ಉತ್ಪನ್ನ

• **ಬೆಂಗಳೂರು:** ಜಿಕೆವಿಕೆ ಆವರಣದಲ್ಲಿ ಆಯೋಜಿಸಲಾಗಿದ್ದ ರೈತ ಸಂತೆಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ರೈತರು ಬೆಳೆದ ವಿವಿಧ ಸಾವಯವ ಹಾಗೂ ಮೌಲ್ಯವರ್ಧಿತ ಕೃಷಿ ಉತ್ಪನ್ನಗಳು ಜನರ ಗಮನ ಸೆಳೆದವು.

ರೈತ ಸಂತೆಯಲ್ಲಿ ನೇರಳೆ ಜ್ಯೂಸ್ ಶಾಟ್ಸ್, ಸ್ವೀಟ್ ಕಾರ್ನ್ ಸುಲಿಯುವ ಯಂತ್ರ, ಆಯುರ್ವೇದಿಕ್ ಹೇರ್ ಡೈ, ಮಲ್ಟಿ ಮಿಲೆಟ್ಸ್ ಮಿಶ್ರಣ, ಬೆಟ್ಟದ ನೆಲಿಕಾಯಿ, ಮಾವು, ಹಲಸು, ನಾಟಿ ಸೌತೆಕಾಯಿ ಸೇರಿದಂತೆ ಹಲವು ಉತ್ಪನ್ನಗಳು ಮಾರಾಟಕ್ಕಿದ್ದು, ಗ್ರಾಹಕರು ಹೆಚ್ಚಿನ ಆಸಕ್ತಿ ತೋರಿದರು. ವಿಶೇಷವಾಗಿ ಆರೋಗ್ಯ ಪೂರಕ ಆಹಾರ ಪದಾರ್ಥಗಳು ಹಾಗೂ ನೈಸರ್ಗಿಕ ಉತ್ಪನ್ನಗಳಿಗೆ ಉತ್ತಮ ಬೇಡಿಕೆ ಕಂಡುಬಂದಿತು.

ಸ್ವೀಟ್ ಕಾರ್ನ್ ಸುಲಿಯುವ ಯಂತ್ರ ರೈತರಿಗೆ ಸಮಯ ಮತ್ತು ಶ್ರಮ ಉಳಿಸುವ ತಂತ್ರಜ್ಞಾನ ವಾಗಿ ಗಮನ ಸೆಳೆಯಿತು. ಸಂತೆ ಜೊತೆಗೆ ಕೃಷಿ ಸಂಬಂಧಿತ



ಪ್ರದರ್ಶನಗಳು, ತೋಟಗಾರಿಕೆ, ಔಷಧೀಯ ಸಸ್ಯಗಳು, ಜೈವಿಕ ಗೊಬ್ಬರ, ಕೃಷಿ ಯಂತ್ರೋಪಕರಣಗಳು ಹಾಗೂ ಪಶುಸಂಗೋಪನೆ ವಿಭಾಗಗಳೂ ಜನರನ್ನು ಆಕರ್ಷಿಸಿವೆ. ಮಕ್ಕಳಿಗಾಗಿ ಎತ್ತಿನ ಬಂಡಿ ಸವಾರಿ ವಿಶೇಷ ಆಕರ್ಷಣೆಯಾಗಿತ್ತು.

ಇದೇ ವೇಳೆ ಜಿಕೆವಿಕೆ ವತಿಯಿಂದ ಆಯೋಜಿಸಿದ್ದ ಕೃಷಿ ಪರಿಸರದಡೆಗೆ ನಮ್ಮ ನಡೆ ಕಾರ್ಯಕ್ರಮದಲ್ಲಿ 150ಕ್ಕೂ ಹೆಚ್ಚು ನಾಗರಿಕರು ಭಾಗವಹಿಸಿ ಸುಮಾರು 6 ಕಿ.ಮೀ. ಪಾದಯಾತ್ರೆ ನಡೆಸಿದರು. ವೈದ್ಯರು, ಐಟಿ ಕ್ಷೇತ್ರದ ಉದ್ಯೋಗಿಗಳು, ಯುವಕರು, ಮಹಿಳೆಯರು ಹಾಗೂ ಮಕ್ಕಳು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಮಕ್ಕಳಿಗೆ ಬೇಸಿಗೆ ಶಿಬಿರ

ಮೇ 25ರಿಂದ 29ರವರೆಗೆ 8 ರಿಂದ 14 ವರ್ಷದ ಮಕ್ಕಳಿಗಾಗಿ ಬಿತ್ತನೆಯಿಂದ ಬೆಳೆವರೆಗೆ - ಕೃಷಿ ಪಯಣ ಎಂಬ ವಿಶೇಷ ಬೇಸಗೆ ಶಿಬಿರ ಆಯೋಜಿಸಲಾಗಿದೆ. ಕೃಷಿ ಚಟುವಟಿಕೆಗಳ ಕುರಿತು ಪ್ರಾಯೋಗಿಕ ಅರಿವು ಮೂಡಿಸುವ ಉದ್ದೇಶ ಹೊಂದಿದೆ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ 9844380742, 85532 15997 ಈ ಮೊಬೈಲ್ ಸಂಖ್ಯೆ ಸಂಪರ್ಕಿಸಬಹುದಾಗಿದೆ.

ಸುಪ್ರೀಂ ಆದೇಶದಂತೆ ಬೀದಿನಾಯಿಗಳ ನಿರ್ವಹಣೆ

• **ಬೆಂಗಳೂರು:** ಬೀದಿ ನಾಯಿಗಳ ವಿಚಾರದಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿರುವ ಆದೇಶವನ್ನು ಪಾಲಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಬದ್ಧವಾಗಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದ್ದಾರೆ.

ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು ಮತ್ತು ಬಸ್ ನಿಲ್ದಾಣಗಳು, ರೈಲು ನಿಲ್ದಾಣದಲ್ಲಿರುವ ಬೀದಿನಾಯಿಗಳ ಸ್ಥಳಾಂತರ ಸೇರಿದಂತೆ ಭಾರತೀಯ ಕಲ್ಯಾಣ ಮಂಡಳಿಯ ಪ್ರಮಾಣಿತ ಕಾರ್ಯವಿಧಾನವನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಬೀದಿನಾಯಿಗಳ ಆಶ್ರಯತಾಣ ನಿರ್ಮಾಣ ಪ್ರಗತಿಯಲ್ಲಿದೆ ಮತ್ತು ಆಶ್ರಯ ತಾಣ ನಿರ್ವಹಣೆ ಮಾಡಲು ಸೇವಾದಾರರ ಆಯ್ಕೆ ಪ್ರಗತಿಯಲ್ಲಿದೆ ಎಂದು ತಿಳಿಸಿದ್ದಾರೆ.

ಸಂಸ್ಥೆಗಳ ಆವರಣದಲ್ಲಿರುವ ಬೀದಿ ನಾಯಿಗಳನ್ನು ಗೊತ್ತುಪಡಿಸಿದ ಆಶ್ರಯ ತಾಣಗಳಿಗೆ ಸ್ಥಳಾಂತರಿಸಲಾಗುವುದು. ಬೀದಿನಾಯಿಗಳ ಸಂಖ್ಯೆ ಹೆಚ್ಚಿರುವ ಸ್ಥಳಗಳಲ್ಲಿ ಅಥವಾ ಪದೇ ಪದೇ ನಾಯಿ ಕಡಿತ ಹಾಗೂ ಆಕ್ರಮಣಕಾರಿ ವರ್ತನೆಯಿಂದ ಸಾರ್ವಜನಿಕರ ಸುರಕ್ಷತೆಗೆ ತೊಂದರೆ ಇರುವ ಸ್ಥಳಗಳಲ್ಲಿ, ತಜ್ಞ ಪಶುವೈದ್ಯರಿಂದ ದೃಢೀಕರಣಕ್ಕೊಳಪಟ್ಟು, ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ 1960, ಪ್ರಾಣಿ ಜನನ ನಿಯಮಗಳು 2023 ಮತ್ತು ಇತರೆ ಶಾಸನಬದ್ಧ ನಿಬಂಧನೆ ಗಳಿಗೆ ಅನುಸಾರವಾಗಿ ಗುಣಪಡಿಸಲಾಗದಷ್ಟು ಅನಾರೋಗ್ಯಕ್ಕೊಳಪಟ್ಟ ನಾಯಿ, ರೇಬೀಸ್ ನಾಯಿ, ಆಕ್ರಮಣಕಾರಿ, ಅಪಾಯಕಾರಿ ನಾಯಿಗಳ ಪ್ರಕರಣ ಗಳಲ್ಲಿ ದಯಾಮರಣ ಸೇರಿದಂತೆ ಕಾನೂನು ಪ್ರಕಾರ ಕ್ರಮ ವಹಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬೀದಿನಾಯಿಗಳ ವಿಷಯದಲ್ಲಿ ಯಾವುದೇ ರೀತಿಯ ವೈಯಕ್ತಿಕ ನಿರ್ಧಾರಗಳನ್ನು ತೆಗೆದುಕೊಳ್ಳಬೇಡಿ ಎಂದಿದ್ದಾರೆ.

ಜೆ.ಎಸ್. ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ತರಗತಿಗೆ ಚಾಲನೆ

ಶಿಕ್ಷಣದಿಂದ ಸಮಾಜದ ಪ್ರಗತಿ

• **ಕೆಂಗೇರಿ:** ಪೋಷಕರ ನಿರೀಕ್ಷೆಗೆ ತಕ್ಕಂತೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದರ ಜತೆಗೆ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಜೆ.ಎಸ್.ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಪ್ರೊ. ಡಾ.ಜಯರಾಮ ಶೆಟ್ಟಿ ಎಸ್.ಹೇಳಿದರು.

ಮಲ್ಲತ್ತಹಳ್ಳಿಯ ಜೆ.ಎಸ್.ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ತರಗತಿಗಳ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಿದ ಅವರು, ಯಾವ ವಿದ್ಯಾಸಂಸ್ಥೆ ಕ್ರಿಯಾಶೀಲವಾಗಿರುತ್ತದೆಯೋ ಅಂತಹ ಶಿಕ್ಷಣ ಸಂಸ್ಥೆ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆಂದರು.

ವಿದ್ಯಾರ್ಥಿಗಳ ಜ್ಞಾನ ವಿಕಾಸಕ್ಕೆ ಹೆಚ್ಚಿನ ಆದ್ಯತೆ ನೀಡುವುದರಿಂದ ಬೆಳಗಿನ ಜಾವ 4 ಗಂಟೆಗೆ ಪೋಷಕರಿಗೆ ಫೋನ್ ಮಾಡಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯದ ಬಗ್ಗೆ ಮಾಹಿತಿ ಪಡೆದು ಪ್ರತಿ ಹಂತದಲ್ಲೂ, ಸಂಪೂರ್ಣ ಮಾಹಿತಿ ಪಡೆಯುವ ಮೂಲಕ 5 ವರ್ಷಗಳಲ್ಲಿ 100ಕ್ಕೂ ಹೆಚ್ಚು ರ‍್ಯಾಂಕ್ ಪಡೆಯಲು ಸಾಧ್ಯವಾಯಿತು ಎಂದರು.

ಶಿಕ್ಷಣ ತಜ್ಞ ಡಾ.ಚಂದ್ರಶೇಖರ್ ಮಾತನಾಡಿ, ಈಗಿನ ಕಾಲಘಟ್ಟದಲ್ಲಿ ಸಮಾಜ ಅಭಿವೃದ್ಧಿ ಹೊಂದಬೇಕಾದರೆ ಇಂದಿನ ವಿದ್ಯಾರ್ಥಿಗಳಿಂದ ಮಾತ್ರ ಸಾಧ್ಯ, ಪ್ರಸ್ತುತ ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ಸಾಕಷ್ಟು ಪ್ರಮಾಣದಲ್ಲಿ ಸ್ಪರ್ಧೆಗಳಿವೆ, ಸಂಶೋಧನೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುವುದು ಬಹಳ ಅಗತ್ಯವಿದೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯ ಕೊಡುಗೆ ಈ ದೇಶಕ್ಕೆ ಅವಶ್ಯಕವಾಗಿದೆ



ಎಂದು ತಿಳಿಸಿದರು. ಕನ್ಯಾಕುಮಾರಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಡಾ.ಎಚ್.ತುಕಾರಾಮ್ ಮಾತನಾಡಿ, ಶಿಕ್ಷಣದ ಮೂಲಕ ಸಾಮಾಜಿಕ ಸಮಾನತೆಯನ್ನು ಸೃಷ್ಟಿಸುವ ವಿದ್ಯಾಸಂಸ್ಥೆಗಳೇ ನಿಜವಾದ ಜ್ಞಾನ ದೇಗುಲವಾಗಿದೆ. ಈಗಿನ ಡಿಜಿಟಲ್ ಯುಗದಲ್ಲಿ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಪ್ರಗತಿ ಹೊಂದಲು ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡಿದಾಗ ಗುಣಮಟ್ಟದ ಶಿಕ್ಷಣ ಪಡೆಯಲು ಸಾಧ್ಯವಾಗುತ್ತದೆ. ಜೊತೆಗೆ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ರಾಜ್ಯ ಮಟ್ಟದಲ್ಲಿ ಗರಿಷ್ಠ ಪ್ರಮಾಣದ ಫಲಿತಾಂಶ ಪಡೆಯ ಸಾಧ್ಯ ಎಂದು ತಿಳಿಸಿದರು.

ಪ್ರಥಮ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪಾರಿತೋಷಕ ಪ್ರಮಾಣ ಪತ್ರ ವಿತರಣೆ ಗೌರವಿಸಲಾಯಿತು. ಶ್ರೀ ದುರ್ಗಾಪರಮೇಶ್ವರಿ ಎಜುಕೇಶನ್ ಟ್ರಸ್ಟ್ ಉಪಾಧ್ಯಕ್ಷೆ ಸುಲತಾ ಜೆ.ಶೆಟ್ಟಿ, ಕಾರ್ಯದರ್ಶಿ ನಿಧೀಶ್ ಶೆಟ್ಟಿ, ಪ್ರಾಂಶುಪಾಲೆ ವಿಜಯಲಕ್ಷ್ಮಿ ಎಸ್.ಕೆ. ಮತ್ತಿತರರಿದ್ದರು.

ರೋಜ್‌ಗಾರ್ ಮೇಳದಲ್ಲಿ 84 ಮಂದಿಗೆ ಉದ್ಯೋಗ ಪತ್ರ ವಿತರಣೆ

ವಿಕಸಿತ ಭಾರತಕ್ಕಾಗಿ ಯುವಕರು ಶ್ರಮಿಸಲಿ

• **ಬೆಂಗಳೂರು:** ಹೊಸದಾಗಿ ನೇಮಕಾತಿ ಆದೇಶ ಪತ್ರ ಪಡೆದವರು ವಿಕಸಿತ ಭಾರತ ನಿರ್ಮಾಣಕ್ಕಾಗಿ ದುಡಿಯಬೇಕು ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಕರೆ ನೀಡಿದರು.

ನೈಋತ್ಯ ರೈಲ್ವೆ ಬೆಂಗಳೂರು ವಿಭಾಗದ ವತಿಯಿಂದ ಶನಿವಾರ ಎಂ.ಜಿ. ರೈಲ್ವೆ ಕಾಲೊನಿಯ ಅನುಗ್ರಹ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾದ 19ನೇ ರೋಜ್‌ಗಾರ್ ಮೇಳದಲ್ಲಿ ಕೇಂದ್ರ ಸರ್ಕಾರದ ಸೇವೆಗೆ ನೇಮಕವಾಗಿರುವ 84 ಯುವಕ-ಯುವತಿಯರಿಗೆ ಅವರು ನೇಮಕಾತಿ ಆದೇಶ ಪತ್ರ ವಿತರಿಸಿದ ಬಳಿಕ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರು ರೋಜ್‌ಗಾರ್ ಮೇಳದಡಿ ದೇಶಾದ್ಯಂತ ಸುಮಾರು 51,000ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳಿಗೆ ಸರ್ಕಾರಿ ಉದ್ಯೋಗದ ನೇಮಕಾತಿ ಆದೇಶ ಪತ್ರಗಳನ್ನು ವಿತರಿಸಿದ್ದಾರೆ. ಈಗಾಗಲೇ 18 ರೋಜ್‌ಗಾರ್ ಮೇಳಗಳ ಮೂಲಕ 12 ಲಕ್ಷ



ಯುವಕ-ಯುವತಿಯರನ್ನು ಸರ್ಕಾರಿ ಸೇವೆಗೆ ನೇಮಕ ಮಾಡಿಕೊಂಡಿರುವುದು ಹೆಮ್ಮೆಯ ಸಂಗತಿ ಯಾಗಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು 2047ರ ಹೊತ್ತಿಗೆ ಭಾರತವು ವಿಕಸಿತ ಭಾರತವಾಗಿ ಹೊರಹೊಮ್ಮಬೇಕೆನ್ನುವ ಸಂಕಲ್ಪವನ್ನಿಟ್ಟುಕೊಂಡಿದ್ದಾರೆ. ಇದನ್ನು ಸಾಕಾರಗೊಳಿಸುವಲ್ಲಿ ಯುವಶಕ್ತಿಯ ಪಾತ್ರ ಮಹತ್ವದ್ದಾಗಿದೆ. ಆ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ವಿವಿಧ ಇಲಾಖೆ ಹಾಗೂ ಸ್ವಾಯತ್ತ ಸಂಸ್ಥೆಗಳಲ್ಲಿ ನೇಮಕವಾದ ಅಭ್ಯರ್ಥಿಗಳು ತಮಗೆ ಸಿಗುವ 30 ರಿಂದ 35 ವರ್ಷಗಳ ಸೇವಾವಧಿಯನ್ನು ಪ್ರಾಮಾಣಿಕತೆ, ಕಠಿಣ ಪರಿಶ್ರಮದಿಂದ ಕೆಲಸ ಮಾಡುವ ಮೂಲಕ ವಿಕಸಿತ ಭಾರತ ನಿರ್ಮಾಣಕ್ಕಾಗಿ ಶ್ರಮಿಸ ಬೇಕು ಎಂದು ಸಲಹೆ ನೀಡಿದರು.

ಸರ್ಕಾರಕ್ಕೆ ಸೇವೆ ಸಲ್ಲಿಸುವುದು ದೇಶ ಮತ್ತು ಸಮಾಜಕ್ಕೆ ಸೇವೆ ಸಲ್ಲಿಸುವುದಕ್ಕೆ ಸಮಾನವಾಗಿದೆ. ಆದರಿಂದ ಅಭ್ಯರ್ಥಿಗಳು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಾಗ ಯಾವಾಗಲೂ ರಾಷ್ಟ್ರದ ಹಿತಾಸಕ್ತಿಯನ್ನು ತಮ್ಮ ಪ್ರಾಥಮಿಕ ಗಮನವಾಗಿ ಇಟ್ಟುಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ನೈಋತ್ಯ ರೈಲ್ವೆ ಬೆಂಗಳೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಆಶುತೋಷ್ ಕುಮಾರ್ ಸಿಂಗ್, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಪ್ರವೀಣ್ ಕಾತರಕಿ, ವಿಭಾಗೀಯ ಹಿರಿಯ ಸಿಬ್ಬಂದಿ ಅಧಿಕಾರಿ ಉಮಾ ಶರ್ಮಾ ಉಪಸ್ಥಿತರಿದ್ದರು.

ಇಂದು ನಗರದಲ್ಲಿ...

- ವಾಯ್ಸ್ ಆಫ್ ಸದಾಶಿವನಗರ ವತಿಯಿಂದ ಸೇವ್ ಸ್ಯಾಂಕಿ ಲೇಕ್ ಜಾಗೃತಿ ಅಭಿಯಾನ, ಸ್ಥಳ : ಸ್ಯಾಂಕಿ ಕೆರೆ, ಸದಾಶಿವನಗರ, ಬೆಳಗ್ಗೆ 7.30
- ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ವತಿಯಿಂದ ಚಂದನವನ ವಿಚಾರಗೋಷ್ಠಿ, ಸ್ಥಳ : ಕರ್ನಾಟಕ ಚಲನಚಿತ್ರ ಕಲಾವಿದರ ಸಂಘ, ಚಾಮರಾಜಪೇಟೆ, ಬೆಳಗ್ಗೆ 9.30
- ಶ್ರೀ ಗುರು ಪಂಚಾಕ್ಷರಿ ಪುಟ್ಟರಾಜು ಸಂಗೀತ ಶಾಲೆ ವತಿಯಿಂದ ಕನ್ನಡ ಡಿಂಡಿಮದ ಸಾಂಸ್ಕೃತಿಕ ಸಂಭ್ರಮ, ಸ್ಥಳ : ಕನ್ನಡ ಸಾಹಿತ್ಯ ಪರಿಷತ್ತು, ಚಾ.ಪೇಟೆ, ಮಧ್ಯಾಹ್ನ 3
- ಸರ್ ಎಂ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ 11ನೇ ರಾಷ್ಟ್ರೀಯ ನೃತ್ಯ ಕಲಾಮೇಳದಲ್ಲಿ ಸಂದೀಪ್ ಡ್ಯಾನ್ಸ್ ಅಕಾಡೆಮಿಯ ನೃತ್ಯ ವೈಭವ, ಸ್ಥಳ: ನಯನ ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಸಂಜೆ 4

ಕೇಂದ್ರೀಯ ವಿದ್ಯಾಲಯಗಳಲ್ಲಿ ಕೇಸರಿ ಶಾಲು ಹಾಕಿಸಲಿ: ಮಧು



ತಿರುಪತಿ ದರ್ಶನ



ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಶನಿವಾರ ತಿರುಮಲ ತಿರುಪತಿಯ ಶ್ರೀ ವೆಂಕಟೇಶ್ವರ ಸ್ವಾಮಿ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು. ಸಂಸದ ಬಿ.ವೈ. ರಾಘವೇಂದ್ರ, ಟಿಟಿಡಿ ಸದಸ್ಯ ನರೇಶ್ ಮತ್ತಿತರರು ಜತೆಯಲ್ಲಿದ್ದರು.

ನಿತಿನ್ ಭೇಟಿ: ಪಕ್ಷದಲ್ಲಿ ಉತ್ಸಾಹ



ರಾಷ್ಟ್ರೀಯ ಅಧ್ಯಕ್ಷರ ಕಾರ್ಯಕ್ರಮ

ಕಿರುಸುದ್ದಿ

ನಾಳೆಯಿಂದ ಮಂಥನ ಕಾರ್ಯಾಗಾರ

ಕೇಂದ್ರ ಅನುಮತಿ ನೀಡಿದ್ರೆ ರಾಜ್ಯ ಮಟ್ಟದಲ್ಲೇ ನೀಟ್

ದೇಶದ ಮತದಾರರಿಗೆ ಅವಕಾಶ: ಪೂಜಾರಿ

943 ಕೋಟಿ ರೂ. ವೆಚ್ಚದಲ್ಲಿ ಅಂತಾರಾಷ್ಟ್ರೀಯ ಕ್ರೀಡಾಂಗಣ: ಸಿಎಂ

ಆರ್ಥಿಕ ಬೆಳವಣಿಗೆಗೆ ಸಹಕಾರಿ



ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧ: ಸಿದ್ದರಾಮಯ್ಯ

ಅಲ್ಪಸಂಖ್ಯಾತರ ಓಲೈಕೆ ಸಲ್ಲ: ಬಿವೈವಿ



■ ಕೋಟ ಶ್ರೀನಿವಾಸ ಪೂಜಾರಿ, ಸಂಸದ

ಬೆಳಗಾವಿಯಲ್ಲಿ ಮಳೆಗಾಲದ ಅಧಿವೇಶನ ನಡೆಸಲು ಚಿಂತನೆ



ಸಮಸ್ಯೆ ನಿವಾರಿಸಲು ನಿಯಮಗಳಲ್ಲಿ ವರ್ಗೀಕರಣ

ಇ-ಸ್ವತ್ತು 2.0 ತಂತ್ರಾಂಶ ಮಾರ್ಪಾಡು

ತೆರಿಗೆ ವ್ಯಾಪ್ತಿಗೆ ಸೇರ್ಪಡೆ

ಭೀಕರ ಅಪಘಾತ: ಐವರ ಸಾವು



ಶಿವಮೊಗ್ಗ-ಶೃಂಗೇರಿ-ಮಂಗಳೂರು ಹೊಸ ರೈಲು ಮಾರ್ಗ ಸಮೀಕ್ಷೆ ಪೂರ್ಣ: ಸೋಮಣ್ಣ

ಬೆಂಗಳೂರು-ಮಂಗಳೂರು ವಂದೇ ಭಾರತ್ ರೈಲು



ರಾಜ್ಯ ಸರ್ಕಾರ ದಿಂತ ನೀರಾಗಿದೆ: ಕೇಂದ್ರ ಸಚಿವ ಆರೋಪ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚನೆ

ಇಬೋಲಾ ಸೋಂಕು ತಡೆಗೆ ಜಾಗೃತಿ



ಪೆಟ್ರೋಲ್ ದರ ಏರಿಕೆ ವಿರುದ್ಧ ವಾಗ್ದಾಳಿ

ಕಿರುಸುದ್ದಿ

ಮೇ 30ರಂದು ವೈಷ್ಣವಿ ರಂಗಪ್ರವೇಶ



• **ಬೆಂಗಳೂರು:** ಕಲಾವಾಹಿನಿ ಡ್ಯಾನ್ಸ್ ಅಕಾಡೆಮಿಯ ನಿರ್ದೇಶಕಿ, ವಿದುಷಿ ಹಾಸೋಗೆ ಪರಿಮಳಾ ಅವರ ಗರಡಿಯಲ್ಲಿ ರೂಪುಗೊಂಡ ಬಾಲಪ್ರತಿಭೆ ವೈಷ್ಣವಿ ಅವರು ಮೇ 30 ರಂದು ಸಂಜೆ 4. 30ಕ್ಕೆ ಎ.ಡಿ.ಎ. ರಂಗಮಂದಿರದಲ್ಲಿ ವಿದ್ಯುಕ್ತವಾಗಿ ರಂಗಪ್ರವೇಶ ಮಾಡುತ್ತಿದ್ದಾರೆ. ಪ್ರಸ್ತುತ ಲಂಡನ್ ನಿವಾಸಿಯಾಗಿರುವ ಜಯಶಂಕರ್ ಮತ್ತು ಮೃದುಲಾ ಅವರ ಹನ್ನೊಂದು ವರ್ಷದ ಪುತ್ರಿಯಾದ ವೈಷ್ಣವಿ, ಕಳೆದ ಆರು ವರ್ಷಗಳಿಂದ ಬಹು ಪರಿಶ್ರಮಗಳಿಂದ ಭರತನಾಟ್ಯ ನೃತ್ಯಾಭ್ಯಾಸ ಮಾಡುತ್ತಿದ್ದಾರೆ. ಈಗಾಗಲೇ ಯುನೈಟೆಡ್ ಕಿಂಗ್‌ಡಮ್‌ನಲ್ಲಿನ ಅನೇಕ ದೇವಾಲಯ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಾಗೂ ಭಾರತದಲ್ಲೂ ವಿವಿಧ ವೇದಿಕೆಗಳಲ್ಲಿ ತನ್ನ ಏಕವ್ಯಕ್ತಿ ನೃತ್ಯಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿದ್ದಾಳೆ. ಬಹುಮುಖ ಪ್ರತಿಭೆಯಾದ ವೈಷ್ಣವಿ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನೂ ಕಲಿಯುತ್ತಿದ್ದು, ಓದಿನಲ್ಲಿ ಉತ್ತಮ ವಿದ್ಯಾರ್ಥಿನಿಯೆನಿಸಿಕೊಂಡಿದ್ದು ವಾಲಿಬಾಲ್, ಕ್ರಿಕೆಟ್ ಮತ್ತು ಬ್ಯಾಡ್ಮಿಂಟನ್ ಕ್ರೀಡೆಗಳಲ್ಲಿ ಮುಂದಿರುವ ವಿಶೇಷತೆ ಅವಳದು. ಈಗಾಗಲೇ ಯುಕೆಯ ಐಎಸ್‌ಟಿಡಿ ಸಂಸ್ಥೆಯ 7ನೆಯ ಹಂತದ ನೃತ್ಯಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಡೆದು ವಿಜೇತಳಾಗಿರುವ ವೈಷ್ಣವಿ, ಇದೀಗ ತಾನು ಕಲಿತ ಶಾಸ್ತ್ರೀಯ ನೃತ್ಯದ ವಿವಿಧ ಆಯಾಮಗಳ ಪ್ರದರ್ಶನ ನೀಡಲು ಸಜ್ಜಾಗಿದ್ದಾಳೆ.

ಪತಿ ಕುಟುಂಬದಿಂದ ಕಿರುಕುಳ: ಗೃಹಿಣಿ ಆತ್ಮಹತ್ಯೆ

• **ಬೆಂಗಳೂರು:** ನಗರದ ಕೆ.ಆರ್.ಪುರ ವ್ಯಾಪ್ತಿಯಲ್ಲಿ ಪತಿ ಮನೆಯವರ ಮಾನಸಿಕ ಕಿರುಕುಳದಿಂದ ಕಾನ್‌ಸ್ಟೇಬಲ್‌ವೊಬ್ಬರ ಪತ್ನಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಲಕ್ಷ್ಮಿಪ್ರಿಯಾ(26) ಮೃತ ಗೃಹಿಣಿ. ಪತಿ ರಾಜೇಶ್ ಆರಾಧ್ಯ ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಕಾನ್‌ಸ್ಟೇಬಲ್ ಆಗಿ ಕೆಲಸ ಮಾಡುತ್ತಿದ್ದರು. ವಿವಾಹದ ಸಮಯದಲ್ಲಿ ರಾಜೇಶ್ ಆರಾಧ್ಯ ಹಾಗೂ ಅವರ ತಂದೆ ಪಾಲಾಕ್ಷರಾಧ್ಯ ಮತ್ತು ತಾಯಿ ಭಾಗ್ಯಮ್ಮ ಮಗಳಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದರು ಮೃತಳ ತಂದೆ-ತಾಯಿ ಆರೋಪಿಸಿದ್ದಾರೆ. ಮೈಸೂರಿನ ಸಿಂಧನೂರು ಮದುವೆ ಮಂಟಪದಲ್ಲಿ ರಾಜೇಶ್ ಆರಾಧ್ಯ ಜೊತೆ ಲಕ್ಷ್ಮಿಪ್ರಿಯಾಳನ್ನು 2023ರಲ್ಲಿ ವಿವಾಹ ಮಾಡಿಕೊಟ್ಟಿದ್ದರು. ಮೇ 22 ರಂದು ಮಧ್ಯಾಹ್ನ 2.30ರ ಸುಮಾರಿಗೆ ಲಕ್ಷ್ಮಿಪ್ರಿಯಾ, ಸಹೋದರಿಗೆ ಜಯಶ್ರೀ ವಾಟ್ಸಾಪ್‌ಗೆ ತನ್ನ ಮೊಬೈಲ್ ಪಾಸ್‌ವರ್ಡ್ ಕಳುಹಿಸಿದ್ದಳು. ಇದರಿಂದ ಆತಂಕಗೊಂಡ ಜಯಶ್ರೀ ಅಕ್ಕನಿಗೆ ಕರೆ ಮಾಡಿದ್ದಾಳೆ ಆದರೆ, ಕರೆ ಸ್ವೀಕರಿಸಿಲ್ಲ, ನಂತರ ರಾಜೇಶ್ ಆರಾಧ್ಯ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಪತಿ ಮನೆಗೆ ಆಗಮಿಸುವಷ್ಟರಲ್ಲಿ ಲಕ್ಷ್ಮಿಪ್ರಿಯಾ ಮೃತಪಟ್ಟಿರುವುದಾಗಿ ತಿಳಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತಳ ಕಡೆಯವರು ನೀಡಿದ ದೂರಿನ ಮೇರೆಗೆ ಮಾನಸಿಕ ಕಿರುಕುಳ, ತೊಂದರೆ ನೀಡಿರುವ ಆರೋಪದಲ್ಲಿ ಕೆ.ಆರ್.ಪುರ ಠಾಣೆಯಲ್ಲಿ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಯಪುರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ರೆಡ್ ಕ್ರಾಸ್ ಚಟುವಟಿಕೆ ಸಮಾರೋಪ ಸಮಾರಂಭ

ಗುರುವಿನ ಮಾರ್ಗದರ್ಶನದಲ್ಲಿ ಪ್ರಗತಿ



• **ದೇವನಹಳ್ಳಿ:** ವಿದ್ಯಾರ್ಥಿಗಳಿಗೆ ಉತ್ತಮ ಗುರುಗಳಿರಬೇಕು. ಅದೇ ರೀತಿ ದ್ಯಾರ್ಥಿಗಳಲ್ಲಿ ಸಾಧಿಸುವ ಗುರಿ ಇರಬೇಕು. ಆಗ ದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆಯಲು ಸಾಧ್ಯ ಎಂದು ಗ್ಯಾರಂಟಿ ಯೋಜನೆ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚನ್ನಹಳ್ಳಿ ಬಿ.ರಾಜಣ್ಣ ತಿಳಿಸಿದರು.

ದೇವನಹಳ್ಳಿ ಜಯಪುರ ರಸ್ತೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2025-26ನೇ ಸಾಲಿನ ಶೈಕ್ಷಣಿಕ ಸಾಂಸ್ಕೃತಿಕ, ಕ್ರೀಡಾ, ಎನ್.ಸಿ.ಸಿ., ಎನ್‌ಎಸ್‌ಎಸ್, ಸ್ಕೌಟ್ಸ್ ಅಂಡ್ ಗೈಡ್ಸ್, ಯುವ ರೆಡ್ ಕ್ರಾಸ್ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ದೇವನಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆಯುತ್ತಿದ್ದಾರೆಂದರು.

ಅದಕ್ಕೆ ಕಾರಣ ಇಲ್ಲಿನ ಪ್ರಾಂಶುಪಾಲ ಡಿ. ಮಂಜಯ್ಯ ಹಾಗೂ ಸಹ ಪ್ರಾಧ್ಯಾಪಕರ ಉತ್ತಮ ಬೋಧನೆ ಎಂದರೆ ತಪ್ಪಾಗಲಾರದು, ಅವರು ಪ್ರಶಂಸನೀಯರು, ದ್ಯಾರ್ಥಿಗಳು ದ್ಯಾಭ್ಯಾಸದ ಜೊತೆಯಲ್ಲಿ ಸಾಂಸ್ಕೃತಿಕ, ಕ್ರೀಡಾ ಹಾಗೂ ಎನ್.ಎಸ್.ಎಸ್. ನಂತಹ ಚಟುವಟಿಕೆಗಳಲ್ಲಿ ಭಾಗವಹಿಸಿದಾಗ ತಮ್ಮ ಮನಸ್ಸು ಉಲ್ಲಸಿತಗೊಂಡು ಜ್ಞಾನ ಪಡೆಯಲು ಸಹಕಾರಿಯಾಗಬಲ್ಲದು ಎಂದು ತಿಳಿಸಿದರು.

ನಮ್ಮ ಕ್ಷೇತ್ರದ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಎಚ್.ಮುನಿಯಪ್ಪ ಕೋಟಿ ರೂ. ವೆಚ್ಚದಲ್ಲಿ ಬೃಹತ್ ಸ್ಟೇಡಿಯಂ ನಿರ್ಮಿಸಲು ಸರ್ಕಾರದಲ್ಲಿ ಪ್ರಸ್ತಾವನೆಯಲ್ಲಿ ಇಟ್ಟಿದ್ದಾರೆ ಇದೇ ಕಾಲೇಜು ಆವರಣದಲ್ಲಿ ಉದ್ಯೋಗ ಮೇಳ ಮಾಡಿ ನೂರಾರು ಮಕ್ಕಳ ಭವಿಷ್ಯ ನಿರ್ಮಿಸಲು ಸಾಧ್ಯವಾಯಿತು, ದೇವನಹಳ್ಳಿ ತಾಲೂಕಿನಲ್ಲಿ ಐಎಎಸ್, ಐಪಿಎಸ್, ಕೆಎಎಸ್ ಮಾಡುವ ದ್ಯಾರ್ಥಿಗಳಿಗೆ ಸಹಕಾರ ನೀಡಲು ಕೆಲವು ಧಾನಿಗಳು ಮುಂದೆ ಬಂದಿದ್ದಾರೆ, ಧ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಪ್ರಾಂಶುಪಾಲರಾದ ಡಿ. ಮಂಜಯ್ಯ ಪ್ರಾಸ್ತಾಕವಾಗಿ ಮಾತನಾಡಿ, ನಮ್ಮ ಶಾಲೆಯ ದ್ಯಾರ್ಥಿಗಳು ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸಿ ಉತ್ತಮ ಸಾಧನೆ ಮಾಡುವುದರ ಜತೆಗೆ ರೆಡ್‌ಕ್ರಾಸ್ ಸಂಸ್ಥೆಗೆ ರಕ್ತದಾನವನ್ನು ಸಹ ಮಾಡಿ ತಮ್ಮ ಔದಾರ್ಯವನ್ನು ಮೆರೆದಿರುವುದು ಮೆಚ್ಚತಕ್ಕ ಷಯ, ಅದೇರೀತಿ ನಮ್ಮ ಕ್ರೀಡಾ ಕಾರ್ಯದರ್ಶಿ ರಚಂದ್ರರ ಶಿಸ್ತು ಬದ್ಧ ಕಾರ್ಯಶೀಲತೆ ವಿದ್ಯಾರ್ಥಿಗಳಲ್ಲಿ ಬಲ ಬರುವಂತೆ ಮಾಡಿದೆ ಎಲ್ಲಾ ಕ್ರೀಡೆಗಳಲ್ಲಿ ಭಾಗವಹಿಸಿ ಧ ರಾಜ್ಯಗಳಲ್ಲಿ ಪಾರಿತೋಷಕ ಹಾಗೂ ನಗದು ಬಹುಮಾನ ತಂದಿದ್ದಾರೆ ಎಂದು ತಿಳಿಸಿದರು.

ಇತ್ತೀಚೆಗೆ ಐಪಿಎಸ್ ಪಾಸ್ ಮಾಡಿರುವ ಅಧಿಕಾರಿ ಮಂಡ್ಯ ಜಿಲ್ಲೆಯ ಧನಂಜಯ್ ತಾವು ನಡೆದು ಬಂದ ಹಾದಿ ಬಗ್ಗೆ ದ್ಯಾರ್ಥಿಗಳಿಗೆ ತಿಳಿಸುತ್ತಾ ಯುಪಿಎಸ್‌ಸಿ ಯಂತಹ ಕಠಿಣ ಪರೀಕ್ಷೆ ಉತ್ತೀರ್ಣ ಮಾಡುವುದೇ ಒಂದು ಸವಾಲ್ ಲಕ್ಷಾಂತರ ಜನರು ಸ್ಪರ್ಧೆಯಲ್ಲಿ ಭಾಗವಹಿಸಿದರೆ ಬೆರಳೆಣಿಕೆಯಷ್ಟು ಜನ ಉತ್ತೀರ್ಣರಾಗಲಿದ್ದಾರೆಂದು ಹೇಳಿದರು.

ಛಲದ್ದರೆ ಎಲ್ಲವನ್ನು ಸಾಧಿಸಬಹುದು, ಆದ್ದರಿಂದ ದ್ಯಾರ್ಥಿಗಳು ಮೊದಲು ಗುರಿನ ಗುಲಾಮರಾಗಬೇಕು. ಸರ್ಕಾರಿ ಶಾಲೆಯಲ್ಲಿ ಹೆಚ್ಚಾಗಿ ಗ್ರಾಮೀಣ ಭಾಗದ ಬಡ, ಮಧ್ಯಮ ವರ್ಗದ ದ್ಯಾರ್ಥಿಗಳೇ ಹೆಚ್ಚಿದ್ದರೂ ಇಲ್ಲಿನ ಬೋಧಕ ವೃಂದದ ಕಾಳಜಿ ಮೆಚ್ಚತಕ್ಕ ಷಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಉತ್ತು ಸಾಧನೆ ಮಾಡಿದ ಸಾಧಕರನ್ನು ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸಿ ಜಯ ಪಡೆದ ದ್ಯಾರ್ಥಿಗಳಿಗೆ ಬಹುಮಾನ ತರಣೆ ಹಾಗೂ ಸನ್ಮಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಕಾಲೇಜು ಪ್ರಾಂಶುಪಾಲರಾದ ಡಿ.ಮಂಜಯ್ಯ, ಐಪಿಎಸ್ ಅಧಿಕಾರಿ ದನಂಜಯ್, ಎನ್‌ಎಸ್‌ಎಸ್ ಕ್ರೀಡಾ ಸಂಚಾಲಕರಾದ ರಚಂದ್ರ ಕೆ.ಕೆ., ಎನ್.ಎಸ್.ಎಸ್. ಸಂಚಾಲಕ ಪ್ರೊ.ರಘು, ಸಾಂಸ್ಕೃತಿಕ ವೇದಿಕೆ ಸಂಚಾಲಕ ಡಾ. ರಾಜಪ್ಪ, ಎನ್.ಸಿ.ಸಿ. ಅಧಿಕಾರಿ ಪ್ರೊ. ಸತೀಶ್. ಡಾ.ಕತಾ, ಅನ್ನಪೂರ್ಣ, ಜಿಪಂ ಮಾಜಿ ಸದಸ್ಯೆ ಅನಂತಕುಮಾರಿ ಚಿನ್ನಪ್ಪ, ಹಳೆಯ ದ್ಯಾರ್ಥಿ ಸಂಘದ ಅಧ್ಯಕ್ಷ ಜಿ.ಸುನಿಲ್, ಕಾರ್ಯಾಧ್ಯಕ್ಷ ಮುತ್ತುಕುಮಾರ್, ದ್ಯಾರ್ಥಿಗಳು, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಶ್ರೀನಿವಾಸಪುರ ಗ್ರಾಪಂನಲ್ಲಿ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ। ಬಹುಮಾನ ವಿತರಣೆ

ಗ್ಯಾರಂಟಿಯಿಂದ ಸಾಮಾನ್ಯರ ಅಭಿವೃದ್ಧಿ



• **ನೆಲಮಂಗಲ:** ಕಾಂಗ್ರೆಸ್ ನೇತೃತ್ವದ ಸರಕಾರ ನೆಲಮಂಗಲ ತಾಲೂಕಿಗೆ ನಿಮ್ಮ ಶಾಸಕರ ಮೂಲಕ ನೀಡಿದ್ದು ಗ್ಯಾರಂಟಿ ಯೋಜನೆ 'ಜತೆ 1500 ಕೋಟಿ ರೂ. ಅನುದಾನವನ್ನು ಎಂದು ಶಾಸಕ ಎನ್.ಶ್ರೀನಿವಾಸ್ ತಿಳಿಸಿದರು.

ತಾಲೂಕಿನ ಶ್ರೀನಿವಾಸಪುರ'ಗ್ರಾಮಪಂಚಾಯಿತಿ ವಿವಿಧ ಹಳ್ಳಿಗಳಲ್ಲಿ ಆಯೋಜಿಸಲಾಗಿದ್ದ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ಮಾತನಾಡಿ,

ಜನರಿಗೆ ನೇರವಾಗಿ ಯೋಜನೆಯನ್ನು ತಲುಪಿಸುವ ಮೂಲಕ ಸರಕಾರ ಮೂರು ವರ್ಷವನ್ನು ಪೂರೈಸಿರುವುದು ಜನಪರ ಆಡಳಿತಕ್ಕೆಸಾಕ್ಷಿಯಾಗಿದೆಂದರು.

ಗ್ಯಾರಂಟಿಯೋಜನೆಯಿಂದನಮ್ಮಕ್ಷೇತ್ರಕ್ಕೆ450ಕೋಟಿಗೂ ಹೆಚ್ಚು ಹಣ ಜನರಿಗೆ ನೇರವಾಗಿಸಂದಾಯವಾಗಿದೆ. ಅದರ 'ಜತೆ 1500 ಕೋಟಿರೂ. ಅನುದಾನವನ್ನು ನೀಡಿದೆ. ವಿವಿಧ ಇಲಾಖೆಗಳಿಂದ ಕೆಲಸ ಕಾರ್ಯಗಳು ವೇಗವಾಗಿ ನಡೆಯುತ್ತಿದೆ. ಮಹಿಳೆಯರನ್ನು ರಂಗೋಲಿ ನೆಪದಲ್ಲಿ ಭೇಟಿ ಮಾಡಿ ಅವರ ಕಷ್ಟಸುಖವನ್ನು ಕೇಳುವ, ಪರಿಹಾರ ಕಲ್ಪಿಸುವ ಅವಕಾಶ ಸಿಕ್ಕಿರುವುದು ಸಂತೋಷವಾಗಿದೆಂದರು.

ಮಹಿಳೆಯ ಸಮಸ್ಯೆಗೆ ಸ್ಪಂದನೆ: ಶ್ರೀನಿವಾಸಪುರ 'ಗ್ರಾಮ ಪಂಚಾಯಿತಿಯಲ್ಲಿ ಬಸ್ ಸಮಸ್ಯೆಗಳ ಬಗ್ಗೆ ಹೆಚ್ಚು ದೂರುಗಳು ಬಂದಿವೆ. ಅಧಿಕಾರಿಗಳ ಜತೆಮಾತನಾಡಿ, ಸರಿಪಡಿಸಲು ಸೂಚನೆ ನೀಡಿದರು. ಗ್ರಾಮದಲ್ಲಿ ಬೆಸ್ಕಾಂ ಸಮಸ್ಯೆ ಬಗ್ಗೆ ಮೇಲಾಧಿಕಾರಿಗೆ ಸೂಚನೆ ನೀಡಿ ತಕ್ಷಣ ಬಗೆಹರಿಸುವಂತೆಸೂಚನೆ ನೀಡಿದರು. ಚರಂಡಿ ಸ್ವಚ್ಛತೆ, ವಿದ್ಯುತ್ ದೀಪಗಳ 'ಅಳವಡಿಸುವಂತೆ ಪಿಡಿಓಗೆ ಸೂಚನೆ ನೀಡಿದರು. ವಿವಿಧ ಗ್ರಾಮಗಳ ಅಭಿವೃದ್ಧಿಗೆ ಒಂದು ಕೋಟಿ ಅನುದಾನ ನೀಡುವುದಾಗಿ ಶಾಸಕರು ಘೋಷಣೆ ಮಾಡಿದರು.

ಬಹುಮಾನ ಪಡೆದಮಹಿಳೆಯರು: ಶ್ರೀನಿವಾಸಪುರ ಗ್ರಾಮಪಂಚಾಯಿತಿಯ ಯಲಚಗೆರೆಯ ಕಾವ್ಯ, ಪವಿತ್ರಾ ಪ್ರಥಮ ,ದೀಪಾ, ಮಂಜು ದ್ವಿತೀಯ, ಅಂಕಿತ, ಸುಜಾತಾ ತೃತೀಯ, ತೊರೆಪಾಳ್ಯದ ಪವಿತ್ರ,ಲೀಲಾವತಿ ಪ್ರಥಮ, ನಾಗಮ್ಮ ದ್ವಿತೀಯ,ಚೈತ್ರತೃತೀಯ,ಕೆಂಚನಹಳ್ಳಿಯ ದೀಪಿಕಾ ಪ್ರಥಮ, ಐಶ್ವರ್ಯದ್ವಿತೀಯ, ಮರಿಯಮ್ಮ ತೃತೀಯ, ಬೈರಸಂದ್ರದ ಮಾಲ ಪ್ರಥಮ, ಶಕ್ತಿಜಾ ದ್ವಿತೀಯ, ಜ್ಯೋತಿ ತೃತೀಯ, ಮೊದಲಕೋಟೆಯ ಭಾಗ್ಯಮ್ಮ, ಚೈತ್ರ ಪ್ರಥಮ,ಲಕ್ಷ್ಮೀದೇವಿ, ಮೋನಿಕಾ ದ್ವಿತೀಯ, ನಾಗರತ್ನ ಮಾನಸ ತೃತೀಯ, ಹೊಸಪಾಳ್ಯದ ಶಶಿಕಲಾ ಪ್ರಥಮ, ಸುನಂದ ದ್ವಿತೀಯ ,ಚೈತ್ರವಿಜಯ್ ತೃತೀಯ, ಜೋಗಿಪಾಳ್ಯ ,ಅರ್ಚನಾಪ್ರಥಮ,ಪದ್ಮಾವತಿದ್ವಿತೀಯ,ಪುಷ್ಪ ಲತಾ ತೃತೀಯ, ಹನುಮಂತೇಗೌಡನಪಾಳ್ಯದನಂದಿನಿ ಪ್ರಥಮ, ಕಮಲ ದ್ವಿತಿಯ, ಅನುಸೂಯ ತೃತೀಯಸ್ಥಾನ ಪಡೆದಿದ್ದಾರೆ. ಶ್ರೀನಿವಾಸಪುರದ ಶಾಂತಮ್ಮ, ವನಜಾಕ್ಷಿ, ಲಲಿತಮ್ಮ ಪ್ರಥಮ, ಗಾಯಿತ್ರಮ್ಮ, ಗಂಗಮ್ಮ, ಮಂಜಮ್ಮ ದ್ವಿತೀಯ, ಉಮಾದೇವಿ, ದಿವ್ಯಾ, ಸುಕನ್ಯಾವ, ತೃತೀಯ ಸ್ಥಾನ ಪಡೆದುಕೊಂಡಿದೆ. ಒಂದು ಸಾವಿರಕ್ಕೂ ಹೆಚ್ಚು ಮಹಿಳೆಯರು ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಧಾರ್ಮಿಕ ಮೌಲ್ಯ ಅರಿವಾಗಲಿ

ಪೇಜಾವರ ಮಠದಲ್ಲಿ ಹಿಂದು ಧಾರ್ಮಿಕ ಶಿಬಿರ ಸಮಾರೋಪ

• **ಬೆಂಗಳೂರು:** ಪೂರ್ಣಪ್ರಜ್ಞ ವಿದ್ಯಾಪೀಠದ ಆಶ್ರಯದಲ್ಲಿ ಪೇಜಾವರ ಮಠದ ನೇತೃತ್ವದಲ್ಲಿ ಮೇ 17 ರಿಂದ 23ರವರೆಗೆ ಆಯೋಜಿಸಲಾಗಿದ್ದ ಹಿಂದು ಧಾರ್ಮಿಕ ಶಿಬಿರವು ಸಮಾರೋಪಗೊಂಡಿದೆ.

ಶಿಬಿರದಲ್ಲಿ ಮಕ್ಕಳು, ಯುವಕರು ಹಾಗೂ ಹಿರಿಯರು ಎಂಬ ಮೂರು ವಿಭಾಗದಲ್ಲಿ ಭಾಗವಹಿಸಿದ್ದರು. 5ರಿಂದ 12ವರ್ಷ ವಯೋಮಾನದ ಮಕ್ಕಳಿಗಾಗಿ ಅಚ್ಯುತ, 13ರಿಂದ 20ವರ್ಷ ಪ್ರಾಯದ ವಿದ್ಯಾರ್ಥಿಗಳಿಗಾಗಿ ಅನಂತ ಹಾಗೂ 21ರಿಂದ 80 ವರ್ಷ ವಯೋಮಾನದವರಿಗಾಗಿ ಗೋವಿಂದ ವಿಭಾಗವನ್ನು ರೂಪಿಸಲಾಗಿತ್ತು.

ನಿತ್ಯಸ್ತೋತ್ರ, ಭಜನೆ, ಕಲೆ, ಆಟ, ಕರಕುಶಲ ವಸ್ತುಗಳ ತಯಾರಿ, ಗೀತೆ, ಧಾರ್ಮಿಕ ಪ್ರಶ್ನೋತ್ತರ, ಯೋಗ ಸೇರಿದಂತೆ ಹಲವು ಚಟುವಟಿಕೆಯನ್ನು ಒಳಗೊಂಡಿದ್ದ ಶಿಬಿರದಲ್ಲಿ ಭಾಗವಹಿಸಿದವರು ಉತ್ಸಾಹದಿಂದ ಪಾಲ್ಗೊಂಡು ಭಾರತೀಯ ಸಂಸ್ಕೃತಿ ಹಾಗೂ ಧಾರ್ಮಿಕ ಮೌಲ್ಯಗಳ ಅರಿವು ಪಡೆದರು.

ಶಿಬಿರಕ್ಕೆ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯರು, ನಿತಿನ್, ವೆಂಕಟೇಶ ಚನ್ನಳ್ಳಿ, ಶಿಲ್ಪಾ, ಸುಮನ ಭಟ್, ಮರುತ ಬೇಳೆ, ಆನಂದತೀರ್ಥ, ವಿಜಯ ಆಚಾರ್ಯ, ಅಕ್ಷಯ ಮಠಂ, ಸ್ಕಂದ ಭಾರ್ಗವ ಹಾಗೂ ಕೃಷ್ಣರಾಜ ಭಟ್ ಕುತ್ಪಾಡಿ ಸೇರಿದಂತೆ ಹಲವರು ಅಧ್ಯಾಪಕರಾಗಿ ಮಾರ್ಗದರ್ಶನ ನೀಡಿದರು.



ನೆಲಮಂಗಲ ತಾಲೂಕು ಕಸಾಪ ಪದಾಧಿಕಾರಿಗಳ ಪದಗ್ರಹಣ । ಗಣ್ಯರಿಂದ ಅಭಿನಂದನೆ

ಕನ್ನಡ ಸಾಹಿತ್ಯ ಬೆಳವಣಿಗೆ ನಮ್ಮ ಹೊಣೆ

• **ನೆಲಮಂಗಲ:** ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಜವಾಬ್ದಾರಿ ಪಡೆದ ಮೇಲೆ ಕನ್ನಡಸಾಹಿತ್ಯವನ್ನು ಬೆಳೆಸುವುದಕ್ಕಿಂತ ಉಳಿಸುವ ಕೆಲಸವನ್ನು ಮುಖ್ಯವಾಗಿ ಮಾಡಬೇಕಾಗಿದೆಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೃಷ್ಣಪ್ಪ ತಿಳಿಸಿದರು.

ನಗರದ ದಿವ್ಯಜ್ಯೋತಿ ಪಿಯು ಕಾಲೇಜಿನ ಕುವೆಂಪು ವೇದಿಕೆಯಲ್ಲಿ ಕನ್ನಡಸಾಹಿತ್ಯ ಪರಿಷತ್ ತಾಲೂಕು ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿ, ಸಾಹಿತ್ಯದಸಂಸ್ಥೆಯಾಗಿ ಜಗತ್ತಿನಲ್ಲಿ ಅತಿ ಹೆಚ್ಚು ಸದಸ್ಯತ್ವ ಪಡೆದ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್, ಕನ್ನಡ 'ಸಾಹಿತ್ಯದ ಸಂಪತ್ತು ನಮ್ಮ ಭಾಷೆಯ ಹಿರಿಮೆಯನ್ನು ತಿಳಿಸುತ್ತದೆ. ನಮ್ಮ ಸಂಸ್ಥೆಯಲ್ಲಿ ಪದಾಧಿಕಾರಿಗಳಾದವರು ಪ್ರಾಮಾಣಿಕವಾಗಿ ಬದ್ಧತೆಯಿಂದ ಕೆಲಸಮಾಡಬೇಕು. ಅರ್ಹರಿಗೆ ಅವಕಾಶ ಸಿಕ್ಕಾಗ ಪರಿಷತ್ ಕೆಲಸಗಳು ವೇಗವಾಗಿ ಮಾಡಬಹುದು. ಗೊಂದಲದಲ್ಲಿ ಯಾರು ಕೂಡ ಕೆಲಸ ಮಾಡಬಾರದೆಂದರು.

ನೂತನ ಅಧ್ಯಕ್ಷ ಕೆ.ವಿಸದಾನಂದ ಆರಾಧ್ಯ ಮಾತನಾಡಿ, ಶಿಕ್ಷಕನಾಗಿ ಸೇವೆಸಲ್ಲಿಸುವ ಜತೆ 30 ವರ್ಷದಿಂದ ಸಾಹಿತ್ಯ ಕ್ಷೇತ್ರದ ಆಸಕ್ತಿಯಲ್ಲಿ ಬೆಳೆದುಬಂದಿದ್ದೇನೆ, ಕನ್ನಡ ಸಾಹಿತ್ಯ ಪರಿಷತ್ ತಾಲೂಕುಅಧ್ಯಕ್ಷನಾಗುವ ಅವಕಾಶ ಸಿಕ್ಕಿರುವುದು ಸಂತೋಷ ವಾಗಿದೆ. ಮುಂದಿನ ದಿನದಲ್ಲಿ ಜಿಲ್ಲಾಧ್ಯಕ್ಷರ ಮಾರ್ಗದರ್ಶನ ದಲ್ಲಿ ಕಾರ್ಯಕ್ರಮವನ್ನು ರೂಪಿಸಿ ಕೆಲಸ ಕಾರ್ಯವನ್ನು ಮಾಡಿಕೊಂಡು ಹೋಗುತ್ತೇನೆಂದರು.

ನೂತನ ಪದಾಧಿಕಾರಿಗಳ ಆಯ್ಕೆ: ತಾಲೂಕು ಅಧ್ಯಕ್ಷ ರಾಗಿ ಕೆ.ವಿ.ಸದಾನಂದಆರಾಧ್ಯ, ಗೌರವ ಕೋಶಾಧ್ಯಕ್ಷ ಎಂ.ನಾರಾಯಣ ಗೌಡ, ಗೌರವ ಕಾರ್ಯದರ್ಶಿ ಸುರೇಶ್, ಆನಂದಪ್ಪ, ಮೌರ್ಯ, ಹೋಬಳಿ ಅಧ್ಯಕ್ಷರಾದ ಮಲ್ಲೇಶ್, ರಾಮುಹುರುಳಿಹಳ್ಳಿ, ರವೀಶ್, ಲಕ್ಷ್ಮೀಕಾಂತ್, ಮಹಿಳಾ ಪ್ರತಿನಿಧಿಗಳಾಗಿ ವೀಣಾ, ಸುಮಲತಾ, ಪರಿಶಿಷ್ಟ ಜಾತಿ ಪ್ರತಿನಿಧಿಗಳಾಗಿ ಸಿದ್ದಯ್ಯ.ಸಿ.ಎಚ್, ಶ್ರೀನಿವಾಸ ಮೂರ್ತಿ, ಪರಿಶಿಷ್ಟ ಪಂಗಡ ಪ್ರತಿನಿಧಿ ಇಂದುಕುಮಾರ್, ಅಲ್ಪಸಂಖ್ಯಾತ ಪ್ರತಿನಿಧಿ ಸಿರಾಜ್ ಅಹ್ಮದ್, ಸಂಘಸಂಸ್ಥೆಗಳ ಪ್ರತಿನಿಧಿ ವಿಜಯಕುಮಾರ್‌ವೆಚ್.ಎಸ್, ಹಿಂದುಳಿದವರ್ಗ ಶಿವಲಿಂಗಯ್ಯ ಸೇರಿದಂತೆ ಅನೇಕರು ಪದಾಧಿಕಾರಿಗಳಾಗಿ ಆಯ್ಕೆಯಾಗಿದ್ದಾರೆ. ಅಧಿಕಾರ ಸ್ವೀಕರಿಸಿದರು. ಈ ಹಿಂದೆ ಅಧ್ಯಕ್ಷರಾಗಿದ್ದ ಪ್ರಕಾಶ್‌ಮೂರ್ತಿಯವರು ಈಗಿನ ಅಧ್ಯಕ್ಷ ಸದಾನಂದ ಆರಾಧ್ಯ ಅವರಿಗೆ ಕನ್ನಡದ ಧ್ವಜವನ್ನು ನೀಡುವ ಮೂಲಕ ಅಧಿಕಾರ ಹಸ್ತಾಂತರ ಮಾಡಿದರು.

ಪರಿಷತ್ ರಾಜ್ಯ ಪ್ರತಿನಿಧಿ ಕೃಷ್ಣ ಮೂರ್ತಿ, ನಗರಸಭೆ ಅಧ್ಯಕ್ಷ ಎನ್.ಗಣೇಶ್, ಹಿರಿಯ ಸಾಹಿತಿ ಮಣ್ಣೆಮೋಹನ್,ಎನ್‌ಪಿಎ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್, ಬಿಜಿಪಿ ರಮೇಶ್, ಬಿಜೆಪಿ ಜಿಲ್ಲಾಧ್ಯಕ್ಷ ರಾಮಕೃಷ್ಣಪ್ಪ, ಪರಿಷತ್ ಜಿಲ್ಲಾಮಹಿಳಾ ಪ್ರತಿ ನಿಧಿ ಮಂಜುಳಾ ಸಿದ್ದರಾಜು,ವೀರಶೈವ ಲಿಂಗಾಯಿತ ಮಾಜಿ ಅಧ್ಯಕ್ಷ ಶಾಂತಕುಮಾರ್, ಕಸಾಪ ಮಾಜಿ ಅಧ್ಯಕ್ಷ ಪ್ರದೀಪ್‌ಕುಮಾರ್, ಉಮೇಶ್‌ಗೌಡ, ಗೋಪಾಲ್ ಸೇರಿ ದಂತೆ ಮತ್ತಿತರರಿದ್ದರು.



ನಿಕಟ ಪೂರ್ವ ಅಧ್ಯಕ್ಷ ಪ್ರಕಾಶ್‌ಮೂರ್ತಿ ಅವರು ನೂತನ ಅಧ್ಯಕ್ಷ ಕೆ.ವಿ.ಸದಾನಂದ ಆರಾಧ್ಯ ಅವರಿಗೆ ಕನ್ನಡ ಬಾವುಟ ನೀಡುವ ಮೂಲಕ ಅಧಿಕಾರ ಹಸ್ತಾಂತರ ಮಾಡಿದರು.

ಸಾಹಿತ್ಯಸಮಾಜದ ಶಕ್ತಿಯಾಗಲಿ

ಕನ್ನಡಸಾಹಿತ್ಯ ಪರಿಷತ್‌ನಲ್ಲಿ ಪ್ರತಿಯೊಬ್ಬರು ಸದಸ್ಯತ್ವ ಪಡೆಯಬೇಕು, ಸಾಹಿತ್ಯದ ಕಾರ್ಯಕ್ರಮವನ್ನು ಆಡಂಬರದಿಂದ ಮಾಡುವ ಬದಲು ಸಾಹಿತ್ಯದ ಉನ್ನತಿಗೆ ಶಕ್ತಿಯಾಗುವ'ಕಾರ್ಯಕ್ರಮವನ್ನು ಆಯೋಜನೆ ಮಾಡಿ, ಸದಾನಂದ ಆರಾಧ್ಯ ಅವರ ನೇತೃತ್ವದಲ್ಲಿ ಸಾಹಿತ್ಯದ ಕೆಲಸಗಳು ಹೆಚ್ಚಾಗಲಿ ಎಂದು ಬಸವಣ್ಣ ದೇವರಮಠದ ಶ್ರೀಸಿದ್ದಲಿಂಗಸ್ವಾಮೀಜಿ ಹೇಳಿದರು.

IN THE COURT OF THE CIVIL JUDGE AND J.M.F.C AT CHICKBALLAPUR

Crl. Misc No: 27/2025

PETITIONERS: 1. Smt.Rajamma W/o. Late Venkata Bhatrachar Aged about 80 years. 2. Sri. Sreenivasa Bhattar G.V S/o. Late Venkata Bhatrachar Aged about 53 years. 3. Sri.Sheshadri Bhattar P.V S/o. Late Venkata Bhatrachar Aged about 45 years, All are Residing at No:17, Golladoddi Majra Paiyuru Village, Kasaba Hobli, Chickballapur Taluk and District. V/s

RESPONDENT : The Registrar of Births and Deaths Office of the Tahasildar, Chickballapur.

PAPER PUBLICATION

The petitioners have filed this petition for grant of death certificate of 1st petitioner's mother-in-law and 2nd & 3rd petitioner's grandmother Smt.Mangamma W/o. Late Narasimhabhattrachar was died leaving behind petitioners as her legal heirs at Golladoddi Majra Paiyuru Village, Kasaba Hobli, Chickballapur Taluk. She died on 27-03-1937.

1. Whom so ever if any person who are related or interest or dispute date of death of Smt. Mangamma W/o. Late Narasimhabhattrachar may hereby directed to appear in the above said court in person or through pleader duly instructed and to able to answer all material question raising in the petition on the day of 27.05.2026 at 11 AM in said court.

Take notice that in default of your appearance on the date before menced in the petition, it will be heard and determine ex-parte.

Given under my hand seal of the court on the day of 22.05.2026

By Order of the Court
Chief Ministrial Officer Prl. Civil Judge and JMFC Court, Chickballapur-562101
Jagadeeshwarachari, Advocate, Chickballapur

PUBLIC NOTICE

This is to inform the General Public that, my Client KIRAN KUMAR.L., Son of Lakshhmana.D. is the absolute owner of the Immovable Property bearing Number : 196, Khatha No. 47, Hogasandra Dhakale, Begur Hobli, Bandepalya, Bengaluru South Taluk, Bengaluru, measuring EAST TO WEST 30 FEET, NORTH TO SOUTH 20 FEET, BOUNDED ON EAST BY : PRIVATE PROPERTY, WEST BY : PRIVATE PROPERTY, NORTH BY ROAD, SOUTH BY ROAD and my Client has lost the Original Hakku Patra (Possession Certificate) on the name of PARVATHI wife of BHEEMAN issued on 21/05/1992 issued by TAHSILDAR, BENGALURU SOUTH TALUK, BENGALURU for which my client has filed complaint before Karnataka State Police, in vide LOST REPORT NO. 2216587/2026 dated 22/05/2026, if any person found the same shall handover or if any person have any claim over the same shall inform the to the undersigned Advocate in 07 days from the date of this Publication, thereafter any claim will not binding on my Client.

Sd/- S.V.VENKATESH, ADVOCATE
No.75/A, 1ST MAIN, 15TH CROSS, MARUTHI NAGAR, YELAHANKA, BENGALURU-560064,
MOBILE : 7760113411 / 9986022707,
DATE :22/05/2026

PUBLIC NOTICE

The notice is hereby given to public that our client Mrs.Nasima Banu has lost original registered sale deed bearing doc.no. 5138/2006-07 and 5804/2016-17. It is hereby informed to the public that in case any of them finds the same can contact on the below mentioned address or phone number.

SCHEDULE :

All that piece and parcel of Property bearing Site No.04, Khatha No.4 Later Khatha No.348/341 New V.P.Khatha No.348/341/4, Situated at Kambipura Village Kumbalagodu Village Panchayath, Kengeri Hobli, Bangalore South Taluk, measuring 20x30ft and bounded on the:- East by :Property No.05, West by :Property No.03, North by :18ft Road., South by : Property belongs Sri.Rabiyabi.

V.L. Associates
Advocates
No.56, Out house, 19th Main Road, 2nd Block, Rajajinagar, Bangalore-560 010.
Ph: 9481900851/ 9743323668.
Place: Bangalore Date: 23.05.2026

ಜಾಹೀರಾತಿಗಾಗಿ ಸಂಪರ್ಕಿಸಿ:
9845438807,
9611755391

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಳ್ಳಕೆರೆ. ಚಿತ್ರದುರ್ಗ (ಜಿ)
Ph No: 08195-222228 E-Mail:- apmcchallakeresec@gmail.com

ಪತ್ರ ಸಂಖ್ಯೆ:ಉಮಾಸ(ಚ):ಇ-ಟೆಂಡರ್/ಸ್ವಚ್ಛತಾ/ಭದ್ರತಾ/105/2026-27
ದಿನಾಂಕ:20-05-2026

ಟೆಂಡರ್ ಪ್ರಕಟಣೆ

1) ಪ್ರಾಂಗಣ ಸ್ವಚ್ಛತಾ ಸಿಬ್ಬಂದಿ ಇಂಡೆಂಟ್ ಸಂಖ್ಯೆ: APMC/2026-27/SE0853
2) ಭದ್ರತಾ ಸಿಬ್ಬಂದಿ ಇಂಡೆಂಟ್ ಸಂಖ್ಯೆ: APMC/2026-27/SE0854
3) ಇ-ಟೆಂಡರ್ ಸಿಬ್ಬಂದಿ ಇಂಡೆಂಟ್ ಸಂಖ್ಯೆ: APMC/2026-27/SE0855

2026-27ನೇ ಸಾಲಿಗೆ ಚಳ್ಳಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುತ್ತಿರುವ ಇ-ಟೆಂಡರ್ ಪ್ರಕ್ರಿಯೆಗೆ ಒಬ್ಬ "ಸಿಸ್ಟಮ್ ಅಡ್ಮಿನಿಸ್ಟ್ರೇಟರ್" ಹಾಗೂ 3 ಜನ "ಡಾಟಾ ಎಂಟ್ರಿ ಆಪರೇಟರ್" ಒಟ್ಟು 4 ಜನ ಇ-ಟೆಂಡರ್ ಸಿಬ್ಬಂದಿ ಹಾಗೂ ಚಳ್ಳಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಪ್ರಾಂಗಣದ ಸ್ಥಿರ ಮತ್ತು ಚರಾಸ್ತಿಗಳ ರಕ್ಷಣೆ, ಭದ್ರತೆ, ತನಿಖಾಠಾಣೆಯಲ್ಲಿ ಸಂಚಾರ ನಿಯಂತ್ರಣ, ಕಛೇರಿಕಾರ್ಯನಿರ್ವಹಣೆಗೆ 06 ಜನ ಭದ್ರತಾ ಸಿಬ್ಬಂದಿ (ಒಬ್ಬ ಎಲೆಕ್ಟ್ರೀಷಿಯನ್ ಒಳಗೊಂಡಂತೆ) ಹಾಗೂ ಒಬ್ಬ ವಾಹನ ಚಾಲಕರು ಮತ್ತು ಕಂಪ್ಯೂಟರ್ ಅನುಭವವುಳ್ಳ ಒಬ್ಬ ಬೆರಳಚ್ಚುಗಾರರು ಒಟ್ಟು 08 ಜನ ಹಾಗೂ ಈ ಸಮಿತಿಯ ವತಿಯಿಂದ ರಾಂಪುರ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಒಬ್ಬ ಭದ್ರತಾ ಸಿಬ್ಬಂದಿ ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಾಆಯೋ, ಚಿತ್ರದುರ್ಗರವರ ಕಛೇರಿಗೆ ಒಬ್ಬ ಕಂಪ್ಯೂಟರ್ ಅನುಭವವುಳ್ಳ ಬೆರಳಚ್ಚುಗಾರರು ಸೇರಿ ಒಟ್ಟು 10 ಜನ ಭದ್ರತಾ ಸಿಬ್ಬಂದಿಯವರ ಸೇವೆ ಹಾಗೂ ಪ್ರಾಂಗಣದ ಸ್ವಚ್ಛತೆಗೆ 07 ಜನ ಸ್ವಚ್ಛತಾ ಸಿಬ್ಬಂದಿ ಸೇವೆಯನ್ನು ಒದಗಿಸಲು ಕಾರ್ಮಿಕ ಇಲಾಖೆಯಿಂದ ಮಾನ್ಯತೆ ಪಡೆದ ಏಜೆನ್ಸಿಯವರಿಂದ 2026-27ನೇ ಸಾಲಿನ (ಕಾರ್ಯಾದೇಶ ನೀಡಿದ ದಿನಾಂಕದಿಂದ ದಿನಾಂಕ: 31-05-2027ರವರೆಗೆ) ಅವಧಿಗೆ ಗುತ್ತಿಗೆ ಆಧಾರದ ಮೇಲೆ ಸಮಿತಿಯು ನಿಗಧಿಪಡಿಸಿರುವ ಕರಾರುಗಳಿಗೆ ಒಳಪಟ್ಟು ಭದ್ರತಾ/ಸ್ವಚ್ಛತಾಏಜೆನ್ಸಿ ಹಾಗೂ ಖಾಸಗಿ ಸಂಘ ಸಂಸ್ಥೆಗಳಿಂದ ಇ-ಟೆಂಡರ್, ಭದ್ರತಾ ಹಾಗೂ ಸ್ವಚ್ಛತಾ ಟೆಂಡರುಗಳನ್ನು ಪ್ರತ್ಯೇಕವಾಗಿ ದ್ವಿ-ಲಕೋಟೆ ಮೂಲಕ ಶೇಕಡವಾರು ಟೆಂಡರ್ ಪದ್ಧತಿಯಲ್ಲಿ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ನ್ನು ಇ-ಪೇಮೆಂಟ್ ಮೂಲಕ ಇ-ಪ್ರಕ್ಯೂರಮೆಂಟ್ ಖಾತೆಗೆ ಪಾವತಿಸತಕ್ಕದ್ದು. ಸದರಿ ಹಣವನ್ನು ಪಾವತಿಸದೇ ಇರುವ ಏಜೆನ್ಸಿರವರ ತಾಂತ್ರಿಕ/ಆರ್ಥಿಕ ಬಿಡ್ಡನ್ನು ತೆರೆಯಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ನಮ್ಮ ಕಛೇರಿಯಿಂದ ಅಥವಾ ಸರ್ಕಾರಿ ವೆಬ್‌ಸೈಟ್ https://kppp.karnataka.gov.inನಲ್ಲಿ ಪಡೆಯಬಹುದಾಗಿದೆ 1) ಟೆಂಡರ್ Queries / Clarifications ಸಲ್ಲಿಸಲು ಕೊನೆಯ ದಿನಾಂಕ:27-05-2026 ಸಂಜೆ 4.00 ರವರೆಗೆ 2)ಇ-ಟೆಂಡರ್ ಮೂಲಕ ಟೆಂಡರ್‌ನ್ನು ಭರ್ತಿ ಮಾಡಿ ಸಲ್ಲಿಸುವ ಅಂತಿಮ ದಿನಾಂಕ: 08-06-2026 ಸಂಜೆ 4.00ಗಂಟೆರವರೆಗೆ 3)ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:10-06-2026 ಬೆಳಗ್ಗೆ 11.00ಗಂಟೆ ತೆರೆಯಲಾಗುವುದು 4) ಟೆಂಡರ್‌ನ ಆರ್ಥಿಕ ಬಿಡ್‌ನ್ನು ಸಾಧ್ಯವಾದಲ್ಲಿ ದಿನಾಂಕ:12-06-2026 ಬೆಳಗ್ಗೆ 11.30ಗಂಟೆಗೆ ತೆರೆಯಲಾಗುವುದು 5) ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ಸ್ವೀಕರಿಸುವ ಹಾಗೂ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. 6) ಸಮಿತಿಗೆ ನೇಮಿಸಿಕೊಳ್ಳುವ ಇ-ಟೆಂಡರ್/ಭದ್ರತಾ / ಸ್ವಚ್ಛತಾ ಸಿಬ್ಬಂದಿಗಳ ಸಂಖ್ಯೆಯನ್ನು ಮಂಜೂರಾತಿಗೆ ಅನುಗುಣವಾಗಿ ಮತ್ತು ಸಮಿತಿಯ ಆದಾಯದ ಅನುಗುಣವಾಗಿ ಕಡಿತಗೊಳಿಸುವ/ ಹೆಚ್ಚಿಸುವ ಅಧಿಕಾರವನ್ನು ಸಮಿತಿಯುವ ಹೊಂದಿದ್ದು, ಈ ಬಗ್ಗೆ ಸಮಿತಿಯ ಸೂಚನೆಗೆ ಭದ್ರತಾ ಏಜೆನ್ಸಿಯು ಬದ್ಧರಾಗಿರತಕ್ಕದ್ದು. 7) ಆರ್ಥಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ ಎಲ್-1 ಬಿಡ್‌ದಾರರು 01 ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದಲ್ಲಿ ಲಾಟರಿ ಮೂಲಕ ಆಯ್ಕೆ ಮಾಡಲಾಗುವುದು.

ಸಹಿ/- ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಳ್ಳಕೆರೆ.

ಸಹಿ/- ಆಡಳಿತಾಧಿಕಾರಿಗಳು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಳ್ಳಕೆರೆ.

DIPR/CTA/KSMCA/119/2026-27

PUBLIC NOTICE

On behalf of my client Mr. Syed Shahzada, s/ o. Abdul Latheef, Educationalist, SNM school road, Andersonpet post, KGF (Mobile NO. 9449837137) I am issuing this public notice as follows;

Whereas on 15/4/2026 what my client was travelling in his vehicle at Andersonpet, he lost the following original documents;

1. Original registered sale certificate dated 22/5/ 2004which is registered before SRO, Bangarpet vide Document No. BPT-I-00530/2004-05, Dated 24/05/2004.
2. Original registered sale deed dated 28/03/2006 which is registered before SRO, Bangarpet vide Document No. BPT-I-03620/2005-06 Dated 28/03/2006.
3. Original registered sale deed dated 28/06/2006 which is registered before SRO, Bangarpet vide Document No. BPT-I-01166/2006-07 Dated 28/06/2006.
4. Original registered sale deed dated 07/07 / 2006 which is registered before S.RO, Bangarpet vide Document No. BPT-I-013L14j2006-07 Dated 12/07/2006.
5. Original registered. sale deed dated 23/12/2009 which is registered before SRO, Bangarpet vide Document No. BPT-I-06752/2009-10 Dated 23/12/2009.
6. Original registered sale deed dated 19/03/2011 which is registered before SRO, Bangarpet vide Document No. BPT-I-07677/2010-11 Dated 19/03/2011.

It is hereby informed to general public that if any person finds above the said documents, please hand over the same to my above said client or to us at following address. If any person misuses said documents in any manner, my client will take appropriate actions against such persons and in such event they will render themselves liable for all the costs and consequences of such proceedings.

AMARESH & ASSOCIATES
AMARESHA
A.CHETHAN
ADVOCATES & CONSULTANTS
2nd Floor, Karnataka Bank Building, BANGARPET-563114
Mobile: 9844595885, 9845675822

PUBLIC NOTICE

Under the instructions from my client The Branch Manager, M/s Shriram Finance Ltd, Hindupur Branch, Hindupur District, Andhra Pradesh. I issue the following notice to the general public. My clients intends to grant loan to Sri.C.Narayanaswamy S/o Late of Channappa, R/at Pottivaripalli Village, Mittemari Hobli, Bagepally Taluk, Chickballapur District, more fully described here under a security by way of Regd. Mortgage, as such if any body have any claims, changes, mortgages, sale agreements, court attachments, court disputes etc., shall be informed to the address mentioned below with in 7 days from the date of Notice other wise, later objections will not be bind on any claims in this regards.

SCHEDULE PROPERTIES

All that piece and parcel of H.L.No.36, measuring 24X33 feet of Pottivaripalli Village, Mittemari Hobli, Bagepally Taluk, Chickballapur District, bounded on the East by House Property of Channappa, West by House of Koracha Katarayappa, North by Road, South by Land.

ADDRESS
C.M.Niranjana Swamy, B.Sc., LLM., Advocate, 4th Cross, Gowripet, Kolar, Kolar-563101.
Mobil No. 9448402783.
Date: 23/05/2026

ಶ್ರೀರಂಗಪಟ್ಟಣದ ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ
ಸಿ.ಮಿಸ್. ನಂ. 16/2026

ಅರ್ಜಿದಾರರು : 1) ಶ್ರೀಮತಿ ಲಕ್ಷ್ಮಮ್ಮ [illegible] 73 ವರ್ಷಗಳು, [illegible] 54 ವರ್ಷಗಳು [illegible] ಮನೆ ನಂ.426/4, 7ನೇ ಕ್ರಾಸ್ [illegible] ಬೆಂಗಳೂರು ಜಿಲ್ಲೆ.

-ವಿರುದ್ಧ-

ಎದುರುದಾರರು:- ತಹಸೀಲ್ದಾರ್ ಶ್ರೀರಂಗಪಟ್ಟಣ ತಾಲ್ಲೂಕು, ಶ್ರೀರಂಗಪಟ್ಟಣ.

ನ್ಯಾಯಾಲಯದ ನೋಟೀಸು

[illegible] ದಿನಾಂಕ 19.10.1984 [illegible] ಸಿ.ಮಿಸ್. ನಂ. 16 /2026 [illegible] ದಿನಾಂಕ 29.06.2026ಕ್ಕೆ [illegible] 11-00 ಘಂಟೆಗೆ [illegible]

ದಿನಾಂಕ 10.04.2026 [illegible]

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಶ್ರೀರಂಗಪಟ್ಟಣದ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಶ್ರೀರಂಗಪಟ್ಟಣ
[illegible]

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಶ್ರೀರಂಗಪಟ್ಟಣ
ಸಿ.ಮಿಸ್. ನಂ. 58/2026

ಅರ್ಜಿದಾರರು:- 01. [illegible] 66 ವರ್ಷ, 02. [illegible] 47 ವರ್ಷ, 03. [illegible] 25 ವರ್ಷ, 04. [illegible] 60 ವರ್ಷ, 05. [illegible] 66 ವರ್ಷ, 06. [illegible] 49 ವರ್ಷ, 07. [illegible] 48 ವರ್ಷ, 08. [illegible] 46 ವರ್ಷ, [illegible] ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

-ವಿರುದ್ಧ-

ಎದುರುದಾರರು:- [illegible] ಶ್ರೀರಂಗಪಟ್ಟಣ

-ಸಾರ್ವಜನಿಕ ತಿಳುವಳಿಕೆ-

[illegible] ದಿನಾಂಕ:25/03/1995 [illegible] 29.06.2026 [illegible] 11-00 ಘಂಟೆಗೆ [illegible]

[illegible] ದಿನಾಂಕ 21.05.2026 [illegible]

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಶ್ರೀರಂಗಪಟ್ಟಣ ಪ್ರಧಾನ ಸಿವಿಲ್ (ಹಿ.ವಿ), ನ್ಯಾಯಾಧೀಶರ ನ್ಯಾಯಾಲಯದಲ್ಲಿ
ಅರ್ಜಿದಾರರ ಪರ ವಕೀಲರು: ಸಿ.ಎಸ್.ವೆಂಕಟೇಶ್
[illegible]

IN THE COURT OF THE XXXV ADDL. CITY CIVIL JUDGE AT BENGALURU (CCH- 36)

P & SC No. 550/2025

Between:
Sri. Purnachandra.C,
Son of late Channaraju H.P,
Aged about 39 years, Residing at No.2, Building SHIG C1, Shiva Mandira Road, 5th Phase, Yelahanka New Town, Bengaluru-560064 ...Petitioner
AND: NIL ...Respondent

PUBLIC NOTICE

WHEREAS, the above named petitioner has filed a petition under section 372 of Indian Succession Act, praying for grant of Succession Certificate, ie., succeeding to the estates of Late Gayathri, who died on 30.08.2024. The above case was dismissed for non prosecution, thereafter a Misc petition No.70/2026 was filed to set aside the dismissal order and to restore the same before this Hon'ble court. After considering the facts pleaded and documents produced by the Petitioner, was pleased to set aside and restored the above case before this Hon'ble court.

Any person having their objection/s for issue of Succession Certificate for receiving the amount/benefits of deceased Smt. Gayathri .V and any person having interest may cause the same by appearing before the court in person or through their Advocate on 12.06.2026 at 11.00 AM failing which the this matter will be heard and disposed off in accordance with law.

Given under my hand and seal of the Hon'ble court on 18.05.2026. By order of the Court

Sd/- Sheristhedar
City Civil Court, Bengaluru

Advocate for Petitioner:
Sri. K Tamilvanan,
Advocate and Associates,
No.751, 2nd Floor, 60th Cross,5th Block, Rajajinanar Bashvam Circle, Bangalore.

ಭವಿಷ್ಯದ ಸಂಘರ್ಷಗಳಿಗೆ ಸಜ್ಜು: ಸಿಡಿಎಸ್

ಯುದ್ಧದ ತಂತ್ರಗಳಲ್ಲಿ ವೇಗದ ಬದಲಾವಣೆ

ತಂತ್ರಜ್ಞಾನವೇ ಭವಿಷ್ಯದ ಯುದ್ಧಗಳ ಗೆಲುವಿನ ಗುಟ್ಟು: ಜ। ಚೌಹಾಣ್

• **ಶಿರಡಿ:** ಭವಿಷ್ಯದ ಯುದ್ಧಗಳು ಭೂಮಿ, ಸಮುದ್ರ, ವಾಯು, ಸೈಬರ್ ಹಾಗೂ ಕಾಗ್ನಿಟಿವ್ ಕ್ಷೇತ್ರಗಳನ್ನು ಒಳಗೊಂಡ ಬಹುಆಯಾಮದ ಸ್ವರೂಪ ಪಡೆದುಕೊಳ್ಳಲಿದ್ದು, ತಂತ್ರಜ್ಞಾನ, ವೇಗ



ಮತ್ತು ನವೀನತೆಯೇ ಯಶಸ್ವಿಕಾರ್ಯಾಚರಣೆಗಳ ಪ್ರಮುಖ ಅಂಶಗಳಾಗಲಿವೆ ಎಂದು ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ತಿಳಿಸಿದ್ದಾರೆ.

ಮಹಾರಾಷ್ಟ್ರದ ಅಹಿಲ್ಯಾನಗರ ಜಿಲ್ಲೆಯಲ್ಲಿರುವ ರಕ್ಷಣಾ ಉತ್ಪಾದನಾ ಘಟಕದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯುದ್ಧ ಮತ್ತು ಯುದ್ಧ ತಂತ್ರಗಳು ವೇಗವಾಗಿ ಬದಲಾಗುತ್ತಿವೆ ಎಂದು ಹೇಳಿದರು. ಆಧುನಿಕ ಯುದ್ಧಗಳು ಕೇವಲ ಮಾನವಬಲ ಅಥವಾ ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳ ಮೇಲೆ ಅವಲಂಬಿತವಾಗಿರುವುದಿಲ್ಲ, ಕೃತಕ ಬುದ್ಧಿಮತ್ತೆ, ಡ್ರೋನ್‌ಗಳು, ರೋಬೋಟಿಕ್ಸ್, ಸೈಬರ್ ವ್ಯವಸ್ಥೆಗಳು, ಸ್ವಾಯತ್ತ ವೇದಿಕೆಗಳು, ಬಾಹ್ಯಾಕಾಶ ತಂತ್ರಜ್ಞಾನ, ನಿಖರ ದಾಳಿ ಶಸ್ತ್ರಾಸ್ತ್ರಗಳು ಹಾಗೂ ಮಾಹಿತಿ ಪ್ರಾಬಲ್ಯ ಭವಿಷ್ಯದ ಯುದ್ಧಗಳಿಗೆ ನಿರ್ಣಾಯಕ ರೂಪ ನೀಡುತ್ತಿವೆ ಎಂದು ಅವರು ಅಭಿಪ್ರಾಯಪಟ್ಟರು. 'ಮುಂದಿನ ದಿನಗಳಲ್ಲಿ ತಂತ್ರಜ್ಞಾನ, ವೇಗ ಮತ್ತು ನವೀನತೆಯೇ ಯಶಸ್ವಿ ಕಾರ್ಯಾಚರಣೆಗಳ ನಿರ್ಧಾರಕ ಅಂಶಗಳಾಗಲಿವೆ. ಭವಿಷ್ಯದ ಯುದ್ಧಭೂಮಿಗಳು ಕೇವಲ ಭೌಗೋಳಿಕ ಪ್ರದೇಶಗಳಿಗೆ ಸೀಮಿತವಾಗಿರುವುದಿಲ್ಲ, ಮಾಹಿತಿ ಜಾಲಗಳು, ಡಿಜಿಟಲ್ ಪರಿಸರ ಹಾಗೂ ಸೈಬರ್ ಮೂಲಸೌಕರ್ಯಗಳೂ ಯುದ್ಧದ ಭಾಗವಾಗಲಿವೆ' ಎಂದು ಅವರು ಹೇಳಿದರು.

ಯೋಧರ ಧೈರ್ಯ ಮಾತ್ರ ರಾಷ್ಟ್ರದ ಭದ್ರತೆಯನ್ನು ಖಚಿತಪಡಿಸುವುದಿಲ್ಲ, ತಾಂತ್ರಿಕ ಪರಿಸರ, ಕೈಗಾರಿಕಾ ಸಾಮರ್ಥ್ಯ, ಉತ್ಪಾದನಾ ಶಕ್ತಿ ಮತ್ತು ನವೋದ್ಯಮ ಸಾಮರ್ಥ್ಯವೂ ಸಮಾನವಾಗಿ ಅಗತ್ಯವೆಂದು ಅವರು ತಿಳಿಸಿದರು. ವೇಗವಾಗಿ ಉತ್ಪಾದನೆ ಹೆಚ್ಚಿಸುವ ಹಾಗೂ ತ್ವರಿತವಾಗಿ ಬದಲಾವಣೆಗೆ ಹೊಂದಿಕೊಳ್ಳುವ ದೇಶಗಳಿಗೆ ತಂತ್ರಾತ್ಮಕ ಮೇಲುಗೈ ದೊರೆಯಲಿದೆ ಎಂದು ಹೇಳಿದರು.

ರಕ್ಷಣಾ ಕ್ಷೇತ್ರದಲ್ಲಿ ಆತ್ಮನಿರ್ಭರತೆ ಕೇವಲ ಆರ್ಥಿಕ ಗುರಿಯಲ್ಲ, ಅದು ತಂತ್ರಾತ್ಮಕ ಅವಶ್ಯಕತೆಯೂ ಆಗಿದೆ ಎಂದು ಚೌಹಾಣ್ ಹೇಳಿದರು. ದೇಶೀಯ ರಕ್ಷಣಾ ಉತ್ಪಾದನೆ ಸುಮಾರು 1.27 ಲಕ್ಷ ಕೋಟಿ ರೂ.ಗೆ ತಲುಪಿದ್ದು, ರಕ್ಷಣಾ ರಫ್ತು 38 ಸಾವಿರ ಕೋಟಿ ರೂ.ಗಳ ದಾಖಲೆ ಮಟ್ಟ ತಲುಪಿದೆ. 100ಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಸಾಮಗ್ರಿಗಳನ್ನು ರಫ್ತು ಮಾಡಲಾಗುತ್ತಿದೆ ಎಂದರು.

ನೈಬ್ ಸಮೂಹದ ಈ ರಕ್ಷಣಾ ಉತ್ಪಾದನಾ ಘಟಕದಲ್ಲಿ ಆರ್ಟಿಲರಿ ಬಾಂಬ್‌ಶೆಲ್‌ಗಳ ತಯಾರಿಕೆ ನಡೆಯಲಿದೆ. 'ಇದುವರೆಗೆ ಶಿರಡಿ ಭಕ್ತಿ ಮತ್ತು ಆಧ್ಯಾತ್ಮಕ್ಕೆ ಪ್ರಸಿದ್ಧವಾಗಿತ್ತು. ಇದೀಗ ರಕ್ಷಣಾ ಉತ್ಪಾದನೆ, ಕೈಗಾರಿಕಾ ಅಭಿವೃದ್ಧಿ, ತಾಂತ್ರಿಕ ನವೀನತೆ ಹಾಗೂ ರಾಷ್ಟ್ರೀಯ ಭದ್ರತೆಯ ಕೇಂದ್ರವಾಗಿಯೂ ಗುರುತಿಸಿಕೊಳ್ಳಲಿದೆ' ಎಂದು ಅವರು ಹೇಳಿದರು.

ರಕ್ಷಣಾ ಕ್ಷೇತ್ರದಲ್ಲಿ ಭಾರತದ ಸಾಧನೆ

- ದೇಶೀಯ ರಕ್ಷಣಾ ಉತ್ಪಾದನೆ 1.27 ಲಕ್ಷ ಕೋಟಿ ರೂ.ಗೆ ಏರಿಕೆ
- ರಕ್ಷಣಾ ರಫ್ತು 38 ಸಾವಿರ ಕೋಟಿ ರೂ. ದಾಖಲೆ ಮಟ್ಟಕ್ಕೆ
- 100ಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಸಾಮಗ್ರಿಗಳ ರಫ್ತು
- ನೂತನ ಘಟಕದಲ್ಲಿ ವರ್ಷಕ್ಕೆ 5 ಲಕ್ಷ 155 ಮಿ.ಮೀ. ಆರ್ಟಿಲರಿ ಶೆಲ್‌ಗಳ ಉತ್ಪಾದನೆ
- ಆತ್ಮನಿರ್ಭರ ಭಾರತ ಗುರಿಗೆ ಮತ್ತೊಂದು ಬಲಿಷ್ಠ ಹೆಜ್ಜೆ

ಖಾಲಿ ಮಾಡಲು ಜಿಮ್ಖಾನಾಗೆ ಆದೇಶ

• **ಹೊಸದಿಲ್ಲಿ:** ಕೇಂದ್ರ ಸರ್ಕಾರವು ಲುಟ್ಯೆನ್ಸ್ ದಿಲ್ಲಿಯಲ್ಲಿರುವ ದಿಲ್ಲಿ ಜಿಮ್ಖಾನಾ ಕ್ಲಬ್‌ಗೆ ಜೂ.5ರೊಳಗೆ ತನ್ನ ಆವರಣವನ್ನು ಖಾಲಿ ಮಾಡುವಂತೆ ಸೂಚಿಸಿದೆ. 27.3 ಎಕರೆ ವಿಸ್ತೀರ್ಣದ ಈ ಭೂಮಿಯು ರಕ್ಷಣಾ ಮೂಲಸೌಕರ್ಯಗಳನ್ನು ಬಲಪಡಿಸಲು ಮತ್ತು ಸುರಕ್ಷತೆಗಾಗಿ ಅಗತ್ಯವಿದೆ ಎಂದು ತಿಳಿಸಲಾಗಿದೆ. ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯದ ಭೂಮಿ ಮತ್ತು ಅಭಿವೃದ್ಧಿ ಕಚೇರಿ (ಎಲ್ ಆ್ಯಂಡ್ ಡಿಒ) ಈ ಆದೇಶ ಹೊರಡಿಸಿದ್ದು, ಪ್ರಧಾನ ಮಂತ್ರಿಗಳ ನಿವಾಸದ ಸಮೀಪವಿರುವ ಈ ಪ್ರದೇಶವು ಅತ್ಯಂತ ಸೂಕ್ಷ್ಮ ಹಾಗೂ ಆಯಕಟ್ಟಿನ ವಲಯದಲ್ಲಿದೆ ಎಂದು ಹೇಳಿದೆ. ಸಾರ್ವಜನಿಕ ಭದ್ರತೆ ಮತ್ತು ರಕ್ಷಣಾ ಉದ್ದೇಶಗಳಿಗಾಗಿ ಈ ಜಾಗದ ತುರ್ತು ಅಗತ್ಯವಿದೆ ಎಂದು ಸರ್ಕಾರ ತಿಳಿಸಿದೆ. ಲೀಸ್ ಒಪ್ಪಂದದ ನಿಯಮಗಳ ಪ್ರಕಾರ, ರಾಷ್ಟ್ರಪತಿಯವರ ಪರವಾಗಿ ಎಲ್ ಆ್ಯಂಡ್ ಡಿಒ ಈ ಗುತ್ತಿಗೆಯನ್ನು ರದ್ದುಗೊಳಿಸಿದ್ದು, ಜೂ.5 ರಂದು ಭೂಮಿಯನ್ನು ತನ್ನ ವಶಕ್ಕೆ ಪಡೆಯಲಿದೆ. ನಿಗದಿತ ದಿನಾಂಕದೊಳಗೆ ಶಾಂತಿಯುತವಾಗಿ ಜಾಗವನ್ನು ಹಸ್ತಾಂತರಿಸದಿದ್ದರೆ, ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕ್ಲಬ್‌ಗೆ ಎಚ್ಚರಿಕೆ ನೀಡಲಾಗಿದೆ. ಬ್ರಿಟಿಷರ ಕಾಲದಲ್ಲಿ(1913) ಇಂಪೀರಿಯಲ್ ದಿಲ್ಲಿ ಜಿಮ್ಖಾನಾ ಕ್ಲಬ್ ಆಗಿ ಪ್ರಾರಂಭವಾದ ಇದು, ಸ್ವಾತಂತ್ರ್ಯದ ನಂತರ ದಿಲ್ಲಿ ಜಿಮ್ಖಾನಾ ಕ್ಲಬ್ ಎಂದು ಮರುನಾಮಕರಣಗೊಂಡಿತು.

ಭಾರತದ ಗಡಿಗೆ ಅಭೇದ್ಯ ಕವಚ

ಭಾರತದ ಗಡಿಗಳನ್ನು ಸುರಕ್ಷಿತಗೊಳಿಸಲು ಮತ್ತು ನುಸುಳುವಿಕೆಯನ್ನು ಸಂಪೂರ್ಣವಾಗಿ ತಡೆಯಲು ಕೇಂದ್ರ ಸರ್ಕಾರವು ತಂತ್ರಜ್ಞಾನ ಆಧಾರಿತ ಬೃಹತ್ ಯೋಜನೆಯೊಂದನ್ನು ಸಿದ್ಧಪಡಿಸುತ್ತಿದೆ. ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಗಡಿಗಳಲ್ಲಿ ಆಧುನಿಕ ರಡಾರ್‌ಗಳು, ಡ್ರೋನ್‌ಗಳು ಮತ್ತು ಸ್ಮಾರ್ಟ್ ಕ್ಯಾಮೆರಾಗಳನ್ನು ಒಳಗೊಂಡ ಅಭೇದ್ಯ ಭದ್ರತಾ ವ್ಯವಸ್ಥೆಯನ್ನು ನಿರ್ಮಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಆ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಸ್ಮಾರ್ಟ್ ಬೇಲಿಯ ಅಗತ್ಯವೇಕೆ?

ಭಾರತವು ಪಾಕಿಸ್ತಾನ ಮತ್ತು ಬಾಂಗ್ಲಾದೇಶದೊಂದಿಗೆ ಹಂಚಿಕೊಂಡಿರುವ ಗಡಿ ರೇಖೆಯುದ್ದಕ್ಕೂ ಸಾಂಪ್ರದಾಯಿಕ ಬೇಲಿಗಳನ್ನು ನಿರ್ಮಿಸುವುದು ಅತ್ಯಂತ ಸವಾಲಿನ ಕೆಲಸವಾಗಿದೆ. ನದಿಗಳು, ಜೌಗು ಪ್ರದೇಶಗಳು, ದಟ್ಟವಾದ ಕಾಡುಗಳು ಮತ್ತು ಬದಲಾಗುತ್ತಿರುವ ಭೌಗೋಳಿಕ ಭೂಪ್ರದೇಶಗಳಿಂದಾಗಿ ಗಡಿಯ ಹಲವು ಭಾಗಗಳು ಮುಕ್ತವಾಗಿ ಉಳಿದುಬಿಡುತ್ತವೆ. ಉದಾಹರಣೆಗೆ, ಅಸ್ಸಾಂನ ಧುಬ್ರಿ ವಲಯದಲ್ಲಿ ಬ್ರಹ್ಮಪುತ್ರ ನದಿಯ ಉಪನದಿಗಳು ಮತ್ತು ಚಾರ್ ಭೂಮಿಗಳು ಇರುವುದರಿಂದ ಮಳೆಗಾಲದಲ್ಲಿ ಸಾಮಾನ್ಯ ಬೇಲಿಗಳು ಕೊಚ್ಚಿಹೋಗುತ್ತವೆ ಅಥವಾ ನಿಷ್ಪ್ರಯೋಜಕವಾಗುತ್ತವೆ. ಇಂತಹ ಪ್ರದೇಶಗಳಲ್ಲಿ ತಂತ್ರಜ್ಞಾನ ಆಧಾರಿತ ಸ್ಮಾರ್ಟ್ ಬೇಲಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಈ ಹಿಂದೆ ಧುಬ್ರಿ ವಲಯದಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾದ ಬೋಲ್ಡ್ ಕ್ವಿಟ್ ಯೋಜನೆಯು ನದಿ ತೀರದ ಗಡಿಗಳನ್ನು ತಂತ್ರಜ್ಞಾನದ ಮೂಲಕ ಯಶಸ್ವಿಯಾಗಿ ಕಾವಲು ಕಾಯಲು ಸಹಾಯ ಮಾಡಿದೆ. ಇದೇ ಮಾದರಿಯನ್ನು ಈಗ ಇತರ ಸೂಕ್ಷ್ಮ ಗಡಿ ಭಾಗಗಳಿಗೂ ವಿಸ್ತರಿಸಲಾಗುತ್ತಿದೆ.



ಸ್ಮಾರ್ಟ್ ಬಾರ್ಡರ್ ಮಿಷನ್: ಪಾಕ್-ಬಾಂಗ್ಲಾ ಗಡಿಗೆ ರಡಾರ್, ಡ್ರೋನ್, ಲೇಸರ್ ಕಣ್ಗಾವಲು

ಏನಿದು ಸ್ಮಾರ್ಟ್ ಬಾರ್ಡರ್ ಯೋಜನೆ ?

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಇತ್ತೀಚಿನ ಪ್ರಕಟಣೆಯ ಪ್ರಕಾರ, ಭಾರತ ಸರ್ಕಾರವು ಮುಂದಿನ ವರ್ಷ ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಗಡಿಗಳಲ್ಲಿ ಸ್ಮಾರ್ಟ್ ಬಾರ್ಡರ್ ಯೋಜನೆಯನ್ನು ಪ್ರಾರಂಭಿಸಲಿದೆ. ಈ ಯೋಜನೆಯು ಪ್ರಸ್ತುತ ಇರುವ ಸಮಗ್ರ ಸಂಯೋಜಿತ ಗಡಿ ನಿರ್ವಹಣಾ ವ್ಯವಸ್ಥೆಯನ್ನು (ಸಿಐಬಿಎಂಎಸ್) ಮತ್ತಷ್ಟು ಬಲಪಡಿಸಲಿದೆ. ಇದು ಕೇವಲ ಭೌತಿಕ ಬೇಲಿಗಳಿಗೆ ಸೀಮಿತವಾಗಿರದೆ, ತಂತ್ರಜ್ಞಾನ ಮತ್ತು ಮಾನವ ಸಂಪನ್ಮೂಲವನ್ನು ಸಂಯೋಜಿಸುವ ಒಂದು ಅತ್ಯಾಧುನಿಕ ಗಡಿ ನಿರ್ವಹಣಾ ವ್ಯವಸ್ಥೆಯಾಗಿದೆ. ಈ ಯೋಜನೆಯಲ್ಲಿ ಗಡಿಯಲ್ಲಿ ನಿರಂತರ ನಿಗಾ ವಹಿಸಲು ಥರ್ಮಲ್ ಇಮೇಜರ್‌ಗಳು, ಇನ್‌ಫ್ರಾರೆಡ್ ಮತ್ತು ಲೇಸರ್ ಆಧಾರಿತ ಅಲಾರಮ್‌ಗಳು, ನದಿ ಪ್ರದೇಶಗಳಿಗಾಗಿ ಸೋನಾರ್ ವ್ಯವಸ್ಥೆಗಳು, ಫೈಬರ್-ಆಪ್ಟಿಕ್ ಸೆನ್ಸರ್‌ಗಳು ಮತ್ತು ಹೆಚ್ಚಿನ ರೆಸಲ್ಯೂಶನ್ ಹೊಂದಿರುವ ಕ್ಯಾಮೆರಾಗಳನ್ನು ಬಳಸಲಾಗುತ್ತದೆ. ಇವೆಲ್ಲವೂ ರಿಯಲ್-ಟೈಮ್(ನೈಜ-ಸಮಯದ) ಡೇಟಾವನ್ನು ನಿಯಂತ್ರಣ ಕೊಠಡಿಗಳಿಗೆ ರವಾನಿಸುತ್ತವೆ, ಇದರಿಂದಾಗಿ ಯಾವುದೇ ತುರ್ತು ಸಂದರ್ಭ ಎದುರಾದರೂ ಬಿಎಸ್‌ಎಫ್ ಪಡೆಗಳು ತಕ್ಷಣವೇ ಕಾರ್ಯಪ್ರವೃತ್ತರಾಗಲು ಸಾಧ್ಯವಾಗುತ್ತದೆ.

ಯೋಜನೆಯ ಸಾಧಕ-ಬಾಧಕಗಳು ಮತ್ತು ಸವಾಲುಗಳು

ರಕ್ಷಣಾ ತಜ್ಞರ ಪ್ರಕಾರ, ಈ ಯೋಜನೆಯು ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಒಂದು ದೊಡ್ಡ ಶಕ್ತಿಯಾಗಿ ಮೂಡಿಬರಲಿದೆ. ಹಗಲು-ರಾತ್ರಿ ಎನ್ನದೆ ಕಠಿಣ ಪರಿಸ್ಥಿತಿಗಳಲ್ಲಿ ಕಾವಲು ಕಾಯುವ ಸೈನಿಕರ ಮೇಲಿನ ಒತ್ತಡವನ್ನು ತಂತ್ರಜ್ಞಾನವು ಕಡಿಮೆ ಮಾಡುತ್ತದೆ. ಆದರೆ, ಮನೋಹರ್ ಪರಿಕ್ಕರ್ ರಕ್ಷಣಾ ಅಧ್ಯಯನ ಮತ್ತು ವಿಶ್ಲೇಷಣಾ ಸಂಸ್ಥೆಯಂತಹ(ಎಂಪಿ-ಐಡಿಎಸ್‌ಎ) ಸ್ವಾಯತ್ತ ಸಂಸ್ಥೆಗಳು ಕೆಲವು ಎಚ್ಚರಿಕೆಗಳನ್ನು ನೀಡಿವೆ:

1. **ಹವಾಮಾನದ ಸವಾಲು:** ವಿಪರೀತ ಮಳೆ, ದಟ್ಟವಾದ ಮಂಜು ಮತ್ತು ತೀವ್ರ ಹವಾಮಾನ ವೈಪರೀತ್ಯದ ಸಮಯದಲ್ಲಿ ತಾಂತ್ರಿಕ ಉಪಕರಣಗಳು ಮತ್ತು ಸೆನ್ಸರ್‌ಗಳು ಸರಿಯಾಗಿ ಕೆಲಸ ಮಾಡದಿರುವ ಸಾಧ್ಯತೆ ಇರುತ್ತದೆ.
2. **ಸುಳ್ಳು ಎಚ್ಚರಿಕೆಗಳು:** ಅಮೆರಿಕದಂತಹ ಮುಂದುವರಿದ ದೇಶಗಳು ಇಂತಹ ಯೋಜನೆಗಳನ್ನು ಜಾರಿಗೊಳಿಸಿದಾಗ ಫಾಲ್ಸ್ ಅಲಾರಂ(ಸುಳ್ಳು ಎಚ್ಚರಿಕೆಗಳು) ಸಮಸ್ಯೆಗಳನ್ನು ಎದುರಿಸಿದ್ದವು. ಕಾಡು ಪ್ರಾಣಿಗಳ ಚಲನವಲನದಿಂದಲೂ ಸೆನ್ಸರ್‌ಗಳು ಸದ್ದು ಮಾಡಬಹುದು.
3. **ರಾಜತಾಂತ್ರಿಕ ಸಂಘರ್ಷ:** ಅಂತಾರಾಷ್ಟ್ರೀಯ ಗಡಿಯ 150 ಯಾರ್ಡ್‌ಗಳ ಒಳಗೆ ಯಾವುದೇ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಬಾಂಗ್ಲಾದೇಶವು ಹಲವು ಬಾರಿ ಆಕ್ಷೇಪ ವ್ಯಕ್ತಪಡಿಸಿದೆ. ಭಾರತವು ತಂತಿ ಬೇಲಿಗಳನ್ನು ರಕ್ಷಣಾ ಮೂಲಸೌಕರ್ಯ ಎಂದು ಪರಿಗಣಿಸದಿದ್ದರೂ, ನೆರೆಹೊರೆಯ ದೇಶಗಳ ಭಿನ್ನ ವ್ಯಾಖ್ಯಾನಗಳು ರಾಜತಾಂತ್ರಿಕ ಘರ್ಷಣೆಗೆ ಕಾರಣವಾಗಬಹುದು.

ಯೋಜನೆಯ ಯಶಸ್ಸಿಗೆ ಈ ಅಂಶಗಳೂ ಅಗತ್ಯ

ಭಾರತದ ಸ್ಮಾರ್ಟ್ ಬಾರ್ಡರ್ ಯೋಜನೆಯು ದೇಶದ ಗಡಿ ರಕ್ಷಣೆಯನ್ನು ಅತ್ಯಾಧುನಿಕಗೊಳಿಸುವ ಮಹತ್ವಾಕಾಂಕ್ಷಿ ಹೆಜ್ಜೆಯಾಗಿದೆ. ಆದರೆ, ಗೃಹ ಸಚಿವರು ಹೇಳಿರುವಂತೆ ಗಡಿಯನ್ನು ಸಂಪೂರ್ಣವಾಗಿ ಅಭೇದ್ಯ ಮಾಡುವುದು ಕೇವಲ ತಂತ್ರಜ್ಞಾನದಿಂದ ಮಾತ್ರ ಸಾಧ್ಯವಿಲ್ಲ. ಭೂಪ್ರದೇಶದ ಸವಾಲುಗಳು, ನಿರ್ವಹಣಾ ವೆಚ್ಚ, ವಿವಿಧ ಏಜೆನ್ಸಿಗಳ ನಡುವಿನ ಸಮನ್ವಯ ಮತ್ತು ನೆರೆಹೊರೆಯ ದೇಶಗಳೊಂದಿಗಿನ ರಾಜತಾಂತ್ರಿಕ ಬಾಂಧವ್ಯಗಳನ್ನು ಸಮರ್ಥವಾಗಿ ನಿಭಾಯಿಸುವುದರ ಮೇಲೆ ಈ ಯೋಜನೆಯ ನೈಜ ಯಶಸ್ಸು ನಿರ್ಧಾರವಾಗುತ್ತದೆ.

ಇದು ಹೊಸ ಕಲ್ಪನೆಯೇ?

ಸ್ಮಾರ್ಟ್ ಬಾರ್ಡರ್ ಪರಿಕಲ್ಪನೆಯು ಸಂಪೂರ್ಣವಾಗಿ ಹೊಸದೇನಲ್ಲ, ಕಳೆದ ಹಲವು ವರ್ಷಗಳಿಂದ ಈ ಕುರಿತು ಚರ್ಚೆಗಳು ಮತ್ತು ಸಿದ್ಧತೆಗಳು ನಡೆಯುತ್ತಿವೆ. 2019ರ ಹೊತ್ತಿಗೆ, ಸರ್ಕಾರವು ಸುಮಾರು 71 ಕಿಮೀ ಉದ್ದದ ಎರಡು ಪ್ರಾಯೋಗಿಕ ಸಿಐಬಿಎಂಎಸ್ ಯೋಜನೆಗಳನ್ನು ಪೂರ್ಣಗೊಳಿಸಿತ್ತು. ಇದರಲ್ಲಿ 10 ಕಿಮೀ ಪಾಕಿಸ್ತಾನ ಗಡಿಯಲ್ಲಿ ಮತ್ತು 61 ಕಿಮೀ ಬಾಂಗ್ಲಾದೇಶ ಗಡಿಯಲ್ಲಿ ಅನುಷ್ಠಾನಗೊಳಿಸಲಾಗಿತ್ತು. ಭೌತಿಕ ಬೇಲಿ ನಿರ್ಮಿಸಲು ಸಾಧ್ಯವಿಲ್ಲದ ಸುಮಾರು 1,955 ಕಿಮೀ ಉದ್ದದ ಗಡಿ ಭಾಗವನ್ನು ಈ ಯೋಜನೆಯ ಮುಂದಿನ ಹಂತಗಳಲ್ಲಿ ಸೇರಿಸಿಕೊಳ್ಳಲು ಯೋಜಿಸಲಾಗಿದೆ. ಡಿಸೆಂಬರ್ 2023ರಲ್ಲಿ, ಗೃಹ ಸಚಿವರು ಗಡಿಯ ಕಠಿಣ ಭೂಪ್ರದೇಶಗಳಲ್ಲಿ ಬಾಕಿ ಉಳಿದಿರುವ 60 ಕಿಮೀಗಳಷ್ಟು ಅಂತರವನ್ನು ಭರ್ತಿ ಮಾಡುವ ಕೆಲಸ ನಡೆಯುತ್ತಿದೆ ಎಂದು ತಿಳಿಸಿದ್ದರು. ಆದ್ದರಿಂದ, ಸದ್ಯದ ಪ್ರಕಟಣೆಯು ಕಳೆದ ಒಂದು ದಶಕದಿಂದ ನಡೆಯುತ್ತಿರುವ ಗಡಿ ಆಧುನೀಕರಣ ಪ್ರಕ್ರಿಯೆಯ ಒಂದು ದೊಡ್ಡ ಮುಂದುವರಿದ ಭಾಗವಾಗಿದೆ.



ಕಿರುಸುದ್ದಿ

ತೈಲ ದರ ಹೆಚ್ಚಳ

• **ಹೊಸದಿಲ್ಲಿ:** ಜಾಗತಿಕ ತೈಲ ಬೆಲೆ ಏರಿಕೆಯ ನಡುವೆ ಶನಿವಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಪ್ರತಿ ಲೀಟರ್‌ಗೆ 87ರಿಂದ 91 ಪೈಸೆಗಳಷ್ಟು ಹೆಚ್ಚಾಗಿದ್ದು, ಕಳೆದ 10 ದಿನಗಳಿಗಿಂತಲೂ ಕಡಿಮೆ ಅವಧಿಯಲ್ಲಿ ಒಟ್ಟು ದರ ಏರಿಕೆ ಸುಮಾರು 5 ರೂ.ಗಳಿಗೆ ತಲುಪಿದೆ. ಸಿಎನ್‌ಜಿ ಬೆಲೆಯೂ ಪ್ರತಿ ಕೆಜಿಗೆ 1 ರೂ. ಹೆಚ್ಚಾಗಿದೆ. ಇದರೊಂದಿಗೆ ಒಟ್ಟು ಸಿಎನ್‌ಜಿ ದರ ಏರಿಕೆ 4 ರೂ. ಆಗಿದ್ದು, ದಿಲ್ಲಿಯಲ್ಲಿ ಪ್ರಸ್ತುತ ಸಿಎನ್‌ಜಿ ಬೆಲೆ ಪ್ರತಿ ಕೆಜಿಗೆ 81.09 ರೂ. ಆದಂತಾಗಿದೆ.

ತ.ನಾಡಿನಲ್ಲಿ ಬಾಲಕಿಯ ಮೇಲೆ ದೌರ್ಜನ್ಯ, ಹತ್ಯೆ

• **ಕೊಯಮತ್ತೂರು:** ನಗರದಲ್ಲಿ ಹತ್ತು ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿ ಕೊಲೆ ಮಾಡಲಾಗಿದೆ. ಈ ಸಂಬಂಧ ಸಿಎಂ ವಿಜಯ್, ಕಠಿಣ ಕಾನೂನು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಕೊಲೆ ಮತ್ತು ಲೈಂಗಿಕ ದೌರ್ಜನ್ಯದ ಆರೋಪದ ಮೇಲೆ 33 ವರ್ಷದ ಕೆ.ಕಾರ್ತಿ ಎಂಬುವವನನ್ನು ಪೋಕ್ಸೊ ಕಾಯ್ದೆಯಲ್ಲಿ ಪೊಲೀಸರು ಬಂಧಿಸಿದ್ದಾರೆ. ಅಪರಾಧ ಸಂಚಿಗೆ ಸಹಕರಿಸಿದ ಆರೋಪದ ಮೇಲೆ ಆತನ ಸಹಚರ ಆರ್. ಮೋಹನ್‌ನನ್ನು ಬಂಧಿಸಲಾಗಿದೆ.

ಬಿಸಿಗಾಳಿಗೆ ಆಂಧ್ರದಲ್ಲಿ ಒಂದೇ ದಿನ 21 ಸಾವು

• **ಅಮರಾವತಿ:** ಆಂಧ್ರಪ್ರದೇಶದಲ್ಲಿ ಮುಂದುವರಿದಿರುವ ತೀವ್ರ ಬಿಸಿಗಾಳಿ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ್ದು, ಹೆಚ್ಚಿದ ತಾಪಮಾನಕ್ಕೆ ಒಂದೇ ದಿನದಲ್ಲಿ 21 ಮಂದಿ ಮೃತಪಟ್ಟಿರುವ ಘಟನೆ ಆತಂಕ ಮೂಡಿಸಿದೆ. ಇನ್ನು ಆಂಧ್ರದ ನೆರೆ ರಾಜ್ಯ ತೆಲಂಗಾಣದಲ್ಲಿ ಬಿಸಿಲಿನ ತಾಪಕ್ಕೆ 16 ಜನ ಮೃತಪಟ್ಟಿದ್ದಾರೆ.

ಆಂಧ್ರದ ವಿಜಯವಾಡ ಜಿಲ್ಲೆಯಲ್ಲಿ ಮಾತ್ರವೇ 10 ಮಂದಿ ಬಲಿಯಾಗಿದ್ದು, ಇವರಲ್ಲಿ ಕೆಲವರು ರಸ್ತೆಬದಿಯಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಮೃತಪಟ್ಟಿದ್ದಾರೆ. ಇದಲ್ಲದೆ, ಎಲ್ಲೂರು, ಪಶ್ಚಿಮ ಗೋದಾವರಿ, ಕಾಕಿನಾಡ, ಪಲ್ನಾಡು ಹಾಗೂ ಅನಕಾಪಲ್ಲಿ ಜಿಲ್ಲೆಗಳಲ್ಲೂ ಬಿಸಿಲಿನ ಹೊಡೆತಕ್ಕೆ ಕೆಲವರು ಜೀವ ಕಳೆದುಕೊಂಡಿದ್ದಾರೆ. ಮೃತರಲ್ಲಿ ಕಾರ್ಮಿಕರು, ವೃದ್ಧರು, ಭಿಕ್ಷುಕರು ಹಾಗೂ ಅಪರಿಚಿತರು ಸೇರಿದ್ದಾರೆ. ಕೆಲವು ಪ್ರದೇಶಗಳಲ್ಲಿ ತಾಪಮಾನ 45 ರಿಂದ 46 ಡಿಗ್ರಿ ಸೆಲ್ಸಿಯಸ್ ತಲುಪಿರುವುದರಿಂದ ಜನರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ.

ತೆಲಂಗಾಣದಲ್ಲಿ 16 ಸಾವು:

ತೀವ್ರ ಬಿಸಿಗಾಳಿಯಿಂದ ತೆಲಂಗಾಣದ ಏಳು ಜಿಲ್ಲೆಗಳಲ್ಲಿ 16 ಮಂದಿ ಮೃತಪಟ್ಟಿದ್ದಾರೆ ಎಂದು ಸಚಿವ ಪೊಂಗುಲೇಟಿ ಶ್ರೀನಿವಾಸ ರೆಡ್ಡಿ ಶನಿವಾರ ತಿಳಿಸಿದ್ದಾರೆ. ಮೃತರ ಕುಟುಂಬಸ್ಥರಿಗೆ ತಲಾ 4 ಲಕ್ಷ ರೂ. ಪರಿಹಾರ ಧನ ನೀಡಲಾಗುರುವುದು ಎಂದು ಅವರು ತಿಳಿಸಿದ್ದಾರೆ.

ಅಗತ್ಯವಿಲ್ಲದೆ ಮಧ್ಯಾಹ್ನ ಹೊರಗೆ ಹೋಗಬಾರದು, ಹೆಚ್ಚು ನೀರು ಸೇವಿಸಬೇಕು ಹಾಗೂ ಬಿಸಿಲಿನಿಂದ ಎಚ್ಚರಿಕೆ ವಹಿಸಬೇಕು ಎಂದು ಜನರಿಗೆ ಆರೋಗ್ಯ ಇಲಾಖೆ ಸಲಹೆ ನೀಡಿದೆ.

ಚೀನಾದ ಗಣಿ ಸ್ಫೋಟ, 90 ಕಾರ್ಮಿಕರ ಸಾವು

• **ಬೀಜಿಂಗ್:** ಉತ್ತರ ಚೀನಾದ ಕಲ್ಲಿದ್ದಲು ಗಣಿಯೊಂದರಲ್ಲಿ ಶುಕ್ರವಾರ ಸಂಜೆ ಸಂಭವಿಸಿದ ಅನಿಲ ಸ್ಫೋಟದಲ್ಲಿ 90 ಗಣಿ ಕಾರ್ಮಿಕರು ಮೃತಪಟ್ಟಿದ್ದಾರೆ ಮತ್ತು 201 ಜನರನ್ನು ರಕ್ಷಿಸಲಾಗಿದೆ ಎಂದು ಅಲ್ಲಿನ ಸರ್ಕಾರಿ ಮೂಲಗಳು ವರದಿ ಮಾಡಿವೆ.

ಶಾಂಕ್ಸಿ ಪ್ರಾಂತ್ಯದ ಚಿನ್ಯುವಾನ್ ಕೌಂಟಿಯ ಲಿಯುಶೆನ್ಯು ಕಲ್ಲಿದ್ದಲು ಗಣಿಯಲ್ಲಿ ಈ ಅಪಘಾತ ಸಂಭವಿಸಿದ್ದು, ರಕ್ಷಣಾ



ಕಾರ್ಯಾಚರಣೆ ಮುಂದುವರಿದಿದೆ. ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಸಮಗ್ರ ರಕ್ಷಣಾ ಕಾರ್ಯಾಚರಣೆ, ಗಾಯಾಳುಗಳಿಗೆ ಚಿಕಿತ್ಸೆ ಮತ್ತು ಕಾನೂನುಬದ್ಧ ಹೊಣೆಗಾರಿಕೆಯನ್ನು ಗುರುತಿಸಲು ಘಟನೆಯ ಕುರಿತು ಸಮಗ್ರ ತನಿಖೆಗೆ ಆದೇಶ ಹೊರಡಿಸಿದ್ದಾರೆ. ಉಪ ಪ್ರಧಾನಿ ಜಾಂಗ್ ಗುವೊಚಿಂಗ್, ರಕ್ಷಣಾ ಕಾರ್ಯಗಳ ಮೇಲ್ವಿಚಾರಣೆ ವಹಿಸಿದ್ದು, ಅಪಘಾತದ ಸ್ಥಳಕ್ಕೆ ತಂಡವೊಂದರ ಜತೆ ಧಾವಿಸಿದ್ದಾರೆ.

ಸುರಕ್ಷತಾ ಕ್ರಮಗಳು: ಭವಿಷ್ಯದಲ್ಲಿ ಇಂತಹ ದುರ್ಘಟನೆಗಳನ್ನು ತಡೆಗಟ್ಟಲು ದೇಶಾದ್ಯಂತದ ಅಧಿಕಾರಿಗಳು ಕೆಲಸದ ಸ್ಥಳದ ಸುರಕ್ಷತೆಯ ಬಗ್ಗೆ ಜಾಗರೂಕತೆ ವಹಿಸಬೇಕು ಮತ್ತು ಸಂಭಾವ್ಯ ಅಪಾಯಗಳನ್ನು ನಿವಾರಿಸಬೇಕು ಎಂದು ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಹೇಳಿದ್ದಾರೆ. ಜತೆಗೆ, ಚೀನಾದಲ್ಲಿ ಹಲವೆಡೆ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಹೀಗಾಗಿ ಜೀವ ಮತ್ತು ಆಸ್ತಿಯನ್ನು ರಕ್ಷಿಸಲು ತುರ್ತು ಸಿದ್ಧತೆ ಹಾಗೂ ದೃಢವಾದ ಪ್ರವಾಹ ನಿಯಂತ್ರಣ ಮತ್ತು ವಿಪತ್ತು ಪರಿಹಾರ ಕ್ರಮಗಳಿಗೆ ಅವರು ಕರೆ ನೀಡಿದ್ದಾರೆ

ಕೈ ಮುಖಂಡ ಅಜಯ್ ರೈ ವಿರುದ್ಧ ಬಿಜೆಪಿ ಕಿಡಿ

• **ಲಖನೌ:** ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಜಯ್ ರೈ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅವಹೇಳನಕಾರಿ ಪದಗಳನ್ನು ಬಳಸಿರುವುದಾಗಿ ಹೇಳಲಾದ ವಿಡಿಯೋ ಒಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಇದಕ್ಕೆ ಸಂಬಂಧಿಸಿ ರಾಜ್ಯ ರಾಜಕೀಯದಲ್ಲಿ ತೀವ್ರ ವಾಗ್ವಾದ ಆರಂಭವಾಗಿದೆ.

ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, 'ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಮಾಡಿದ ಅಸಭ್ಯ, ಸಂಸತ್ತೀಯ ಮೌಲ್ಯಗಳಿಗೆ ವಿರುದ್ಧವಾದ ಹಾಗೂ ಕ್ಷಮಿಸಲಾಗದ ಹೇಳಿಕೆ ಕಾಂಗ್ರೆಸ್‌ನ ಆಳವಾದ ರಾಜಕೀಯ ಸಂಸ್ಕೃತಿಯನ್ನು ಬಹಿರಂಗಪಡಿಸಿದೆ' ಎಂದು ಟೀಕಿಸಿದ್ದಾರೆ.

ಮೋದಿ ವಿರುದ್ಧ ಅವಹೇಳನಕಾರಿ ಹೇಳಿಕೆ ಆರೋಪ

ಉತ್ತರ ಪ್ರದೇಶ ಬಿಜೆಪಿ ಅಧ್ಯಕ್ಷ ಹಾಗೂ ಕೇಂದ್ರ ಸಚಿವ ಪಂಕಜ್ ಚೌಧರಿ ಕೂಡ ಅಜಯ್ ರೈ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. 'ಇದು ಕೇವಲ ಪ್ರಧಾನಿಯವರ ವಿರುದ್ಧದ ಅವಮಾನವಲ್ಲ, 140 ಕೋಟಿ ಭಾರತೀಯರ ಭಾವನೆಗಳಿಗೆ ಮಾಡಿದ ಅವಮಾನ' ಎಂದಿದ್ದಾರೆ.

ಆದರೆ, ಈ ಬಗ್ಗೆ ಸ್ಪಷ್ಟನೆ ನೀಡಿರುವ ಅಜಯ್ ರೈ, ಬಿಜೆಪಿಯೇ ಎಐ ಬಳಸಿ ಈ ವಿಡಿಯೋ ಸೃಷ್ಟಿಸಿದೆ ಎಂದಿದ್ದಾರೆ. ಜತೆಗೆ ದೂರು ದಾಖಲಿಸುವುದಾಗಿ ಹೇಳಿದ್ದಾರೆ. ಇದಕ್ಕೂ ಮುನ್ನವೇ ಬಿಜೆಪಿ ಕಾರ್ಯಕರ್ತರೊಬ್ಬರು ಅಜಯ್ ರೈ ವಿರುದ್ಧ ದೂರು ದಾಖಲಿಸಿದ್ದಾರೆ.

ಕೇರಳ ಸಿಎಸ್ ನೇಮಕ; ವಿಪಕ್ಷ ಟೀಕೆಗೆ ಗುರಿ

• **ತಿರುವನಂತಪುರಂ:** ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರ ಕಾರ್ಯದರ್ಶಿಯಾಗಿ ಮುಖ್ಯ ಚುನಾವಣಾಧಿಕಾರಿ ಡಾ.ರತನ್ ಯು. ಕೇಲ್ಕರ್‌ರನ್ನು ನೇಮಕ ಮಾಡಿರುವುದನ್ನು ವಿರೋಧಿಸಿ ಬಿಜೆಪಿ ಮತ್ತು ಸಿಪಿಐ(ಎಂ) ಶನಿವಾರ ಕೇರಳ ಸರ್ಕಾರವನ್ನು ಟೀಕಿಸಿವೆ.

ಇತರ ರಾಜ್ಯಗಳಲ್ಲಿನ ಇಂತಹದೇ ನೇಮಕಾತಿಗಳ ಕುರಿತು ಕಾಂಗ್ರೆಸ್ ಹೊಂದಿರುವ ರಾಷ್ಟ್ರೀಯ ನಿಲುವಿಗೆ ಈ ಕ್ರಮ ವಿರುದ್ಧವಾಗಿದೆ ಎಂದು ವಿಪಕ್ಷಗಳು ಆರೋಪಿಸಿವೆ. 2003ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಕೇಲ್ಕರ್, ಇತ್ತೀಚೆಗೆ ರಾಜ್ಯದ ವಿಧಾನಸಭಾ ಚುನಾವಣಾ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸಿದ್ದರು. ಪಶ್ಚಿಮ ಬಂಗಾಳದಲ್ಲಿ ನಡೆದ ಇಂತಹದ್ದೇ ಬೆಳವಣಿಗೆಯನ್ನು ಕಾಂಗ್ರೆಸ್ ಈ ಹಿಂದೆ ಗಂಭೀರ ವಿಷಯ ಎಂದು ಟೀಕಿಸಿದ್ದನ್ನು ಉಲ್ಲೇಖಿಸಿದ ಬಿಜೆಪಿ ನಾಯಕ ಕೆ. ಸುರೇಂದ್ರನ್, ಕಾಂಗ್ರೆಸ್ ಪಕ್ಷದ ದ್ವಿಮುಖ ನಿಲುವನ್ನು ಖಂಡಿಸಿದರು.

ಯಾವುದೇ ಶಕ್ತಿಗೂ ಈ ಸಾಧನೆಯನ್ನು ತಡೆಯಲಾಗದು: ರಾಜನಾಥ್ ಸಿಂಗ್

ವಿಶ್ವದ ಬೃಹತ್ ಶಸ್ತ್ರಾಸ್ತ್ರ ರಫ್ತುದಾರ ಭಾರತ

• **ಶಿರಡಿ(ಮಹಾರಾಷ್ಟ್ರ):** ಒಂದು ಕಾಲಘಟ್ಟದಲ್ಲಿ ಶಸ್ತ್ರಾಸ್ತ್ರಗಳ ಆಮದುದಾರ ರಾಷ್ಟ್ರವೆಂದು ಪರಿಗಣಿತ ಭಾರತವು, ಮುಂದಿನ 25-30 ವರ್ಷಗಳಲ್ಲಿ ಜಗತ್ತಿನ ಬೃಹತ್ ಶಸ್ತ್ರಾಸ್ತ್ರ ರಫ್ತುದಾರ ರಾಷ್ಟ್ರವಾಗಿ ಹಂಗೊಳಿಸಲಿದೆ ಮತ್ತು ಯಾವುದೇ ಶಕ್ತಿಗೂ ಭಾರತದ ಈ ಸಾಧನೆಯನ್ನು ತಡೆಯಲಾಗದು ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಗುಡುಗಿದ್ದಾರೆ. ತನ್ನ ಶಸ್ತ್ರಾಸ್ತ್ರಗಳನ್ನು ಸ್ವಯಂ ತಯಾರಿಸಬಲ್ಲ ರಾಷ್ಟ್ರವು ತನ್ನ ಭವಿಷ್ಯವನ್ನು ಕೂಡ ಸ್ವಯಂ ಬರೆಯಬಲ್ಲುದು ಎಂದು ಸಚಿವರು ಅರ್ಥಗರ್ಭಿತವಾಗಿ ಹೇಳಿದ್ದಾರೆ.

ರಕ್ಷಣಾ ಉತ್ಪಾದನಾ ರಂಗದಲ್ಲಿ ಖಾಸಗಿ ರಂಗದ ಪಾತ್ರ ಕೇವಲ ನಟ್-ಬೋಲ್ಟ್‌ಗಳ ಪೂರೈಕೆಗೆ ಸೀಮಿತವಲ್ಲ, ಇವು ಕೂಡ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಉತ್ಪಾದನೆಗೆ ಹೆಸರುವಾಸಿಯಾಗಿವೆ. ಕೆಲವು ವರ್ಷ ಹಿಂದೆ ರಕ್ಷಣಾ ಉತ್ಪಾದನಾ ರಂಗದಲ್ಲಿ ಖಾಸಗಿ ರಂಗದ ಪಾತ್ರವನ್ನು ಕಡೆಗಣಿಸಲಾಗಿತ್ತು. ಆದರೆ ಇಂದು ರಕ್ಷಣಾ ಉತ್ಪಾದನೆಯಲ್ಲಿ ಖಾಸಗಿ ಕಂಪೆನಿಗಳ ಪಾಲ್ಗೊಳ್ಳುವಿಕೆ ಶೇ. 25ರಿಂದ 30ರಷ್ಟಿದ್ದು, ಇದನ್ನು



ಶೇ.50ಕ್ಕೇರಿಸುವುದು ಸರಕಾರದ ಗುರಿಯಾಗಿದೆ ಎಂದವರು ಶಿರಡಿಯಲ್ಲಿ ಶಸ್ತ್ರಾಸ್ತ್ರ ಉತ್ಪಾದನಾ ಘಟಕ ಉದ್ಘಾಟಿಸಿದ ಬಳಿಕ ನುಡಿದರು.

ಸರ್ಕಾರದ ದೃಷ್ಟಿಕೋನ ಮತ್ತು ಖಾಸಗಿ ರಂಗದ ಆವಿಷ್ಕಾರಗಳು ಸಂಗಮಗೊಂಡಾಗ ರಾಷ್ಟ್ರವು ನವ ಶೃಂಗಗಳಿಗೆ ತಲುಪುವುದು. ಈ ನಿಟ್ಟಿನಲ್ಲಿ ಭಾರತವನ್ನು ಶಸ್ತ್ರಾಸ್ತ್ರ ತಯಾರಿ ಮತ್ತು ಆಟೋಮೇಶನ್ ಕೇಂದ್ರವಾಗಿ ರೂಪಿಸಲು ಎಲ್ಲರೂ ಒಟ್ಟಾಗಿ ಶ್ರಮಿಸಬೇಕೆಂದು ಸಚಿವರು ಕರೆ ನೀಡಿದರು. ರಕ್ಷಣಾ ಉದ್ದಿಮೆಗೆ ಸಂಬಂಧಿಸಿದಂತೆ ಭಾರತದ ಯಾನ ಸುದೀರ್ಘವಾದುದು. ಸ್ವಾತಂತ್ರ್ಯ ಮುನ್ನವೇ ಭಾರತದಲ್ಲಿ ಶಸ್ತ್ರಾಸ್ತ್ರ ಕಾರ್ಖಾನೆಗಳಿದ್ದುವು ಮತ್ತು ರಕ್ಷಣಾ ಕೈಗಾರಿಕೆಗಳು ಕೂಡ ಹಿಂದಿನಿಂದಲೇ ಇದ್ದುವು. ಸ್ವಾತಂತ್ರ್ಯನಂತರದಲ್ಲಿ ದೇಶದ ಹಿಂದಿನ ರಕ್ಷಣಾ ಸಾಮರ್ಥ್ಯ ಮತ್ತು ಆಧುನಿಕ ಅವಶ್ಯಕತೆಗಳಿಗೆ ಪರಸ್ಪರ ಹೊಂದಾಣಿಕೆಯಾಗಲಿಲ್ಲ, ಇದಕ್ಕೆ ಮೂಲಕಾರಣ, ರಕ್ಷಣಾ ಉತ್ಪಾದನಾ ರಂಗ ಕೇವಲ ಸಾರ್ವಜನಿಕ ರಂಗದ ಕಂಪೆನಿಗಳು ಮತ್ತು ಶಸ್ತ್ರಾಸ್ತ್ರ ಕಾರ್ಖಾನೆಗಳಿಗೆ ಸೀಮಿತವಾಗಿದ್ದುದು. ರಕ್ಷಣಾ ಉತ್ಪಾದನಾ ರಂಗದಲ್ಲಿ ತೊಡಗಲು ಖಾಸಗಿ ಕಂಪೆನಿಗಳಿಗೆ ಅವಕಾಶ ಇರಲಿಲ್ಲ.

> **ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ನೀತಿ ಸಂಬಂಧಿತ ಸುಧಾರಣೆಗಳು ಮತ್ತು ವಿದೇಶಿ ನೇರ ಹೂಡಿಕೆ ನಿಯಮ ಸರಳೀಕರಣಗೊಳಿಸುವ ಮುಖೇನ, ರಕ್ಷಣಾ ರಂಗದಲ್ಲಿ ಖಾಸಗಿ ಪಾಲ್ಗೊಳ್ಳುವಿಕೆ ಹೆಚ್ಚಿಸಲು ತುಂಬು ಉತ್ತೇಜ ನೀಡುತ್ತಿದೆ.**
> ■ ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಬಿಸಿಗಾಳಿಯಿಂದ ಮಕ್ಕಳು, ವೃದ್ಧರಿಗೆ ಹೆಚ್ಚು ತೊಂದರೆ: ತಜ್ಞರ ಎಚ್ಚರಿಕೆ

ಮೆದುಳು, ಕಣ್ಣಿನ ಆರೋಗ್ಯಕ್ಕೆ ಅಪಾಯ

• **ಹೊಸದಿಲ್ಲಿ:** ದೇಶದಲ್ಲಿ ಹೆಚ್ಚುತ್ತಿರುವ ಬಿಸಿಗಾಳಿ, ನರಸಂಬಂಧಿ ಮತ್ತು ಕಣ್ಣಿನ ಆರೋಗ್ಯದ ಸಮಸ್ಯೆಗಳನ್ನು ಉಂಟುಮಾಡುತ್ತಿದೆ ಎಂದು ವೈದ್ಯರು ಎಚ್ಚರಿಸಿದ್ದಾರೆ. ವಿಶೇಷವಾಗಿ ಮಕ್ಕಳು, ಹಿರಿಯ ನಾಗರಿಕರು ಮತ್ತು ಈಗಾಗಲೇ ಆರೋಗ್ಯ ಸಮಸ್ಯೆ ಹೊಂದಿರುವವರಲ್ಲಿ ಈ ತೊಂದರೆಗಳು ಕಾಣಿಸಿಕೊಳ್ಳುತ್ತಿವೆ.

ಹೆಚ್ಚಿನ ತಾಪಮಾನ, ನಿರ್ಜಲೀಕರಣ ಮತ್ತು ಸುದೀರ್ಘ ಅವಧಿಗೆ ಬಿಸಿಲಿಗೆ ಒಡ್ಡಿಕೊಳ್ಳುವುದರಿಂದ ಆಯಾಸ, ತಲೆಸುತ್ತು, ತಲೆನೋವು, ಮೈಗ್ರೇನ್ ಹಾಗೂ



ಹೀಟ್ ಸ್ಟ್ರೋಕ್‌ನಂತಹ ನರಸಂಬಂಧಿ ತೊಂದರೆಗಳು ಉಂಟಾಗಬಹುದು ಎಂದು ತಜ್ಞರು ತಿಳಿಸಿದ್ದಾರೆ. ದಿಲ್ಲಿ-ಎನ್‌ಸಿಆರ್‌ನ ಆಸ್ಪತ್ರೆಗಳಲ್ಲಿ ಇಂತಹ ಪ್ರಕರಣಗಳು ಹೆಚ್ಚುತ್ತಿವೆ. ದಿಲ್ಲಿಯ ಇಂದ್ರಪ್ರಸ್ಥ ಅಪೊಲೊ ಆಸ್ಪತ್ರೆಯ ನರವಿಜ್ಞಾನ ವಿಭಾಗದ ಹಿರಿಯ ಸಮಾಲೋಚಕ ಡಾ. ವಿನೀತ್ ಸೂರಿ, ತೀವ್ರ ತಲೆನೋವು, ತಲೆಸುತ್ತು, ಮೂರ್ಛೆ ಮತ್ತು ತೀವ್ರ ಮೈಗ್ರೇನ್‌ನಿಂದ ಬರುವ ಹೊರರೋಗಿಗಳ ಸಂಖ್ಯೆಯಲ್ಲಿ ಸುಮಾರು ಶೇ.20ರಷ್ಟು ಹೆಚ್ಚಳವಾಗಿದೆ ಎಂದಿದ್ದಾರೆ. ಅತಿಯಾದ ಶಾಖ ಮತ್ತು ನಿರ್ಜಲೀಕರಣ ಮೆದುಳಿಗೆ ರಕ್ತದ ಹರಿವನ್ನು ಕಡಿಮೆ ಮಾಡುತ್ತದೆ, ಎಲೆಕ್ಟ್ರೋಲೈಟ್ ಸಮತೋಲನವನ್ನು ಏರುಪೇರು ಮಾಡುತ್ತದೆ ಮತ್ತು ನರಮಂಡಲದ ಮೇಲೆ ಒತ್ತಡ ಉಂಟುಮಾಡುತ್ತದೆ. ನಿರಂತರ ಗೊಂದಲ, ಅಸ್ಪಷ್ಟ ಮಾತು, ಅಸಾಮಾನ್ಯ ಅರೆನಿದ್ರಾವಸ್ಥೆ, ಫಿಟ್ಸ್ ಅಥವಾ ಪ್ರಜ್ಞೆ ತಪ್ಪುವಂತಹ ಲಕ್ಷಣಗಳು ಕಂಡುಬಂದರೆ ತಕ್ಷಣ ವೈದ್ಯಕೀಯ ನೆರವು ಪಡೆಯಲು ಸಲಹೆ ನೀಡಲಾಗಿದೆ.

ಉರಿಬಿಸಿಲು ತಪ್ಪಿಸಲು ವೈದ್ಯರ ಸಲಹೆ

ಮಧ್ಯಾಹ್ನದ ಉರಿಬಿಸಿಲಿನ ಅವಧಿಯಲ್ಲಿ ಹೊರಾಂಗಣ ಚಟುವಟಿಕೆಗಳನ್ನು ತಪ್ಪಿಸಲು ವೈದ್ಯರು ಸಲಹೆ ನೀಡಿದ್ದಾರೆ. ಕನಿಷ್ಠ ಪಕ್ಷ ಹೊರಗೆ ಹೋಗುವಾಗ ಕೊಡೆ, ಯುವಿ ಕಿರಣಗಳಿಂದ ರಕ್ಷಿಸುವ ಸನ್‌ಗ್ಲಾಸ್ ಬಳಕೆ, ಕಣ್ಣಿನ ಡ್ರಾಪ್‌ಗಳ ಬಳಕೆ ಮತ್ತು ಎಲೆಕ್ಟ್ರೋಲೈಟ್ ಯುಕ್ತ ಪಾನೀಯಗಳಾದ ಎಳನೀರು, ಮಜ್ಜಿಗೆ ಮತ್ತು ಹಣ್ಣಿನ ರಸಗಳ ಸೇವನೆ, ಜತೆಗೆ ಅಗತ್ಯವಿರುವಷ್ಟು ನೀರು ಕುಡಿಯುವುದು, ಕಣ್ಣಿನ ಡ್ರಾಪ್‌ಗಳ ಬಳಕೆ ಉತ್ತಮ ಎಂದು ಹೇಳಿದ್ದಾರೆ.

ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಿ

ಸೂರ್ಯನ ಬೆಳಕು, ಬಿಸಿಗಾಳಿ, ಧೂಳು ಮತ್ತು ನಿರ್ಜಲೀಕರಣ, ಕಣ್ಣು ಒಣಗುವುದು, ಕೆಂಪಾಗುವುದು, ಉರಿ, ಕಣ್ಣು ಬೇನೆ ಮತ್ತು ಕಾರ್ನಿಯಾ ಉರಿಗೆ ಕಾರಣವಾಗುತ್ತದೆ. ಹವಾನಿಯಂತ್ರಣ ಬಳಕೆ ಮತ್ತು ಕಂಪ್ಯೂಟರ್/ಮೊಬೈಲ್ ಪರದೆಗಳನ್ನು ಹೆಚ್ಚು ನೋಡುವುದು, ಒಳಾಂಗಣದಲ್ಲೂ ಕಣ್ಣು ಒಣಗುವ(ಡ್ರೈ ಐ) ಪ್ರಕರಣಗಳನ್ನು ಹೆಚ್ಚಿಸುತ್ತದೆ ಎಂದು ದಿಲ್ಲಿಯ ಡಾ. ಆರ್.ಪಿ. ಸೆಂಟರ್ ಫಾರ್ ಆಪ್ತಾಲ್ಮಿಕ್ ಸೈನ್ಸ್‌ನ ಡಾ. ನಮ್ರತಾ ಶರ್ಮಾ ಹೇಳಿದ್ದಾರೆ.

ಹೊಸ ದಿಗಂತ
ಭಾನುವಾರ, 24 ಮೇ 2026
ಬೆಂಗಳೂರು



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	14	9	5	0	18	+0.783
ಗುಜರಾತ್ (Q)	14	9	5	0	18	+0.695
ಹೈದರಾಬಾದ್(Q)	14	9	5	0	18	+0.524
ರಾಜಸ್ಥಾನ	13	7	6	0	14	+0.083
ಪಂಜಾಬ್	13	6	6	1	13	+0.227
ಕೆಕೆಆರ್	13	6	6	1	13	+0.011
ಚೆನ್ನೈ	14	6	8	0	12	-0.345
ದಿಲ್ಲಿ	13	6	7	0	12	-0.871
ಮುಂಬೈ	13	4	9	0	8	-0.510
ಲಖನೌ	13	4	9	0	8	-0.702

ಕಿರುಸುದ್ದಿ

ಒಂದೇ ಟೆಸ್ಟ್ ಪಂದ್ಯದಲ್ಲಿ ವಿಭಿನ್ನ ಬಣ್ಣದ ಬಾಲ್?

ಮುಂಬೈ: ಒಂದೇ ಟೆಸ್ಟ್ ಪಂದ್ಯದಲ್ಲಿ ಎರಡು ಬಣ್ಣದ ಬಾಲ್‌ಗಳನ್ನು ಬಳಸಲು ಪ್ರಸ್ತಾಪಿಸಲಾಗಿದ್ದು, ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ ಈ ಬಗ್ಗೆ ಶೀಘ್ರವೇ ನಿರ್ಧಾರ ಕೈಗೊಳ್ಳಲಿದೆ. ಟೆಸ್ಟ್ ಪಂದ್ಯಗಳನ್ನು ಕೆಂಪು ಮತ್ತು ಪಿಂಕ್ ಬಾಲ್‌ಗಳಲ್ಲಿ ಆಡಿಸಲಾಗುತ್ತದೆ. ಆದರೆ ಒಂದೇ ಪಂದ್ಯದಲ್ಲಿ ಎರಡು ಬಣ್ಣಗಳ ಬಾಲ್‌ಗಳನ್ನು ಬಳಸಲಾಗಲ್ಲ. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಐಸಿಸಿ ನಿರ್ಧಾರ ಕೈಗೊಳ್ಳಲಿದ್ದು, ಒಂದೇ ಪಂದ್ಯದಲ್ಲಿ ಎರಡು ವಿಭಿನ್ನ ಬಣ್ಣದ ಬಾಲ್‌ಗಳನ್ನು ಬಳಸಲು ಚಿಂತನೆ ನಡೆಸಿದೆ. ಇಷ್ಟೇ ಅಲ್ಲದೆ, ಬಿಳಿ ಬಾಲಿನ ಪಂದ್ಯಗಳಲ್ಲೂ ಇದನ್ನು ಅಳವಡಿಕೆ ಮಾಡಲು ಯೋಚಿಸುತ್ತಿದೆ ಎಂದು ವರದಿಯಾಗಿದೆ. ಅಹಮದಾಬಾದ್‌ನಲ್ಲಿ ನಡೆಯಲಿರುವ ಐಸಿಸಿ ಸಭೆಯಲ್ಲಿ ಈ ಬಗ್ಗೆ ಚರ್ಚೆಗಳು ನಡೆಯಲಿವೆ. ಇನ್ನಷ್ಟು ಬದಲಾವಣೆಗಳಲ್ಲಿ ಮುಖ್ಯ ತರಬೇತುದಾರರಿಗೆ ಬ್ರೇಕ್ ಸಮಯದಲ್ಲಿ ಮೈದಾನ ಪ್ರವೇಶಿಸಲು ಅನುವು ಮಾಡಿಕೊಡಲಾಗುವುದು. ಆದರೆ ಕಡ್ಡಾಯವಾಗಿ ಜೆರ್ಸಿಯೊಂದಿಗೆ ಬರಬೇಕು ಎನ್ನಲಾಗಿದೆ. ಇದಲ್ಲದೆ ಟಿ20 ಕ್ರಿಕೆಟ್‌ನಲ್ಲಿ ಇನ್ನಿಂಗ್ಸ್ ಬ್ರೇಕ್ ಅನ್ನು 15 ನಿಮಿಷಕ್ಕೆ ಇಳಿಸುವ ಬಗ್ಗೆಯೂ ಹೇಳಲಾಗಿದೆ.

ಏಷ್ಯಾ ಜೂ. ಪಿಕಲ್‌ಬಾಲ್ ಓಪನ್‌ನಲ್ಲಿ 8 ಕನ್ನಡಿಗರು

ಬೆಂಗಳೂರು: ಥೈಲ್ಯಾಂಡ್‌ನಲ್ಲಿ ನಡೆಯಲಿರುವ ಏಷ್ಯಾ ಜೂನಿಯರ್ ಪಿಕಲ್‌ಬಾಲ್ ಓಪನ್ ಚಾಂಪಿಯನ್‌ಶಿಪ್‌ಗೆ ಕರ್ನಾಟಕ ರಾಜ್ಯ ಪಿಕಲ್ ಬಾಲ್ ಅಸೋಸಿಯೇಷನ್ ತನ್ನ 8 ಸದಸ್ಯರ ತಂಡ ಪ್ರಕಟಿಸಿದೆ. ಹಿತ್ವಿಕ್, ಶ್ರೇಷ್ಠಾ, ಐದಿನ್ ಫರೀದ್, ಶ್ರೀಹರಿ, ಕರ್ತಿ, ಲಿಖಿತಾ, ಖುಷಿ ಮತ್ತು ಜಶನ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಈ ಆಟಗಾರರ ಹೆಸರುಗಳನ್ನು ಆಲ್ ಇಂಡಿಯಾ ಪಿಕಲ್‌ಬಾಲ್ ಅಸೋಸಿಯೇಷನ್‌ಗೆ ಶಿಫಾರಸು ಮಾಡಲಾಗುತ್ತಿದ್ದು, ಇವರೆಲ್ಲರೂ ಮುಂದಿನ ತಿಂಗಳು ಮುಂಬೈನಲ್ಲಿ ನಡೆಯಲಿರುವ ರಾಷ್ಟ್ರೀಯ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ.

ಇಂದು ಹಾಫ್ ಮ್ಯಾರಥಾನ್

ಬೆಂಗಳೂರು: ಬೆಂಗಳೂರಿನ ಓಟಗಾರರ ಸಮೂಹ ರೋಮಾಂಚಕ ಫಿಟ್ನೆಸ್ ಸಂಭ್ರಮಕ್ಕೆ ಸಜ್ಜಾಗುತ್ತಿದೆ. ಫ್ರೀಡಂ ಬೆಂಗಳೂರು ಹಾಫ್ ಮ್ಯಾರಥಾನ್ ಭಾನುವಾರದಂದು ನಡೆಯಲಿದೆ. ಈಗಾಗಲೇ 6000ಕ್ಕೂ ಹೆಚ್ಚು ಸ್ಪರ್ಧಿಗಳು ನೋಂದಾಯಿಸಿಕೊಂಡಿದ್ದಾರೆ. ಬೆಂಗಳೂರಿನ ಐತಿಹಾಸಿಕ ನೈಸ್ ರಸ್ತೆ ಮಾರ್ಗದಲ್ಲಿ ನಡೆಯಲಿರುವ ಈ ಕ್ರೀಡಾಕೂಟವು ಅಥ್ಲೀಟ್‌ಗಳು, ಫಿಟ್ನೆಸ್ ಪ್ರೇಮಿಗಳು, ಕಾರ್ಪೊರೇಟ್ ತಂಡಗಳು, ರನ್ನಿಂಗ್ ಕ್ಲಬ್‌ಗಳು ಮತ್ತು ಮೊದಲ ಬಾರಿಗೆ ಭಾಗವಹಿಸುತ್ತಿರುವ ಓಟಗಾರರಿಗೆ ವಿಶ್ವದರ್ಜೆಯ ಅನುಭವವನ್ನು ನೀಡಲಿದೆ. ಸ್ಪರ್ಧಿಗಳು ವೃತ್ತಿಪರ ಟೈಮಿಂಗ್ ಹೊಂದಿರುವ 21.1 ಕಿ.ಮೀ ಹಾಫ್ ಮ್ಯಾರಥಾನ್, 10 ಕಿ.ಮೀ ಮತ್ತು 5 ಕಿ.ಮೀ ಓಟದ ವಿಭಾಗಗಳನ್ನು ಆಯ್ದುಕೊಳ್ಳಬಹುದಾಗಿದೆ. ಕಲ್ಕಿ ಸ್ಪೋರ್ಟ್ಸ್ ಇಂಡಿಯಾ ಪ್ರೀಮಿಯಂ ರೇಸ್-ಡೇ ಅನುಭವವನ್ನು ನೀಡುವ ಜೊತೆಗೆ ಫಿಟ್ನೆಸ್, ಸಹಿಷ್ಣುತೆ ಮತ್ತು ಸಮುದಾಯದ ಮನೋಭಾವವನ್ನು ಒಟ್ಟುಗೂಡಿಸುವ ಗುರಿಯನ್ನು ಹೊಂದಿದೆ. ಈ ಈವೆಂಟ್ ಕೇವಲ ಒಂದು ಓಟದ ಸ್ಪರ್ಧೆಯಷ್ಟೇ ಅಲ್ಲದೆ, ಸಂಪೂರ್ಣ ಫಿಟ್ನೆಸ್ ಮತ್ತು ಜೀವನಶೈಲಿಯ ಸಂಭ್ರಮಾಚರಣೆಯಾಗಿ ಮೂಡಿಬರಲಿದೆ.

ಪ್ಲೇಆಫ್‌ಗಿಲ್ಲ ಜೇಕಬ್ ಬೆಥಲ್

ಬೆಂಗಳೂರು: ಇಂಗ್ಲೆಂಡ್ ಬ್ಯಾಟರ್ ಜೇಕಬ್ ಬೆಥಲ್ ಗಾಯಗೊಂಡಿದ್ದು, ಐಪಿಎಲ್ ಪ್ಲೇಆಫ್‌ಗೆ ಲಭ್ಯವಿಲ್ಲ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಿಳಿಸಿದೆ. ಪಂಜಾಬ್ ವಿರುದ್ಧ ನಡೆದ ಪಂದ್ಯದ ವೇಳೆ ಅವರ ಬೆರಳಿಗೆ ಗಂಭೀರ ಗಾಯವಾಗಿದೆ. ಚಿಕಿತ್ಸೆಗಾಗಿ ಇಂಗ್ಲೆಂಡ್‌ಗೆ ಮರಳಿದ್ದು, ಪ್ಲೇಆಫ್‌ನಲ್ಲಿ ಭಾಗವಹಿಸುತ್ತಿಲ್ಲ ಎಂದು ಆರ್‌ಸಿಬಿ ಶನಿವಾರ ತಿಳಿಸಿದೆ. ಈ ಹಿಂದೆ ಸಾಲ್ಟ್ ಅವರೂ ಗಾಯಗೊಂಡು ಹೊರನಡೆದಿದ್ದರು. ಪ್ಲೇಆಫ್‌ನಲ್ಲಿ ಅವರು ಆಡುವ ಬಗ್ಗೆ ಇನ್ನೂ ಖಚಿತತೆ ಇಲ್ಲ. ಈ ನಡುವೆ ವೆಂಕಟೇಶ್ ಅಯ್ಯರ್ ಆರಂಭಿಕರಾಗಿ ಕಣಕ್ಕಿಳಿದಿದ್ದರು. ಮುಂದಿನ ಪಂದ್ಯದಲ್ಲೂ ಅವರೇ ಆರಂಭಿಕರಾಗಿ ಆಡುವ ಸಾಧ್ಯತೆಗಳಿವೆ.

ಇಂದು ಮುಂಬೈ-ರಾಜಸ್ಥಾನ, ದಿಲ್ಲಿ-ಕೆಕೆಆರ್ ಪಂದ್ಯ | ಲೀಗ್ ಹಂತದ ಕೊನೆಯ ದಿನ | ನಾಲ್ಕನೇ ತಂಡದ ಬಗ್ಗೆ ನಿರ್ಧಾರ

ಹೈದರಾಬಾದ್ VS ?

ಮುಂಬೈ: 19ನೇ ಆವೃತ್ತಿಯ ಐಪಿಎಲ್‌ನ ಲೀಗ್ ಹಂತದ ಕೊನೆಯ ಪಂದ್ಯಗಳಲ್ಲಿ ರಾಜಸ್ಥಾನ-ಮುಂಬೈ, ಕೆಕೆಆರ್-ದಿಲ್ಲಿ ತಂಡಗಳು ಭಾನುವಾರದಂದು ಮುಖಾಮುಖಿಯಾಗಲಿವೆ. ಪ್ಲೇಆಫ್‌ಗೇರುವ ನಾಲ್ಕನೇ ತಂಡದ ಬಗ್ಗೆ ಇನ್ನೂ ಅನಿಶ್ಚಿತತೆ ಇರುವುದು ಭಾರೀ ಕುತೂಹಲ ಮೂಡಿಸಿದೆ. ಭಾನುವಾರದ ಕೊನೆಯ ಪಂದ್ಯದಲ್ಲಿ ನಾಲ್ಕನೇ ಸ್ಥಾನದ ಬಗ್ಗೆ ನಿರ್ಧಾರವಾಗಲಿದೆ. ಮೊದಲನೇ ಸ್ಥಾನದಲ್ಲಿ ಬೆಂಗಳೂರು, ಎರಡನೇ ಸ್ಥಾನದಲ್ಲಿ ಗುಜರಾತ್, ಮೂರನೇ ಸ್ಥಾನದಲ್ಲಿ ಹೈದರಾಬಾದ್ ತಮ್ಮ ಸ್ಥಾನಗಳನ್ನು ಪಡೆದಿವೆ. ನಾಲ್ಕನೇ ಸ್ಥಾನದಲ್ಲಿ ಸದ್ಯ ರಾಜಸ್ಥಾನ ತಂಡವಿದ್ದು, ಪ್ಲೇಆಫ್‌ಗೇರಲು ಎಲ್ಲರಿಗಿಂತಲೂ ಹೆಚ್ಚಿನ ಅವಕಾಶವನ್ನು ಹೊಂದಿದೆ.

ಮಧ್ಯಾಹ್ನದ ಪಂದ್ಯದಲ್ಲಿ ರಾಜಸ್ಥಾನವು ಮುಂಬೈ ತಂಡವನ್ನು ಎದುರಿಸಲಿದೆ. ಈ ಪಂದ್ಯದಲ್ಲಿ ರಾಜಸ್ಥಾನ ಗೆದ್ದುಬಿಟ್ಟರೆ ನಾಲ್ಕನೇ ಸ್ಥಾನಕ್ಕೇರುವುದು ಖಚಿತ. ಹೀಗಾಗಿಬಿಟ್ಟರೆ ರಾತ್ರಿ ನಡೆಯುವ ದಿಲ್ಲಿ-ಕೆಕೆಆರ್ ಪಂದ್ಯ ಔಪಚಾರಿಕವಾಗಲಿದೆ. ರಾಜಸ್ಥಾನಕ್ಕೆ ತಡೆಯೊಡ್ಡುವ ಅವಕಾಶ ಮುಂಬೈಗಿದೆ. ಗೆಲುವಿನ ಅಂತ್ಯಕ್ಕೆ ಅಣಿಯಾಗುತ್ತಿರುವ ಮುಂಬೈ ಪಂದ್ಯಾವಳಿಯಲ್ಲಿ ದೊಡ್ಡ ಬದಲಾವಣೆಯನ್ನೇ ತರಬಹುದು. ಅತ್ತ ರಾಜಸ್ಥಾನ ಪಂದ್ಯವನ್ನು ಗೆದ್ದು ಪ್ಲೇಆಫ್‌ಗೇರಲು ಸಿದ್ಧವಾಗಿದೆ. ಪಂದ್ಯ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿದೆ.

ಎರಡನೇ ಪಂದ್ಯದಲ್ಲಿ ದಿಲ್ಲಿ ಹಾಗೂ ಕೆಕೆಆರ್ ಪಂದ್ಯ ನಡೆಯಲಿದೆ. ದಿಲ್ಲಿ ಅಧಿಕೃತವಾಗಿ ಹೊರಬಿದ್ದಿಲ್ಲ, ಕೆಕೆಆರ್ ವಿರುದ್ಧ ರನ್‌ರೇಟ್‌ನೊಂದಿಗೆ ಗೆದ್ದರೆ ಅವಕಾಶ ಪಡೆಯಬಹುದು. ಇತ್ತ ಕೆಕೆಆರ್ ಗೆಲುವು ಸಾಧಿಸಿದರೆ, 15 ಅಂಕಗಳೊಂದಿಗೆ ನಾಲ್ಕನೇ ಸ್ಥಾನಕ್ಕೇರುವ ಅವಕಾಶವನ್ನು ಹೊಂದಲಿದೆ. ಎರಡನೇ ಪಂದ್ಯವು ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ನಡೆಯಲಿದೆ.

ಫೈನಲ್ ಮಾರ್ಗ

- ಆರ್‌ಸಿಬಿ, ಗುಜರಾತ್ → ಕ್ವಾಲಿಫೈಯರ್ 1 → ಸೋತವರು (q1) / ವಿಜೇತರು (q1)
- ಹೈದರಾಬಾದ್, ನಾಲ್ಕನೇ ಸ್ಥಾನ → ಎಲಿಮಿನೇಟರ್ → ವಿಜೇತರು (e)
- ಸೋತವರು (q1), ವಿಜೇತರು (e) → ಕ್ವಾಲಿಫೈಯರ್ 2 → ವಿಜೇತರು (q2)
- ವಿಜೇತರು (q1), ವಿಜೇತರು (q2) → ಫೈನಲ್

ಲೆಕ್ಕಾಚಾರವೇನು?

ರಾಜಸ್ಥಾನ ಗೆದ್ದರೆ: ನಾಲ್ಕನೇ ಸ್ಥಾನದಲ್ಲಿರುವ ರಾಜಸ್ಥಾನ 14 ಅಂಕಗಳನ್ನು ಹೊಂದಿದೆ. ಹೀಗಾಗಿ ಒಂದು ವೇಳೆ ರಾಜಸ್ಥಾನ ಗೆದ್ದರೆ ಇನ್ನುಳಿದ ಮೂರೂ ತಂಡಗಳಿಗಿಂತ ಹೆಚ್ಚಿನ ಅವಕಾಶ ಪಡೆಯಲಿದೆ. ಗೆದ್ದರೆ ರಾಜಸ್ಥಾನ 16 ಅಂಕಗಳೊಂದಿಗೆ ನೇರವಾಗಿ ಪ್ಲೇಆಫ್‌ಗೇರುತ್ತದೆ.
ರಾಜಸ್ಥಾನ ಸೋತರೆ: ಒಂದು ವೇಳೆ ರಾಜಸ್ಥಾನ ಪಂದ್ಯವನ್ನು ಸೋತರೆ ದಿಲ್ಲಿ, ಕೆಕೆಆರ್ ಪಂದ್ಯವೂ ನಿರ್ಣಾಯಕ ಪಾತ್ರ ವಹಿಸುತ್ತದೆ. ರಾಜಸ್ಥಾನ 14 ಅಂಕಗಳೊಂದಿಗೆ ಅಭಿಯಾನ ಮುಗಿಸುತ್ತದೆ. ಒಂದು ವೇಳೆ ಲಖನೌ ವಿರುದ್ಧ ಪಂಜಾಬ್ ಗೆದ್ದರೆ, ಐದನೇ ಸ್ಥಾನಕ್ಕೆ ಇಳಿಯುವ ರಾಜಸ್ಥಾನ ಹೊರಬೀಳುತ್ತದೆ. ಕೆಕೆಆರ್ ಕೂಡ 15 ಅಂಕಗಳನ್ನು ಗಳಿಸಬಹುದು. ಹಾಗಾಗಿ ಪಂಜಾಬ್ ತಂಡಕ್ಕಿಂತ ಹೆಚ್ಚಿನ ರನ್‌ರೇಟ್ ಹೊಂದುವುದು ಅನಿವಾರ್ಯ.
ರಾಜಸ್ಥಾನ, ಕೆಕೆಆರ್ ಸೋತರೆ?: ಕೆಕೆಆರ್, ಪಂಜಾಬ್ ಹಾಗೂ ರಾಜಸ್ಥಾನ ಸೋತರೆ, ಅಂಕಪಟ್ಟಿಯಲ್ಲಿ 14 ಅಂಕ ಗಳಿಸುವವರೆ ನಾಲ್ಕನೇ ಸ್ಥಾನಕ್ಕೇರುತ್ತಾರೆ. ಹಾಗಾದಲ್ಲಿ ದಿಲ್ಲಿಗೊಂದು ಅವಕಾಶ ಹುಟ್ಟುತ್ತದೆ. ಒಂದು ವೇಳೆ ಸದ್ಯ ರಾಜಸ್ಥಾನ ದಿಲ್ಲಿಗಿಂತಲೂ ಹೆಚ್ಚಿನ ರನ್‌ರೇಟ್ ಹೊಂದಿದ್ದು ದಿಲ್ಲಿ ಹೆಚ್ಚಿನ ರನ್‌ರೇಟ್‌ನಿಂದ ಗೆದ್ದರೆ ಅವಕಾಶ ಪಡೆಯಬಹುದು.
ಹೈದರಾಬಾದ್‌ನೊಂದಿಗೆ ಯಾರು? : ಮೂರನೇ ಸ್ಥಾನದಲ್ಲಿರುವ ಹೈದರಾಬಾದ್ ನಾಲ್ಕನೇ ಸ್ಥಾನ ಪಡೆಯುವ ತಂಡವನ್ನು ಎಲಿಮಿನೇಟರ್ ಪಂದ್ಯದಲ್ಲಿ ಎದುರಿಸಲಿದೆ. ಸದ್ಯ ನಾಲ್ಕನೇ ಸ್ಥಾನಕ್ಕೇರುವ ಅವಕಾಶವನ್ನು ರಾಜಸ್ಥಾನ, ಪಂಜಾಬ್, ಕೆಕೆಆರ್ ಮತ್ತು ದಿಲ್ಲಿ ತಂಡಗಳು ಹೊಂದಿವೆ. ಐಪಿಎಲ್ ನಿಯಮದ ಪ್ರಕಾರ ಎಲಿಮಿನೇಟರ್ ಪಂದ್ಯದಲ್ಲಿ ಮೂರು ಮತ್ತು ನಾಲ್ಕನೇ ಸ್ಥಾನದ ತಂಡಗಳು ಮುಖಾಮುಖಿಯಾಗುತ್ತವೆ.

ಲಖನೌ 196/6

ಲಖನೌ: ಜೋಶ್ ಇಂಗ್ಲಿಸ್(72), ಆಯುಷ್ ಬದೋನಿ(43) ಕಟ್ಟಿದ ಇನ್ನಿಂಗ್ಸ್‌ಗೆ ಅಬ್ದುಲ್ ಸಮದ್(37★) ಫಿನಿಶಿಂಗ್ ಟಚ್ ಕೊಟ್ಟ ನಂತರ ಲಖನೌ ಸೂಪರ್ ಜೇಂಟ್ಸ್ ಪಂಜಾಬ್‌ಗೆ ಕಠಿಣ ಗುರಿ ನೀಡಿದೆ.

ಪಂದ್ಯಾವಳಿಯಲ್ಲಿ ಅಳಿವು ಉಳಿವಿನ ಸವಾಲು ಎದುರಿಸಿರುವ ಪಂಜಾಬ್ ಕಿಂಗ್ಸ್ ಕೊನೆಯ ಲೀಗ್ ಪಂದ್ಯದಲ್ಲಿ 197 ರನ್ ಬಾರಿಸಬೇಕಿದೆ. ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ಲಖನೌ ಆರಂಭದಲ್ಲಿ ರನ್ ಮಾಡಿದ್ದರೂ, ವಿಕೆಟ್‌ಗಳನ್ನು ಕಳೆದುಕೊಂಡಿತು. ಆರಂಭಿಕ ಇಂಗ್ಲಿಸ್, ಬದೋನಿ ಮಿಂಚಿದರು. ಕೊನೆಯಲ್ಲಿ ಅಬ್ದುಲ್ ಸ್ಕೋರ್ ಹಿಗ್ಗಿಸಿದರು. ಪರಿಣಾಮ ಲಖನೌ 20 ಓವರ್‌ಗಳಲ್ಲಿ 196 ರನ್ ಗಳಿಸಿದೆ. ಪಂಜಾಬ್ 6 ವಿಕೆಟ್ ಕಿತ್ತಿದೆ.

ಬದೋನಿ-ಇಂಗ್ಲಿಸ್ ಮಿಂಚಿನಾಟ: ಟಾಸ್ ಗೆದ್ದ ಲಖನೌ ಸೂಪರ್ ಜೇಂಟ್ಸ್ ಬ್ಯಾಟಿಂಗ್‌ಗಿಳಿಯಿತು. ಮೊದಲನೇ ಓವರ್‌ನಿಂದಲೇ ಜೋಶ್ ಇಂಗ್ಲಿಸ್ ಸ್ಫೋಟಕ ಬ್ಯಾಟಿಂಗ್ ಮಾಡಲಾರಂಭಿಸಿದರು. ಆದರೆ ಎರಡನೇ ಓವರ್‌ನಲ್ಲಿ ಅರ್ಶಿನ್ ಕುಲಕರ್ಣಿ ಮೊದಲ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಪೂರನ್ ಹೆಚ್ಚಿನ ಕೊಡುಗೆ ನೀಡಲಿಲ್ಲ, 2 ರನ್ ಗಳಿಸಿ ಅವರೂ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಆಯುಷ್ ಬದೋನಿ ಮೊದಲಿನ ಬಾಲ್‌ಗಳಲ್ಲಿ ನಿಂತು ಆಡಿ ನಂತರ ದಂಡಿಸುವ ಆಟಕ್ಕಿಳಿದರು. ಸ್ಫೋಟಕ ಬೌಂಡರಿ, ಬಾನೆತ್ತರದ ಸಿಕ್ಸರ್‌ಗಳ ಮೂಲಕ ಅವರು 43 ರನ್ ಗಳಿಸಿದರು. ಪವರ್‌ಪ್ಲೇ ಅಂತ್ಯಕ್ಕೆ ಲಖನೌ 66 ರನ್‌ಗೆ 2 ವಿಕೆಟ್ ಕಳೆದುಕೊಂಡಿತ್ತು.

ಮಧ್ಯಮ ಓವರ್: 7ನೇ ಓವರ್‌ನಲ್ಲೇ ಬದೋನಿ ವಿಕೆಟ್ ಒಪ್ಪಿಸಿದರು. 18 ಬಾಲ್ ಮಾತ್ರದಲ್ಲಿ ಅವರು 3 ಸಿಕ್ಸ್, 5 ಬೌಂಡರಿಗಳೊಂದಿಗೆ 43 ರನ್ ಚಚ್ಚಿದರು. ಬಳಿಕ ಬಂದ ಪಂತ್ ಇಂಗ್ಲಿಸ್‌ಗೆ ಸ್ಟ್ರೈಕ್ ಕೊಡುತ್ತಾ ಬಂದರು. 28 ಬಾಲ್‌ಗಳಲ್ಲಿ 50 ರನ್ ಗಳಿಸಿದರು. ದಂಡಿಸುವ ಆಟ ಮುಂದುವರಿಸಿದರು. ಪಂತ್ ಒಂದೆರಡು ಬೌಂಡರಿ ಬಾರಿಸಿದರೂ 26 ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಓವರ್‌ಗಳಲ್ಲಿ ಲಖನೌ 91 ರನ್ ಗಳಿಸಿತು. ಇಂಗ್ಲಿಸ್ 72 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 9 ಬೌಂಡರಿ 2 ಸಿಕ್ಸರ್ ಸೇರಿವೆ. ಡೆತ್‌ನಲ್ಲಿ ಅಬ್ದುಲ್ ಸಮದ್ ಮಿಂಚಿದರು. ಮುಖೇಶ್ ಬರುತ್ತಲೇ ಪೆವಿಲಿಯನ್ ಹೊರಟರು. ಕೊನೆಯ ಓವರ್‌ಗಳ 20 ಬಾಲ್ ಎದುರಿಸಿದ ಅಬ್ದುಲ್ 3 ಬೌಂಡರಿ, 3 ಸಿಕ್ಸರ್‌ನೊಂದಿಗೆ 37★ ರನ್ ಗಳಿಸಿದರು. ಇದರೊಂದಿಗೆ ಲಖನೌ 6 ವಿಕೆಟ್ ನಷ್ಟಕ್ಕೆ 196 ರನ್ ಗಳಿಸಿದರು. ಪಂಜಾಬ್ ಪರ ಮಾರ್ಕೊ ಯಾನ್ಸನ್, ಚಹಲ್ ತಲಾ 2 ವಿಕೆಟ್ ಕಿತ್ತರು.



ಸೋತರೂ ಆರ್‌ಸಿಬಿ ನಂಬರ್ 1

ಹೈದರಾಬಾದ್: ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮೊದಲ ಸ್ಥಾನದಲ್ಲೇ ಉಳಿದಿದ್ದು, ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡವನ್ನು ಎದುರಿಸಲಿದೆ. ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಆರ್‌ಸಿಬಿ ತಂಡವನ್ನು 55ರನ್‌ಗಳಿಂದ ಮಣಿಸಿರುವ ಹೈದರಾಬಾದ್ ತಂಡವು, 3ನೇ ಸ್ಥಾನದಲ್ಲೇ ಉಳಿದಿದೆ.

ಶುಕ್ರವಾರ ನಡೆದ ಪಂದ್ಯವು ಅಗ್ರ ಎರಡು ಸ್ಥಾನದ ನಿರ್ಧಾರ ಮಾಡಲಿತ್ತು. ಪಂದ್ಯದಲ್ಲಿ ಟಾಸ್ ಗೆದ್ದ ಹೈದರಾಬಾದ್ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಭುವನೇಶ್ವರ್ ಕುಮಾರ್ ಸೇರಿದಂತೆ ವಿವಿಧ ಬೌಲರ್‌ಗಳನ್ನು ದಂಡಿಸುತ್ತಲೇ ಬಂದ ಸನ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 255 ರನ್ ಗಳಿಸಿತು. ಇಶಾನ್ ಕಿಶನ್(79), ಅಭಿಷೇಕ್(56) ಮತ್ತು ಕ್ಲಾಸೆನ್(51) ಮಿಂಚಿದರು. ಬೆಂಗಳೂರು ಪರ ರಸಿಖ್ 2 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತಿದ ಆರ್‌ಸಿಬಿ 200 ರನ್ ಮಾತ್ರವಷ್ಟೇ ಗಳಿಸಿತು. ವೆಂಕಟೇಶ್(44), ಪಾಟಿದಾರ್(56), ಕೃನಾಲ್(41★) ರನ್ ಗಳಿಸಿ ಹೋರಾಡಿದರು. ಹೈದರಾಬಾದ್ ಪರ ಇಶಾನ್ ಮಾಲಿಂಗಾ 2 ವಿಕೆಟ್ ಕಿತ್ತರು.

ಆರ್‌ಸಿಬಿ ಹೋರಾಟಕ್ಕಿಲ್ಲ ಜಯ: ವೆಂಕಟೇಶ್ ಅಯ್ಯರ್ ಸ್ಫೋಟಕ ಆರಂಭ ಕೊಟ್ಟರು. 19 ಬಾಲ್‌ಗಳಲ್ಲಿ 44 ರನ್ ಬಾರಿಸಿದ ಅವರು, ಭದ್ರ ಬುನಾದಿ ಹಾಕಿಕೊಟ್ಟರು. ಆದರೆ ಅವರ ವಿಕೆಟ್ ಬಿದ್ದ ನಂತರ ಕೊಹ್ಲಿ(15), ಪಡಿಕ್ಕಲ್(21) ಹೆಚ್ಚಿನ ಕೊಡುಗೆ ನೀಡಲಿಲ್ಲ, ಮಧ್ಯಮ ಕ್ರಮಾಂಕದಲ್ಲಿ ರಜತ್ ಪಾಟಿದಾರ್ ಗಟ್ಟಿಯಾಗಿ ನಿಂತುಕೊಂಡರು. 39 ಬಾಲ್‌ಗಳನ್ನು ಎದುರಿಸಿದ ಅವರು, 6 ಬೌಂಡರಿ, 1 ಸಿಕ್ಸರ್‌ನೊಂದಿಗೆ 56 ರನ್ ಗಳಿಸಿದರು. ಅಂತಿಮವರೆಗೂ ವಿಕೆಟ್ ಉಳಿಸಿ ಆಡಿದ ಕೃನಾಲ್ 41 ರನ್ ಗಳಿಸಿದರು. ಆರ್‌ಸಿಬಿ ಹೋರಾಟ ಮುಗಿಯಿತು. ವಿಕೆಟ್ ಕಳೆದುಕೊಂಡ ತಂಡ 200 ರನ್ ಅಷ್ಟೇ ಗಳಿಸಿತು.



ಹೆಡ್ ಜತೆ ಕೈಕುಲುಕದ ಕೊಹ್ಲಿ

ಪಂದ್ಯದ ವೇಳೆ ಆಸ್ಟ್ರೇಲಿಯಾ ಆಟಗಾರ, ಹೈದರಾಬಾದ್ ತಂಡದ ಆರಂಭಿಕ ಟ್ರಾವಿಸ್ ಹೆಡ್ ಹಾಗೂ ಆರ್‌ಸಿಬಿ ತಂಡದ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ನಡುವೆ ವಾಗ್ವಾದಗಳು ನಡೆದವು. ಕೊಹ್ಲಿ ಬ್ಯಾಟಿಂಗ್ ಮಾಡುವಾಗ ಹೆಡ್ ಜತೆ ಸಂಭಾಷಣೆ ಮಾಡುತ್ತಾ ಇದ್ದರು. ಪಂದ್ಯ ಮುಗಿದ ನಂತರ ವಾಡಿಕೆ ಪ್ರಕಾರ ಎಲ್ಲಾ ಆಟಗಾರರನ್ನು ಕೈಕುಲುಕಿದ ಕೊಹ್ಲಿ ಟ್ರಾವಿಸ್ ಹೆಡ್ ಜತೆ ಕೈಕುಲುಕಲೇ ಇಲ್ಲ, ಮುಂದೆ ಬಂದು ಕೈ ಮುಂದೆ ಮಾಡಿದರೂ, ಹಾಗೇ ಹೊರಟ ಕೊಹ್ಲಿ ವಿವಾದ ಹುಟ್ಟುಹಾಕಿದ್ದಾರೆ.

ಸಂಕ್ಷಿಪ್ತ ಸ್ಕೋರ್

ಹೈದರಾಬಾದ್ 20 ಓವರ್‌ಗಳಲ್ಲಿ 255/4: ಕಿಶನ್ 79, ಅಭಿಷೇಕ್ 56, ಕ್ಲಾಸೆನ್ 51; ರಸಿಖ್ 51/2
ಆರ್‌ಸಿಬಿ 20 ಓವರ್‌ಗಳಲ್ಲಿ 200/4: ಪಾಟಿದಾರ್ 56, ವೆಂಕಟೇಶ್ 44, ಕೃನಾಲ್ 41★; ಇಶಾನ್ 33/2

ಟೆನಿಸ್: ಭಾರತ ಜೋಡಿಗೆ ಕಿರೀಟ

ಬೆಂಗಳೂರು: ಎಸ್.ಎಂ. ಕೃಷ್ಣ ಮೆಮೋರಿಯಲ್ ಓಪನ್ ಟೆನಿಸ್ ಟೂರ್ನಿಯಲ್ಲಿ ನಾಲ್ಕನೇ ಶ್ರೇಯಾಂಕಿತ ಪೆಟರ್ ಬಾರ್ ಬಿರಿಯುಕೊವ್ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದರೆ, ಭಾರತದ ಆದಿಲ್ ಕಲ್ಯಾಣಪುರ ಮತ್ತು ಮುಕುಂದ್ ಶಶಿಕುಮಾರ್ ಜೋಡಿ ಡಬಲ್ಸ್ ಚಾಂಪಿಯನ್ ಆಗಿ ಮಿಂಚಿತು.

ಶನಿವಾರ ನಡೆದ ಸಿಂಗಲ್ಸ್ ಫೈನಲ್‌ನಲ್ಲಿ ಬಿರಿಯುಕೊವ್, ಮಾಜಿ ವಿಶ್ವ ನಂ. 40 ಆಟಗಾರ ಇಲ್ಯಾ ಇವಾಶ್ಕಾ ವಿರುದ್ಧ 7-6 (0), 4-6, 6-4 ಅಂತರದಲ್ಲಿ ಗೆದ್ದು ಚಾಂಪಿಯನ್ ಪಟ್ಟ ಅಲಂಕರಿಸಿದರು. ಈ ಗೆಲುವಿನೊಂದಿಗೆ ಬಿರಿಯುಕೊವ್ ತಮ್ಮ ವೃತ್ತಿಜೀವನದ ಮೊದಲ ಎಟಿಪಿ ಚಾಲೆಂಜರ್ ಪ್ರಶಸ್ತಿ ಗೆದ್ದರು. ಅವರಿಗೆ 9,500 ಅಮೆರಿಕನ್ ಡಾಲರ್ ಬಹುಮಾನ ಹಾಗೂ 50 ಎಟಿಪಿ ಅಂಕಗಳು ಲಭಿಸಿದವು.

ಡಬಲ್ಸ್‌ನಲ್ಲಿ ಭಾರತ ಕಿಂಗ್: ನಂತರ ನಡೆದ ಡಬಲ್ಸ್ ಫೈನಲ್‌ನಲ್ಲಿ ಆದಿಲ್ ಕಲ್ಯಾಣಪುರ ಮತ್ತು ಮುಕುಂದ್ ಶಶಿಕುಮಾರ್ ಜೋಡಿ, ಬಿರಿಯುಕೊವ್ ಹಾಗೂ ಕಝಾಕಿಸ್ತಾನದ ಗ್ರಿಗೊರಿಯ್ ಲೊಮಾಕಿನ್ ವಿರುದ್ಧ 6-7 (3), 6-4, 10-3 ಅಂತರದಲ್ಲಿ ಭರ್ಜರಿ ಗೆಲುವು ದಾಖಲಿಸಿತು. ಇದು ಆದಿಲ್ ಮತ್ತು ಮುಕುಂದ್ ಅವರ ಮೊದಲ ಎಟಿಪಿ ಚಾಲೆಂಜರ್ ಡಬಲ್ಸ್ ಪ್ರಶಸ್ತಿಯಾಗಿದೆ.



ಮೊದಲ ದಿನವೇ ನೋವಾಕ್ ಜೋಕೊವಿಚ್ ಕಣಕ್ಕೆ

ಇಂದಿನಿಂದ ಫ್ರೆಂಚ್ ಓಪನ್



ಪ್ಯಾರಿಸ್: ಟೆನಿಸ್ ಲೋಕದ ಪ್ರಮುಖ ಪಂದ್ಯಾವಳಿಗಳಲ್ಲಿ ಒಂದಾದ, ಗ್ರ್ಯಾಂಡ್ ಸ್ಲಾಮ್ ಫ್ರೆಂಚ್ ಓಪನ್ ಅಲಿಯಾಸ್ ರೋಲ್ಯಾಂಡ್ ಗ್ಯಾರೋಸ್ ಭಾನುವಾರದಿಂದ ಶುರುವಾಗಲಿದೆ. ತೀವ್ರ ಪೈಪೋಟಿಯಿಂದ ಕೂಡಿರುವ ಪಂದ್ಯಾವಳಿಯ ಮೊದಲ ದಿನವೇ ಪ್ರಮುಖ ಟೆನಿಸ್ ಪಟುಗಳು ಕಣಕ್ಕಿಳಿಯಲಿದ್ದಾರೆ. ಭಾನುವಾರದಂದು ಮುಖ್ಯ ಡ್ರಾ ಮೊದಲ ಪಂದ್ಯ ನಡೆಯಲಿದೆ. ಜೂನ್ 7ರಂದು ನಡೆಯಲಿರುವ ಪುರುಷರ ಸಿಂಗಲ್ಸ್ ಫೈನಲ್‌ನೊಂದಿಗೆ ಪಂದ್ಯಾವಳಿಗೆ ತೆರೆ ಬೀಳಲಿದೆ.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ನಡೆಯುವ ಈ ಕೂಟವು ಐದು ವಿಭಾಗಗಳಲ್ಲಿ ನಡೆಯುತ್ತದೆ. ಪಂದ್ಯಾವಳಿಯ ವಿಜೇತರಿಗೆ ವಿಶೇಷ ಬಹುಮಾನದ ಜತೆಗೆ 200 ಎಟಿಪಿ ಅಂಕಗಳು ಸಿಗಲಿವೆ. ಅರ್ಹತಾ ಸುತ್ತಿನ ಪಂದ್ಯಗಳು ಶನಿವಾರದಂದು ಪೂರ್ಣಗೊಂಡಿದ್ದು, ಮುಖ್ಯ ಡ್ರಾನ ಮೊದಲ ಪಂದ್ಯದಲ್ಲಿ ಅಲೆಜಾಂಡ್ರೊ ಡೇವಿಡೋವಿಚ್ ಹಾಗೂ ಡಾಮಿರ್ ವಿರುದ್ಧ ನಡೆಯಲಿದೆ. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಲೂಸಿಯಾ ಬ್ರೊಂಜೆಟ್ಟಿ, ಮಾರೀ ಬೌಜ್ಕೋವಾ ವಿರುದ್ಧ ನಡೆಯಲಿದೆ.

ದಿನದ ಪ್ರಮುಖ ಪಂದ್ಯಗಳು:

ಬೊಂಜಿ-ಜ್ವೆರೆವ್: ವಿಶ್ವದ ಅಗ್ರ ಶ್ರೇಯಾಂಕಿತ ಆಟಗಾರರಲ್ಲಿ ಒಬ್ಬರಾದ ಬೆಂಜಾಮಿನ್ ಬೊಂಜಿ ಮತ್ತು ಅಲೆಕ್ಸಾಂಡರ್ ಜ್ವೆರೆವ್ ಭಾನುವಾರದ ಪಂದ್ಯದಲ್ಲಿ ಮುಖಾಮುಖಿಯಾಗಲಿದ್ದಾರೆ. ಸಂಜೆ 4:40ಕ್ಕೆ ಈ ಪಂದ್ಯ ನಡೆಯಲಿದೆ. ಹಿಂದಿನ ಕೂಟಗಳಲ್ಲಿ ಉತ್ತಮ ಪ್ರದರ್ಶನ ನೀಡಿರುವ ಜ್ವೆರೆವ್ ಗೆಲುವಿನ ಆರಂಭದ ವಿಶ್ವಾಸದಲ್ಲಿದ್ದಾರೆ.

ಟೇಲರ್ ಫ್ರಿಟ್ಜ್-ನಿಶೇಶ್ ಬಸವರೆಡ್ಡಿ: ಅಮೆರಿಕದ ಟೇಲರ್ ಫ್ರಿಟ್ಜ್ ಸ್ವದೇಶದ ಬಸವರೆಡ್ಡಿ ಅವರನ್ನು ಎದುರಿಸಲಿದ್ದಾರೆ. ವಿಶ್ವ ಶ್ರೇಯಾಂಕದಲ್ಲಿ ಉತ್ತಮ ಪ್ರದರ್ಶನ ನೀಡಿರುವ ಫ್ರಿಟ್ಜ್ ನಿರೀಕ್ಷೆಗಳೊಂದಿಗೆ ಪಂದ್ಯಾವಳಿಗೆ ಬಂದಿದ್ದು, ತಮ್ಮ ಮೊದಲನೇ ಕಿರೀಟಕ್ಕಾಗಿ ಫೈಟ್ ನಡೆಸುತ್ತಿದ್ದಾರೆ. ಅತ್ತ ಅಮೆರಿಕ ಪ್ರತಿನಿಧಿಸುತ್ತಿರುವ ನಿಶೇಶ್ ಕೂಡ ಗೆಲುವಿಗಾಗಿ ಪೈಪೋಟಿ ನಡೆಸಲಿದ್ದಾರೆ.

ಪಂದ್ಯಾವಳಿಯ ವೇಳಾಪಟ್ಟಿ

- ಮೇ 24-ಮೇ 26: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ಮೊದಲ ಸುತ್ತು
- ಮೇ 27-ಮೇ 28: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ಎರಡನೇ ಸುತ್ತು
- ಮೇ 29-ಮೇ 30: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ಮೂರನೇ ಸುತ್ತು
- ಮೇ 31-ಜೂನ್ 1: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ನಾಲ್ಕನೇ ಸುತ್ತು
- ಜೂನ್ 2-ಜೂನ್ 3: ಪುರುಷ ಮತ್ತು ಮಹಿಳಾ ಸಿಂಗಲ್ಸ್ - ಕ್ವಾರ್ಟರ್-ಫೈನಲ್ಸ್
- ಜೂನ್ 4: ಮಹಿಳಾ ಸಿಂಗಲ್ಸ್ - ಸೆಮಿಫೈನಲ್ಸ್
- ಜೂನ್ 5: ಪುರುಷರ ಸಿಂಗಲ್ಸ್ - ಸೆಮಿಫೈನಲ್ಸ್
- ಜೂನ್ 6: ಮಹಿಳಾ ಸಿಂಗಲ್ಸ್ - ಫೈನಲ್
- ಜೂನ್ 7: ಪುರುಷರ ಸಿಂಗಲ್ಸ್ - ಫೈನಲ್

ಈ ಪಂದ್ಯ ಸಂಜೆ 5:20ಕ್ಕೆ ನಡೆಯಲಿದೆ.

ಜಿಯೋವಾನಿ ಪೆರಿಕಾರ್ಡ್-ನೋವಾಕ್ ಜೋಕೊವಿಚ್: ಸರ್ಬಿಯಾದ ಟೆನಿಸ್ ದಿಗ್ಗಜ ನೋವಾಕ್ ಜೋಕೊವಿಚ್ ಪಂದ್ಯಾವಳಿಯ ಮೊದಲ ದಿನವೇ ಮೈದಾನಕ್ಕಿಳಿಯಲಿದ್ದಾರೆ. ವಿಶ್ವ ಶ್ರೇಯಾಂಕದಲ್ಲಿ ಅತ್ಯುನ್ನತ ದಾಖಲೆಗಳನ್ನು ಹೊಂದಿರುವ ಜೋಕೊವಿಚ್ ಪಂದ್ಯಾವಳಿಯ ಗೆಲುವಿನ ಫೇವರಿಟ್ ಆಗಿದ್ದಾರೆ. ಮೊದಲ ಪಂದ್ಯದಲ್ಲಿ ಜಿಯೋವಾನಿ ಅವರನ್ನು ಎದುರಿಸಲಿದ್ದು, ಪಂದ್ಯ ತಡರಾತ್ರಿ 11:45ಕ್ಕೆ ನಡೆಯಲಿದೆ.

ಮಹಿಳೆಯರ ವಿಭಾಗದಲ್ಲೂ ಸ್ಟಾರ್ ಆಟಗಾರರಿದ್ದು, ಆದರೆ ಅಗ್ರ ಶ್ರೇಯಾಂಕಿತ ಆಟಗಾರರು ಎರಡನೇ ದಿನ ಮುಖಾಮುಖಿಯಾಗಲಿದ್ದಾರೆ. ಮೊದಲ ದಿನದ ಗಮನಿಸಬೇಕಾದ ಪಂದ್ಯದಲ್ಲಿ ಚೀನಾದ ವಾಂಗ್ ಹಾಗೂ ಟಾಗರ್ ಪಂದ್ಯವಾಡಲಿದ್ದಾರೆ.

ಗೌತಮ್ ನಾಯರ್ ಮುಡಿಗೇರಿದ ಪ್ರಶಸ್ತಿ

ವಿಜಯಪುರ: 15 ವರ್ಷದ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರಿನ ಗೌತಮ್ ಎಸ್ ನಾಯರ್ ಬೆಂಗಳೂರು ಗ್ರಾಮಾಂತರದ ಯಶವರ್ಧನ್ ಎಸ್. ಆರ್. ವಿರುದ್ಧ 21-12, 21-19 ಅಂತರದಿಂದ ಜಯಗಳಿಸಿ ಪಂದ್ಯಾವಳಿ ಮುಡಿಗೇರಿಸಿಕೊಂಡರು.

15 ವರ್ಷದ ಬಾಲಕಿಯರ ಸಿಂಗಲ್ಸ್ ಬೆಂಗಳೂರಿನ ಮಹಿತಾ ನಾಯ್ಡು, ಸ್ಮೃತಿ ಎಸ್. ವಿರುದ್ಧ 21-10, 21-7ರಿಂದ ಗೆದ್ದರು. ಇಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಯೋನೆಕ್ಸ್ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಬ್ಯಾಡ್ಮಿಂಟನ್ ಪಂದಾವಳಿಗೆ ಶನಿವಾರ ತೆರೆ ಬಿದ್ದಿತು.

ಜೋಡಿ ವಿಭಾಗದಲ್ಲಿ: 15 ವರ್ಷದ ಬಾಲಕರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಚೇತಸ್ ಮುಂಡರಗಿ, ವಿಶಾಲ್ ಡಿ. ಆನಂದ್ ಕೊಡಗಿನ ಗೌತಮ್ ಎಸ್. ನಾಯರ್, ಬೆಂಗಳೂರಿನ ಸಿದ್ಧಾರ್ಥ್ ಎಸ್. ನಾಯರ್ ವಿರುದ್ಧ 14-21,



21-14, 21-16 ಜಯಗಳಿಸಿದರು. 15 ವರ್ಷದ ಬಾಲಕಿಯರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಹಂಸಾ ಮುರಳೀಧರ, ಮಹಿತಾ ನಾಯ್ಡು ಬೆಂಗಳೂರಿನ ಜೀವಿಕಾಶ್ ಸಾಯಿ ರಾಜೇಶ್ ಕುಮಾರ್, ಮನಿಕಾ ನವೀನ್ ವಿರುದ್ಧ 21-18, 21-15ಗೆದ್ದರು.

ಯಶವರ್ಧನ್-ಆದಿತಿ ಚಾಂಪಿಯನ್: 15 ವರ್ಷದ ಮಿಶ್ರ ಡಬಲ್ಸ್ ವಿಭಾಗದಲ್ಲಿ ಯಶವರ್ಧನ್ ಎಸ್.ಆರ್., ಆದಿತಿ ಸುಕಾಂತ್, ಬಿ.ಬಿ. ವಿಶಾಲ್ ಉತ್ಕರ್ಷ ಹಾಗೂ ಹಸ್ತಿಕಾ ರಾಕೇಶ್ ವಿರುದ್ಧ ಗೆದ್ದರು. 17 ವರ್ಷದ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರಿನ ಪೀಯೂಷ್ ತ್ರಿಪಾಠಿ, ಡಿಲನ್ ಪಿ. ತೋಕ್ಚೋಂ ವಿರುದ್ಧ 21-19, 10-21, 21-17 ಅಂತರದಿಂದ ಗೆದ್ದರು. 17 ವರ್ಷದ ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಆದಿತಿ ಸುಕಾಂತ್ ಕೀರ್ತಿ ಬಾಲಾಜಿ ವಿರುದ್ಧ 21-18, 21-16 ಗೆದ್ದರು.

17 ವರ್ಷದ ಬಾಲಕರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಮೆಹುಲ್ ಮನವ್ ಅರುಳ್ಮುರುಗನ್, ಸಾತ್ವಿಕ್ ಎಸ್ ಪ್ರಭು, ಚಿರಾಗ್ ಪ್ರಕಾಶ್, ಬೆಂಗಳೂರಿನ ನಿಕೇತನ ಹರಿ ಎನ್.ಡಿ. ವಿರುದ್ಧ 15-21, 21-19, 21-18 ಗೆದ್ದರೆ, ಬಾಲಕಿಯರಲ್ಲಿ ದಿಶಾ ರವಿ ಭಟ್, ತನ್ವಿ ಮುನೋತ್ ಅವರು ರಕ್ಷಾ ಎನ್., ಶ್ರಿಯಾ ಜೋಶಿ ವಿರುದ್ಧ 21-11, 21-13 ಗೆದ್ದರು. 17 ವರ್ಷದ ಮಿಶ್ರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಈಶ್ವರ್ ಸಾಯಿ ಕಟಂ, ಡೆಬೋರಾ ಜಾನ್ ಅವರು ಚಿರಾಗ್ ಪ್ರಕಾಶ್, ಬೆಂಗಳೂರಿನ ತನ್ವಿ ಮುನೋತ್ ವಿರುದ್ಧ 21-17, 21-16 ಅಂತರದಿಂದ ಜಯಗಳಿಸಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5993

ಎಡದಿಂದ ಬಲಕ್ಕೆ
2. ಸಂಸ್ಕೃತದಿಂದ ಹುಟ್ಟಿದ ಶಬ್ದ (3)
5. ಸ್ವೇಚ್ಛೆಯಾಗಿ ಅಡ್ಡಾಡುವ ಜಾನುವಾರು (4)
6. ಜೊತೆಯಲ್ಲಿರುವವನು-ಒಡನಾಡಿ (4)
7. ಚಾಣಾಕ್ಷತನಕ್ಕೆ ಹೆಸರಾದ ಪ್ರಾಣಿ (2)
9. ದೇವರಿಂದ ಸಿಕ್ಕ ವಿಶೇಷ ಅನುಗ್ರಹ (2)
10. ಭೌತಶಾಸ್ತ್ರದಲ್ಲಿ ಕಂಪನಗಳ ಚಲನೆ (3)
12. ತನ್ನ ದೇಹದಿಂದ ಜನಿಸಿದವನು-ಮಗ (3)
14. ಮಳೆ ಬರುವ ಸಮಯ-ವರ್ಷಾಕಾಲ (5)
15. ಹತ್ತು ಕುತ್ತಿಗೆಗಳನ್ನು ಹೊಂದಿದವನು-ರಾವಣ (4)
16. ಬಯಲುಸೀಮೆಯಲ್ಲಿ ಕಂಡುಬರುವ ಮುಳ್ಳಿನಮರ (4)

ಮೇಲಿನಿಂದ ಕೆಳಕ್ಕೆ
1. ಮಂತ್ರಪೂರ್ವಕವಾಗಿ ಅಂಗೈಯ ನೀರನ್ನು ಹೀರುವ ಕ್ರಿಯೆ(4)
2. 'ಅಂತ್ಯದವರೆಗೆ' ತಲೆಕೆಳಗಾಗಿದೆ (5)
3. ಚೈತ್ರ-ವೈಶಾಖ ಮಾಸಗಳ ಕಾಲ (5)
4. ಹಾವುಗಳನ್ನು ಆಕರ್ಷಿಸುತ್ತದೆ ಎನ್ನುವ ವಾದ್ಯ (4)
8. ಬಣ್ಣದ ಕೆಲಸ ಮಾಡುವವ ತಲೆಕೆಳಗಾಗಿದ್ದಾನೆ (3)
9. ವಸ್ತುವಿನ ಭಾರ ಸೂಚಿಸುವ ಪದ (3)
10. ತಾತ್ವಿಕ ವಿಚಾರಗಳುಳ್ಳ ಹಾಡು (4)
11. ಅಗ್ರಜ ಏರಿ ಕುಳಿತದ್ದು ಈ ಆನೆಯ ಮೇಲೆ (2)
12. ಬೆಳಕಿನ ಅಭಾವ-ಸಾಹಿತ್ಯದಲ್ಲಿ ಅಜ್ಞಾನ (2)
13. ಹೋರಾಟದಲ್ಲಿ ಗೆಲುವು ಸಾಧಿಸಿದವನು (4)

5992 ಉತ್ತರ

ಎಡದಿಂದ ಬಲಕ್ಕೆ:
2. ತರಂಗ 5. ಜ್ಞಾನಿ
6. ರೋಷ 7. ಲಜ್ಜೆಗೇಡಿ
9. ಕ್ಷಮಾಗುಣ
11. ಬೆಣ್ಣೆಕಾಸು
13. ಹಸಿಮಾಂಸ 15. ಲೆಕ್ಕಣಿ
16. ಜಹಾಂಗೀರ್
17. ಜಮಾವಣೆ

ಮೇಲಿನಿಂದ ಕೆಳಕ್ಕೆ :
1. ಪುಣ್ಯಕಾಲ 2. ತನಿಗಿಡಿ
3. ಕ್ಷಯರೋಗ
4. ಆಮಂತ್ರಣ
8. ಗೇರೆಣ್ಣೆ 10. ಮಾನಸ
11. ಸುರರಾಜ 12. ಬೆಲೆ
13. ಹಣೆ 14. ಸಮರ್ಪಣೆ

ಕಿರುಸುದ್ದಿ

ಚಿಲ್ಲರೆ ರಾಜಕಾರಣಕ್ಕೆ ತಲೆಕೆಡಿಸಿಕೊಳ್ಳಲ್ಲ

• **ತುಮಕೂರು:** ಚಿಲ್ಲರೆ ರಾಜಕಾರಣಕ್ಕೆ ತಾವು ತಲೆಕೆಡಿಸಿಕೊಳ್ಳುವುದಿಲ್ಲ, ಚಿಲ್ಲರೆಗಳಿಗೆಲ್ಲ ಉತ್ತರಿಸುವುದಿಲ್ಲ ಎಂದು ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ತಿಳಿಸಿದರು. ಮಾಧ್ಯಮದಲ್ಲಿ ಮಾತನಾಡಿ, ಜೆಡಿಎಸ್ ನಾಯಕ ನಾಗರಾಜು ಚಲನವಲನದ ಮೇಲೆ ಕಣ್ಣಿಟ್ಟಿರುವ ಆರೋಪವನ್ನು ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ತಳ್ಳಿಹಾಕಿದ ಅವರು, ತಮ್ಮ ನಲವತ್ತು ವರ್ಷದ ಸಾರ್ವಜನಿಕ ಜೀವನದಲ್ಲಿ ದ್ವೇಷದ ರಾಜಕೀಯ ಮಾಡಿಲ್ಲವೆಂದು ಸ್ಪಷ್ಟಪಡಿಸಿದ ಅವರು, ತಮ್ಮ ಮಗನ ಆಡಿಯೋ ಪ್ರಕರಣ ಪೂರ್ವನಿಯೋಜಿತ ಪಿತೂರಿ ಎಂದಿದರು. ದುರುದ್ದೇಶದಿಂದಲೇ ಮಗನನ್ನು ಪ್ರಚೋದಿಸಿ ಈ ವಿವಾದ ಸೃಷ್ಟಿಸಲಾಗಿದೆ. ವೈಯಕ್ತಿಕ ನಿಂದನೆ ಮತ್ತು ಚಿಲ್ಲರೆ ರಾಜಕಾರಣಕ್ಕೆ ತಾವು ತಲೆಕೆಡಿಸಿಕೊಳ್ಳುವುದಿಲ್ಲ, ಈ ಹಿಂದೆ ಕುಮಾರಸ್ವಾಮಿಯವರ ನಡವಳಿಕೆಯಿಂದ ಸ್ವಾಭಿಮಾನಕ್ಕೆ ಧಕ್ಕೆಯಾಗಿ ಜೆಡಿಎಸ್ ನಿಂದ ದೂರ ಸರಿದಿದ್ದಾಗಿ ಸ್ಮರಿಸಿದರು, ಎಚ್‌ಡಿಕೆ ಅವರು ದೊಡ್ಡವರಾಗಿದ್ದು, ಅವರಿಂದ ಕ್ಷಮೆಯನ್ನೇನೂ ನಿರೀಕ್ಷಿಸುತ್ತಿಲ್ಲ, ರಾಜಕೀಯ ಏನೇ ಇರಲಿ, ಎಚ್.ಡಿ. ರೇವಣ್ಣ ಸೇರಿದಂತೆ ಜೆಡಿಎಸ್ ನಾಯಕರಿಗೆ ತಮ್ಮ ಮಗನ ವಿವಾಹದ ಆಮಂತ್ರಣ ನೀಡುವ ಮೂಲಕ ಸೌಜನ್ಯದ ಸಂಬಂಧ ಕಾಯ್ದುಕೊಂಡಿರುವುದಾಗಿ ತಿಳಿಸಿದರು. ಇನ್ನು ತುಮಕೂರು ಜಿಲ್ಲೆಯಲ್ಲಿ ತಮ್ಮ ರಾಜಕೀಯ ನಡೆ ಸ್ವತಂತ್ರ ನಿರ್ಧಾರವಾಗಿದ್ದು, ಹನಿಟ್ರ್ಯಾಪ್‌ನಂತಹ ಆಧಾರರಹಿತ ವದಂತಿಗಳಲ್ಲಿ ಯಾವುದೇ ಸತ್ಯಾಂಶವಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಆರೋಪ ಸಾಬೀತಾದರೆ ಕೂಡಲೇ ರಾಜೀನಾಮೆ ನೀಡುತ್ತೇನೆ ಎಂದು ತಿಳಿಸಿದರು.


ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ಹೇಳಿಕೆ

ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಕಾಮಗಾರಿ ಪರಿಶೀಲನೆ | ಬಾಕ್ಸ್‌ಪುಶಿಂಗ್ ಕಾಮಗಾರಿ ಶೀಘ್ರ ಅಂತ್ಯ

ಮಳೆ ನೀರು ನಿಲ್ಲದಿರಲಿ



• **ಬೆಂಗಳೂರು:** ಗೆದ್ದಲಹಳ್ಳಿ ರೈಲ್ವೆ ವೆಂಟ್ ಬಾಕಿ ಇರುವ 12 ಮೀಟರ್ ಬಾಕ್ಸ್ ಪುಶಿಂಗ್ ಕಾಮಗಾರಿಯನ್ನು ಮೇ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ರಮೇಶ್ ಡಿ.ಎಸ್. ಸೂಚಿಸಿದ್ದಾರೆ.

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಿವಿಧ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದ ಅವರು, ಗೆದ್ದಲಹಳ್ಳಿ ಸಾಯಿ ಲೇಔಟ್ ಪ್ರದೇಶದಲ್ಲಿ ನಡೆಯುತ್ತಿರುವ ರೈಲ್ವೆ ವೆಂಟ್ ಕಾಮಗಾರಿಯ ಭಾಗವಾಗಿ ಬಾಕಿ ಇರುವ ಸುಮಾರು 12ಮೀಟರ್ ಬಾಕ್ಸ್ ಪುಶಿಂಗ್ ಕಾಮಗಾರಿಯನ್ನು ಮೇ 31ರೊಳಗೆ ಪೂರ್ಣಗೊಳಿಸುವಂತೆ ಕಾರ್ಯಪಾಲಕ ಅಭಿಯಂತರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಕಾಮಗಾರಿ ಶೀಘ್ರ ಪೂರ್ಣಗೊಂಡಲ್ಲಿ ತಕ್ಷಣವೇ ರಿಟೈನಿಂಗ್ ವಾಲ್ ನಿರ್ಮಾಣ ಕೈಗೊಂಡು, ರೈಲ್ವೆ ವೆಂಟ್ ಮೂಲಕ ಮಳೆ ನೀರು ಸರಾಗವಾಗಿ ಹರಿಯುವ ವ್ಯವಸ್ಥೆ ಮಾಡುವುದರೊಂದಿಗೆ ಸುತ್ತಮುತ್ತಲಿನ ಪ್ರದೇಶದಲ್ಲಿ ಉಂಟಾಗುತ್ತಿದ್ದ ನೆರೆ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸಿದಂತಾಗುತ್ತದೆ ಎಂದು ತಿಳಿಸಿದ್ದಾರೆ.

ಗೆದ್ದಲಹಳ್ಳಿ ಬಳಿ ರಾಜಕಾಲುವೆಯಲ್ಲಿ ಹೂಳು ತೆರವು ಮತ್ತು ಸ್ವಚ್ಛತಾ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ. ಮಳೆಗಾಲದಲ್ಲಿ ನೀರು ನಿಂತು ಸಮಸ್ಯೆ ಉಂಟಾಗದಂತೆ ಪ್ರಮುಖ ರಸ್ತೆಗಳ ಎರಡೂ ಬದಿಗಳಿಂದ ಮಳೆ ನೀರು ಕಾಲುವೆಗೆ ಸಂಪರ್ಕ ಕಲ್ಪಿಸುವ ಚರಂಡಿಯನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ, ಮಳೆ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಪೂರ್ವ ನಗರ ಪಾಲಿಕೆಗೆ ಹೊಂದಿಕೊಂಡಿರುವ ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಗಡಿಯ ಮೇಲ್ಭಾಗದ ಕಾಲುವೆಯಿಂದ ಗೆದ್ದಲಹಳ್ಳಿ ಕಾಲುವೆಗೆ ಸಂಪರ್ಕವಿದ್ದು, ಮೇಲ್ಭಾಗದಲ್ಲಿರುವ ಕಾಲುವೆ ಹೂಳು ಕೆಳಭಾಗಕ್ಕೆ ಹರಿದು ಬರುವುದರಿಂದ ನೆರೆ ಪರಿಸ್ಥಿತಿ ಉಂಟಾಗಬಹುದಾಗಿದೆ. ಆದ್ದರಿಂದ ಅಲ್ಲಿನ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಕಾಲುವೆ ನಿರ್ವಹಣಾ ಕಾಮಗಾರಿಯನ್ನೂ ಪೂರ್ಣಗೊಳಿಸುವಂತೆ ತಿಳಿಸಿದ್ದಾರೆ.

ಪೂರ್ವಸಿದ್ಧತೆಗೆ ಆದ್ಯತೆ

ಮಳೆಗಾಲ ಆರಂಭಕ್ಕೂ ಮುನ್ನ ನೆರೆಯುಂಟಾಗುವ ಸಾಧ್ಯತೆಯಿರುವ ಪ್ರದೇಶಗಳಲ್ಲಿ ಮುನ್ನೆಚ್ಚರಿಕಾ ಕ್ರಮವನ್ನು ಕೈಗೊಂಡು, ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಮಳೆ ನೀರು ಕಾಲುವೆಗಳ ನಿರ್ವಹಣೆ ಮಾಡಿ ಮಳೆ ನೀರು ಸರಾಗವಾಗಿ ಹರಿಯುವಂತೆ ಕಾಲುವೆಗಳ ಸಮರ್ಪಕ ನಿರ್ವಹಣೆಗೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಜೀವನ್ಮುಖಿ ಪ್ರಶಸ್ತಿಗೆ ನಾಲ್ವರು ಗಣ್ಯರ ಆಯ್ಕೆ

• **ಬೆಂಗಳೂರು:** ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ಸಹಯೋಗದೊಂದಿಗೆ ಜೀವನ್ಮುಖಿ ಕನ್ನಡ ಪಾಕ್ಷಿಕ ಪತ್ರಿಕೆ ನೀಡುತ್ತಿರುವ 16ನೇ ವರ್ಷದ 'ಜೀವನ್ಮುಖಿ ಪ್ರಶಸ್ತಿ' ಪುರಸ್ಕಾರಕ್ಕೆ ರಾಜ್ಯ ಮಟ್ಟದ ನಾಲ್ಕು ಮಂದಿ ಗಣ್ಯ ಸಾಧಕರು ಆಯ್ಕೆಯಾಗಿದ್ದಾರೆ.

ವಿಧಾನ ಪರಿಷತ್ ಸದಸ್ಯರಾದ ಡಾ. ಆರತಿ ಕೃಷ್ಣ, ಲೇಖಕರು, ಆಯುಕ್ತರು, ಗೃಹ ಮಂಡಳಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಐಎಎಸ್ ಅಧಿಕಾರಿ ಕೆ.ಎ. ದಯಾನಂದ, ಬೆಂಗಳೂರು ಪಶ್ಚಿಮ ವಿಭಾಗ ಉಪ ಪೊಲೀಸ್ ಆಯುಕ್ತರಾದ ಎಸ್. ಯತೀಶ್ ಐಪಿಎಸ್ ಮತ್ತು ಸಾಹಿತಿ ಹಾಗೂ ಸಾಂಸ್ಕೃತಿಕ ಸಂಘಟಕರಾದ ನಂ. ನಂಜಪ್ಪ ರಾಜಣ್ಣ ರವರು 2026ರ 'ಜೀವನ್ಮುಖಿ ಪ್ರಶಸ್ತಿ' ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ರೂ. 5000 ನಗದು, ಫಲಕ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿದೆ. ಸಮಾರಂಭವು ಜೂ. 07ರ ಭಾನುವಾರ ಸಂಜೆ 4 ಗಂಟೆಗೆ ನಗರದ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯಲಿದೆ.ಪ್ರಸಿದ್ಧ ಸಾಹಿತಿ ಪ್ರೊ. ಹಂಪ ನಾಗರಾಜಯ್ಯ ರವರು ಉದ್ಘಾಟನೆ ಮಾಡುವರು, ಕರ್ನಾಟಕ ಜಾನಪದ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷರು ಹಾಗೂ ನಿವೃತ್ತ ಐಎಎಸ್ ಅಧಿಕಾರಿಯಾದ ಟಿ.ತಿಮ್ಮೇಗೌಡ ರವರು ಪ್ರಶಸ್ತಿ ಪ್ರದಾನ ಮಾಡುವರು, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಕೋಶಾಧ್ಯಕ್ಷರಾದ ಪಿ. ಮಲ್ಲಿಕಾರ್ಜುನಪ್ಪ ರವರು ಅಧ್ಯಕ್ಷತೆ ವಹಿಸುವರು. ಇದೇ ಸಂದರ್ಭದಲ್ಲಿ ನಾಡಿನ ಪ್ರತಿಭಾವಂತ ಬಾಲ ಪ್ರತಿಭೆಗಳಾದ ಕ್ಷಮ ಯು. ಬಿತಾಳ್, ಚಿಂರಶ್ ಎಸ್., ಶಿವಾನಿ ಬಿ., ಖುಷಿ ಪ್ರದೀಪ್, ಹಾಸಿನಿ ಪಿ. ಗೌಡ, ರಂಜಿತಾ ಬಿ.ಎಸ್., ಎಚ್.ಎಸ್. ದೀಪ್ತಿ ಪ್ರಿಯಾ, ಚಿಂರಶ್ ಎಸ್. ರವಿ, ದೀಕ್ಷಿತಕರಣ, ಸಮನ್ವಿ ಸಂತೋಷ, ಅನಿತ್ ಎಲ್., ಗಗನ್ ಬಿ., ಹಿತೈಷಿ ಆರ್., ಪ್ರಜ್ವಲ್ ಎಸ್., ವಿಭಾ ವಿ., ಇವರುಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸತ್ಕರಿಸಲಾಗುವುದೆಂದು ವೇದಿಕೆ ಅಧ್ಯಕ್ಷ ಜೀವನ್ಮುಖಿ ಸುರೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಳೆ ಪಿಂಚಣಿ ಜಾರಿಗೆ ಆಗ್ರಹ

• **ಬೆಂಗಳೂರು:** ಹಳೆ ಪಿಂಚಣಿ ಯೋಜನೆ ಮರು ಜಾರಿಗೊಳಿಸುವಂತೆ ರಾಜ್ಯ ಸರ್ಕಾರದ ಮೇಲೆ ನಿರಂತರವಾಗಿ ಒತ್ತಡ ಹಾಕಲಾಗುತ್ತಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು.

ನಗರದ ಕಂಠೀರವ ಕ್ರೀಡಾಂಗಣದಲ್ಲಿ ರಾಜ್ಯ ಸರ್ಕಾರಿ ನೌರರ ಸಂಘ ಆಯೋಜಿಸಿರುವ ರಾಜ್ಯ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರಿ ನೌಕರರಿಗೆ ಹೋರಾಟವಿಲ್ಲದೆ 6ನೇ ಮತ್ತು 7ನೇ ವೇತನ ಆಯೋಗವನ್ನು ಜಾರಿಗೊಳಿಸಿದ್ದರು. ಇದೇ ಸರ್ಕಾರ ಇನ್ನೂ ಎರಡು ವರ್ಷ ಇರಲಿದ್ದು ಕೇಂದ್ರದ ಮಾದರಿಯ ವೇತನವನ್ನು ಸರ್ಕಾರಿ ನೌಕರರು ಪಡೆಯಲಿದ್ದಾರೆ. ಇದೇ ನಿಟ್ಟಿನಲ್ಲಿ ಸರ್ಕಾರಿ ನೌಕರರ ಸಂಘ ಪ್ರಯತ್ನ ಮುಂದುವರೆಸಿದೆ ಎಂದು ತಿಳಿಸಿದರು.

ಎನ್‌ಪಿಎಸ್ ತೆಗೆದು ಒಪಿಎಸ್ ಜಾರಿಯಾಗಬೇಕೆಂಬ ಬೇಡಿಕೆಯ ಹೋರಾಟ ನಡೆಯುತ್ತಲೇ ಇದೆ. ಈಗಾಗಲೇ 2.93 ಲಕ್ಷ ಜನರು ನೌಕರರ ಭವಿಷ್ಯ ಆತಂಕದಲ್ಲಿ ಇದೆ. ಎರಡು ದಿನಗಳ ಹಿಂದಷ್ಟೇ ಹಳೆ ಪಿಂಚಣಿ ಕುರಿತು ಮುಖ್ಯಮಂತ್ರಿಯವರ ಕಾರ್ಯದರ್ಶಿ ಬಳಿಗೆ ಹೋಗಿ ವರದಿಯನ್ನು ಶೀಘ್ರ ತರಿಸಿಕೊಳ್ಳುವಂತೆ ಮನವಿ ಮಾಡಿದ್ದೇವೆ. ಒಂದು ವೇಳೆ ಹಳೆ ಪಿಂಚಣಿ ವ್ಯವಸ್ಥೆ ಜಾರಿಯಾಗದಿದ್ದರೆ ಹೋರಾಟ ನಡೆಸುವ ಎಚ್ಚರಿಕೆಯನ್ನು ಕೂಡ ಕೊಟ್ಟಿದ್ದೇವೆ ಎಂದು ಹೇಳಿದರು.

ರಾಜ್ಯದಲ್ಲಿ 2.85 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿಯಿದ್ದು ಭರ್ತಿ ಮಾಡುವ ನಿಟ್ಟಿನಲ್ಲಿಯೂ ನಮ್ಮ ಪ್ರಯತ್ನ ಮುಂದುವರೆದಿದೆ. 7ನೇ ವೇತನ ಆಯೋಗದ ಎರಡನೇ ವರದಿ ಕೂಡ ಅನುಷ್ಠಾನಗೊಂಡಿಲ್ಲ, ಅದರ ಬಗ್ಗೆಯೂ ಸರ್ಕಾರದ ಮೇಲೆ ಒತ್ತಡ ಹಾಕುತ್ತಿದ್ದೇವೆ. ಸರಿಯಾದ ಸಮಯಕ್ಕೆ ತುಟ್ಟಿಭತ್ಯೆ ಬಿಡುಗಡೆಯಾಗಿದೆ. ನೌಕರರಿಗೆ ಅಪಘಾತ ಪರಿಹಾರವೂ ಸಿಗುತ್ತಿದೆ. ಆರೋಗ್ಯ ಯೋಜನೆಯನ್ನು ಸಹ ಸರ್ಕಾರ ಜಾರಿಗೆ ತಂದಿದ್ದು, ಚಿಕಿತ್ಸಾ ವೆಚ್ಚಗಳ ದರ ಪರಿಷ್ಕರಣೆಗೆ ಸಮ್ಮತಿ ನೀಡುವ ಭರವಸೆ ಇದೆ. ಜೊತೆಗೆ ಆರೋಗ್ಯ ಯೋಜನೆಯಲ್ಲಿ ನೌಕರರ ಅವಲಂಬಿತರ ಹೆಸರು ಸೇರ್ಪಡೆ ಕಾರ್ಯವೂ ಪ್ರಗತಿಯಲ್ಲಿದೆ ಎಂದು ಮಾಹಿತಿ ನೀಡಿದರು.

ಮಾಹಿತಿ ಹಕ್ಕು ಕಾಯ್ದೆ ಪರಿಣಾಮಕಾರಿಗೆ ಆಗ್ರಹ

• **ಬೆಂಗಳೂರು:** ಮಾಹಿತಿ ಹಕ್ಕು ಕಾಯ್ದೆ -2005ರ ಪರಿಣಾಮಕಾರಿ ಅನುಷ್ಠಾನಕ್ಕಾಗಿರುವ ಕರ್ನಾಟಕ ಮಾಹಿತಿ ಆಯೋಗದಲ್ಲಿ ತಕ್ಷಣವೇ ಆಡಳಿತಾತ್ಮಕ ಹಾಗೂ ತಾಂತ್ರಿಕ ಸುಧಾರಣೆ ತರಬೇಕೆಂದು ಒತ್ತಾಯಿಸಿ ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಪದಾಧಿಕಾರಿಗಳು ಮುಖ್ಯ ಮಾಹಿತಿ ಆಯುಕ್ತರಾದ ಸತ್ಯವತಿ ಹಾಗೂ ಇನ್ನಿತರ ನಾಲ್ವರು ಮಾಹಿತಿ ಆಯುಕ್ತರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.

ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಬಿ.ಎಚ್.ವೀರೇಶ್ ನೇತೃತ್ವದಲ್ಲಿ ಆಯೋಗಕ್ಕೆ ಸಲ್ಲಿಸಲಾದ ಮನವಿಯಲ್ಲಿ 25 ಅಂಶಗಳನ್ನು ಉಲ್ಲೇಖಿಸಲಾಗಿದೆ. ರಾಜ್ಯದ ಮೂಲೆ ಮೂಲೆಗಳಿಂದ ಆಯೋಗಕ್ಕೆ ಬರುವ ನಾಗರಿಕರನ್ನು ಕೆಲವು ಪೀಠಗಳಲ್ಲಿ ಏಕವಚನದಲ್ಲಿ ಸಂಬೋಧಿಸುವುದು, ಮೊಬೈಲ್ ಕಿತ್ತುಕೊಳ್ಳುವ ಬೆದರಿಕೆ ಹಾಕುವುದು ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಪರವಾಗಿ ಪಕ್ಷಪಾತ ಧೋರಣೆ ತೋರುತ್ತಿರುವುದು ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ಷೇಪಣೆಗೆ ಕಾರಣವಾಗಿದೆ. ಈ ನಿಟ್ಟಿನಲ್ಲಿ ಆಯೋಗದ ಸಿಬ್ಬಂದಿಗೆ ಮಾನವ ಹಕ್ಕು ಮತ್ತು ಸಾರ್ವಜನಿಕ ಸೇವಾ ನಡವಳಿಕೆ ತರಬೇತಿ ನೀಡಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ತಂತ್ರಜ್ಞಾನದ ಅಳವಡಿಕೆ ಹಾಗೂ ಸಿಸಿಟಿವಿ ಕಡ್ಡಾಯ: ವಿಚಾರಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಉಚ್ಚ ನ್ಯಾಯಾಲಯದ ಮಾದರಿಯಲ್ಲಿ ಆಯೋಗದ ಎಲ್ಲಾ ವಿಚಾರಣಾ ಕೊಠಡಿಗಳಲ್ಲಿ ಕಡ್ಡಾಯವಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು.

ಕನಿಷ್ಠ 6 ತಿಂಗಳ ವಿಡಿಯೋ ಸಂಗ್ರಹವನ್ನು ಕಾಯ್ದಿರಿಸಬೇಕು. ಆನ್‌ಲೈನ್ ಮೂಲಕ ದ್ವಿತೀಯ ಮೇಲ್ಮನವಿ ಸಲ್ಲಿಸುವ ವ್ಯವಸ್ಥೆ, ಇ-ಮೇಲ್ ಹಾಗೂ ಎಸ್‌ಎಂಎಸ್ ಮೂಲಕ ಪ್ರಕರಣಗಳ ಸ್ಥಿತಿಗತಿ ತಿಳಿಸುವ ತಂತ್ರಜ್ಞಾನ ತಕ್ಷಣವೇ ಜಾರಿಗೆ ಬರಬೇಕಿದೆ. ಅಲ್ಲದೆ, ತಾಂತ್ರಿಕ ದೋಷಗಳ ನೆಪವೊಡ್ಡಿ ಅರ್ಜಿದಾರರ ಅನುಪಸ್ಥಿತಿಯಲ್ಲಿ ಏಕಪಕ್ಷೀಯ ಆದೇಶಗಳನ್ನು ಹೊರಡಿಸಬಾರದು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಮಾರ್ನಿಂಗ್ ಶೋ



ಪ್ರೀಮಿಯರ್ ಶೋ ಏರ್ಪಡಿಸಿದ್ದೇವೆ ಅದಕ್ಕೆಂದೇ ಒಂದು ಆಪ್ ರೆಡಿ ಮಾಡಿದ್ದೇವೆ, ಇದರ ಜತೆ ಲಕ್ಕಿ ಡಿಪ್ ಮೂಲಕ ಗೆದ್ದು ಒಬ್ಬ ಆಟೋ ಚಾಲಕನಿಗೆ ಆಟೋ ಬಹುಮಾನ ಇರುತ್ತೆ ಎಂದು ವಿವರಿಸಿದರು. ನಾಯಕಿ ರೇಷ್ಮಾ ಮಾತನಾಡಿ ತುಂಬಾ ಭರವಸೆಗಳನ್ನು ಇಟ್ಟುಕೊಂಡು ಮಾಡಿರುವ ಚಿತ್ರವಿದು. ಕಂಡ ಕನಸನ್ನು ನನಸು ಮಾಡಿಕೊಳ್ಳಲು ಹೋಗಿ ಸಾಕಷ್ಟು ಅಡೆ ತಡೆಗಳನ್ನು ದಾಟಿ ನಾಯಕ ಹೇಗೆ ಸಾಧನೆ ಮಾಡುತ್ತಾನೆ ಎಂದು ಈ ಚಿತ್ರದಲ್ಲಿ ಹೇಳಲಾಗಿದೆ, ಸ್ನೇಹ ಎಂಬ ಮಧ್ಯಮ ವರ್ಗದ ಹುಡುಗಿಯ ಪಾತ್ರ ನನ್ನದು. ಆಕೆ ಒಬ್ಬ ಆಟೋ ಡ್ರೈವರನ್ನು ಇಷ್ಟಪಟ್ಟಾಗ ಏನಾಗುತ್ತೆ ಅನ್ನೋದನ್ನು ನನ್ನ ಪಾತ್ರದ ಮೂಲಕ ತೋರಿಸಿದ್ದಾರೆ ಎಂದು ಹೇಳಿದರು. ಮತ್ತೊಬ್ಬ ನಾಯಕಿ ಶಿಲ್ಪಾ ಮಾತನಾಡಿ ನನ್ನದು ಪುಟ್ಟ ಪಾತ್ರವಾದರೂ ಕಥೆಯಲ್ಲಿ ತುಂಬಾ ಪ್ರಾಮುಖ್ಯತೆ ಹೊಂದಿದೆ ಎಂದರು. ಮೂಲತಃ ಸಂಕಲನಕಾರರಾದ ನಿರ್ಮಾಪಕ ವೇದಿಕ್ ವೀರಾ ಮಾತನಾಡಿ ನಾವೆಲ್ಲ ಸೇರಿ ಈ ಸಿನಿಮಾ ಮಾಡಿದ್ದೇವೆ. ಸಿನಿಮಾ ದೊಡ್ಡದಿದೆ, ಒಂದೊಳ್ಳೇ ಕಂಟೆಂಟ್ ಜನರಿಗೆ ರೀಚ್ ಮಾಡಬೇಕು ಅನ್ನೋದೇ ನಮ್ಮ ಆಸೆ. ಜೂನ್ 19ಕ್ಕೆ ನಮ್ಮ ಚಿತ್ರ ರಿಲೀಸಾಗುತ್ತಿದೆ ಎಂದು ಹೇಳಿದರು. ಛಾಯಾಗ್ರಾಹಕ ಆನಂದ್ ಇಳಯರಾಜಾ ಮಾತನಾಡಿ ಗುಜರಾತ್‌ನ ಬೀಚ್ ನಂತೆ ಕಾಣೋ ಸಾಲ್ಟ್ ಇರುವ ಕಚ್‌ಗುಜ್‌ನಲ್ಲಿ ಈ ಹಾಡನ್ನು ಚಿತ್ರೀಕರಿಸಲಾಗಿದೆ ಎಂದರು. ಶ್ರೀಧರ್ ಕಶ್ಯಪ್ ಹಾಗೂ ಅಲೆಕ್ಸ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ. ದೊಡ್ಡಣ್ಣ ಚಿತ್ರದ ಉಳಿದ ಪಾತ್ರಗಳಲ್ಲಿ ಹುಲಿ ಕಾರ್ತೀಕ್, ಬಲ ರಾಜವಾಡಿ, ಮಂಡ್ಯ ಸಿದ್ದು ನಟಿಸಿದ್ದಾರೆ.



ದೊಡ್ಮನ್ಸ ಡ್ಯುಯೆಟ್ ಸಾಂಗ್ ಬಿಡುಗಡೆ

ದೊಡ್ಡಣ್ಣ ಚಿತ್ರದ ಮೂಲಕ ಶರತ್ ಕೃಷ್ಣ ಮೊದಲಬಾರಿಗೆ ನಿರ್ದೇಶನದ ಜೊತೆಗೆ ಚಿತ್ರದ ನಾಯಕನಾಗಿಯೂ ಅಭಿನಯಿಸಿದ್ದಾರೆ. ರೇಷ್ಮಾ ಹಾಗೂ ಶಿಲ್ಪ ಈ ಚಿತ್ರದ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. ವೇದಿಕ್ ಕಾಸ್ಮೋಸ್ ಅಡಿ ವೇದಿಕ್ ವೀರಾ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಇತ್ತೀಚೆಗೆ ಈ ಚಿತ್ರದ 'ಹಾಜರಿ ಹಾಕು ಈಗಲೇ' ಎಂಬ ಡ್ಯುಯೆಟ್ ಸಾಂಗ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಹಳ್ಳಿಯ ಹುಡುಗನೊಬ್ಬ ಕಲಾವಿದನಾಗಬೇಕೆಂಬ ಕನಸು ಹೊತ್ತು ಬೆಂಗಳೂರಿಗೆ ಬಂದು ಏನೇನೆಲ್ಲ ಸಂದರ್ಭಗಳನ್ನು ಎದುರಿಸುತ್ತಾನೆ ಎನ್ನುವುದೇ ದೊಡ್ಡಣ್ಣ ಚಿತ್ರದ ತಿರುಳು.

ವೇದಿಕೆಯಲ್ಲಿ ನಾಯಕ ಕಮ್ ನಿರ್ದೇಶಕ ಶರತ್ ಕೃಷ್ಣ ಮಾತನಾಡಿ ಈ ಟೈಟಲ್ ಅಡಿ ವಿಷ್ಣು ಅವರಿಗಾಗಿ ಎಸ್ .ನಾರಾಯಣ್ ಅವರು ನಿರ್ದೇಶನ ಮಾಡಬೇಕಿತ್ತು. ಅಂಥಾ ಟೈಟಲ್ ನನಗೆ ಸಿಕ್ಕಿದೆ. ಒಂದು ಕನಸಿಂದ ಪ್ರಾರಂಭವಾದ ಸಿನಿಮಾ. ಅದಕ್ಕೆ ಬೆನ್ನೆಲುಬಾಗಿ ನಿಂತಿದ್ದು ನಿರ್ಮಾಪಕರಾದ ವೇದಿಕ್ ವೀರಾ. ಕನಸುಗಳನ್ನು ಕಟ್ಟಿಕೊಂಡು ಬೆಂಗಳೂರಿಗೆ ಬಂದ ಹುಡುಗ, ತಮ್ಮ ಕನಸುಗಳನ್ನು ಈಡೇರಿಸಿಕೊಳ್ಳಲಾಗದೆ ಆಟೋ ಓಡಿಸಿಕೊಂಡಿರುತ್ತಾನೆ. ಮುಂದೆ ಬೇರೆಯವರ ಕನಸನ್ನು ನನಸಾಗಿಸಲು ಪ್ರಯತ್ನಿಸುತ್ತಾನೆ. ಆ ಮೂಲಕ ಆತ ಹೇಗೆ ದೊಡ್ಡಣ್ಣ ಆಗ್ತಾನೆ. ದುಡ್ಡಿರೋರೆಲ್ಲ ದೊಡ್ಡಣ್ಣರಲ್ಲ ಅಂತ ಹೇಳೋ ಚಿತ್ರವಿದು, ಆಟೋ ಚಾಲಕರಿಗಾಗಿ ಹುಬ್ಬಳ್ಳಿ, ದಾವಣಗೆರೆ, ಶಿವಮೊಗ್ಗ ಸೇರಿದಂತೆ ರಾಜ್ಯದ 8 ಜಿಲ್ಲೆಗಳಲ್ಲಿ ದೊಡ್ಡಣ್ಣ ಚಿತ್ರದ



ಉಮೇಶ್ ಕೆ.ಕೃಪ ನಿರ್ದೇಶನದ ನೂತನ ಚಿತ್ರಕ್ಕೆ ಚಾಲನೆ

ಇದೊಂದು ನಾಡಿನ ಕಥೆಯಾಗಿದ್ದು, ಈ ಚಿತ್ರದಲ್ಲಿ ಕಥೆಯೇ ನಾಯಕ. ಪ್ರೀತಿ, ಪ್ರೇಮ, ಕಾಮಿಡಿ, ಸೆಂಟಿಮೆಂಟ್ ಹೀಗೆ ನೋಡುಗರಿಗೆ ಬೇಕಾದ ಎಲ್ಲಾ ರೀತಿಯ ಅಂಶಗಳಿರುವ ಮನರಂಜನೆಯೇ ಪ್ರಧಾನವಾದ ಕುಟುಂಬ ಸಮೇತ ನೋಡಬಹುದಾದ ಕಂಟೆಂಟ್ ಈ ಚಿತ್ರದಲ್ಲಿರುತ್ತದೆ.



ಎರಡು ವರ್ಷಗಳ ಹಿಂದೆ ತೆರೆಕಂಡ ಟಗರು ಪಲ್ಯ ಚಿತ್ರದ ನಿರ್ದೇಶಕ ಉಮೇಶ್ ಕೆ. ಕೃಪ ಇದೀಗ ತಮ್ಮ ಎರಡನೇ ಚಿತ್ರಕ್ಕೆ ಕೈ ಹಾಕಿದ್ದಾರೆ. ಇನ್ನೂ ಹೆಸರಿಡದ ಆ ಚಿತ್ರದ ಮುಹೂರ್ತ ಸಮಾರಂಭ ಶುಕ್ರವಾರ ಬೆಳಗ್ಗೆ ಶ್ರೀ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ನೆರವೇರಿತು. ಪ್ರಸ್ತುತ ಉಮೇಶ್ ಕೆ. ಕೃಪ ಅವರು ನಿರ್ದೇಶಿಸುತ್ತಿರುವ ಈ ಚಿತ್ರವನ್ನು ಆಕಾಂಕ್ಷ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಾಗೇಶ್ ವಾಸ್ಟರ್ ಅವರು ನಿರ್ಮಾಣ ಮಾಡುತ್ತಿದ್ದಾರೆ. ಸದ್ಯ ಪ್ರೊಡಕ್ಷನ್ ನಂ 2 ಹೆಸರಲ್ಲಿ ಈ ಚಿತ್ರ ಮುಹೂರ್ತ ಆಚರಿಸಿಕೊಂಡಿದೆ. ಪುಟ್ಟಕ್ಕನ ಮಕ್ಕಳು ಧಾರಾವಾಹಿಯಲ್ಲಿ ಕಂಠಿ ಪಾತ್ರದ ಮೂಲಕ ಗುರುತಿಸಿಕೊಂಡಿರುವ ನಟ ಧನುಷ್ ಹಾಗೂ ಧಾರಾವಾಹಿ ಹಾಗೂ ಚಲನಚಿತ್ರಗಳಲ್ಲಿ ನಟಿಸಿರುವ ಮನಸ್ವಿ ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ. ಮುಹೂರ್ತದ ನಂತರ ಮಾತನಾಡಿದ ನಿರ್ದೇಶಕ ಉಮೇಶ್ ಕೆ.ಕೃಪ ಇದು ನನ್ನ ನಿರ್ದೇಶನದ ಎರಡನೇ ಚಿತ್ರ.



ನನ್ನ ಮೊದಲ ಚಿತ್ರ ಟಗರು ಪಲ್ಯಕ್ಕೆ ಉತ್ತಮ ಪ್ರತಿಕ್ರಿಯೆ ಸಿಕ್ಕಿತ್ತು, ಇದೀಗ ನನ್ನ ಎರಡನೇ ನಿರ್ದೇಶನದ ಚಿತ್ರಕ್ಕೆ ಚಾಲನೆ ದೊರಕಿದೆ. ನಾನೇ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಗಳನ್ನು ಬರೆದಿದ್ದೇನೆ. ಈ ನೂತನ ಚಿತ್ರಕ್ಕೆ ನಾಗೇಶ್ ವಾಸ್ಟರ್ ಅವರು ಬಂಡವಾಳ ಹೂಡುತ್ತಿದ್ದಾರೆ. ಇದೊಂದು ನಾಡಿನ ಕಥೆಯಾಗಿದ್ದು, ಈ ಚಿತ್ರದಲ್ಲಿ ಕಥೆಯೇ ನಾಯಕ. ಪ್ರೀತಿ, ಪ್ರೇಮ, ಕಾಮಿಡಿ, ಸೆಂಟಿಮೆಂಟ್ ಹೀಗೆ ನೋಡುಗರಿಗೆ ಬೇಕಾದ ಎಲ್ಲಾ ರೀತಿಯ ಅಂಶಗಳಿರುವ ಮನರಂಜನೆಯೇ ಪ್ರಧಾನವಾದ ಕುಟುಂಬ ಸಮೇತ ನೋಡಬಹುದಾದ ಕಂಟೆಂಟ್ ಈ ಚಿತ್ರದಲ್ಲಿರುತ್ತದೆ. ನನ್ನ ಹಿಂದಿನ ಚಿತ್ರದಂತೆ ಈ ಚಿತ್ರದಲ್ಲೂ ಸಹ ಅನುಭವಿ ಕಲಾವಿದರ ದೊಡ್ಡ ತಾರಾಬಳಗವೇ ಇರುತ್ತದೆ. ಉಳಿದ ಕಲಾವಿದರ ಆಯ್ಕೆಪ್ರಕ್ರಿಯೆ ನಡೆಯುತ್ತಿದೆ. ಇನ್ನು, ಈ ಚಿತ್ರದಲ್ಲಿ ಮಳೆಯದೇ ಮುಖ್ಯ ಪಾತ್ರ. ಹಾಗಾಗಿ ಚಿತ್ರೀಕರಣ ಶುರು ಮಾಡಲು ಮಳೆಗಾಲಕ್ಕಾಗಿ ಕಾಯುತ್ತಿದ್ದೆವು. ಮುಂದಿನ ವಾರದಿಂದ ಚಿತ್ರೀಕರಣ ಆರಂಭವಾಗಲಿದೆ. ಮಲೆನಾಡಿನ ತೀರ್ಥಹಳ್ಳಿ, ಆಗುಂಬೆ, ಕಾರ್ಕಳ, ಚಿಕ್ಕಮಗಳೂರು ಮುಂತಾದ ಲೊಕೇಶನ್‌ಗಳಲ್ಲಿ ಮೊದಲ ಹಂತದ ಚಿತ್ರೀಕರಣ ನಡೆಯಲಿದೆ ಎಂದು ಹೇಳಿದರು, ಈ ಚಿತ್ರಕ್ಕೆ ಎಸ್.ಕೆ.ರಾವ್ ಅವರ ಛಾಯಾಗ್ರಹಣ, ಪಳನಿ ಡಿ. ಸೇನಾಪತಿ ಅವರ ಸಂಗೀತ ನಿರ್ದೇಶನ, ಮಧು ತುಂಬಕೆರೆ ಅವರ ಸಂಕಲನ, ಅರ್ಜುನ್‌ರಾಜ್ ಅವರ ಸಾಹಸ ನಿರ್ದೇಶನ ಹಾಗೂ ಎ. ಸತೀಶ್ ಅವರ ಕಲಾನಿರ್ದೇಶನವಿದೆ. ಈ ನೂತನ ಚಿತ್ರಕ್ಕೆ ಎಚ್. ಜಗದೀಶ್‌ರಾವ್ ಅವರು ಕಾರ್ಯಕಾರಿ ನಿರ್ಮಾಪಕರಾಗಿ ಕೈಜೋಡಿಸಿದ್ದಾರೆ.

ಫೇಕ್ ಫೋಟೊ ರುಕ್ಮಿಣಿ ವಸಂತ್ ಎಚ್ಚರಿಕೆ



ಕಳೆದ ಕೆಲ ದಿನಗಳಿಂದ ನಟಿ ರುಕ್ಮಿಣಿ ವಸಂತ್ ಬಿಕಿನಿ ಧರಿಸಿರುವ ಫೋಟೋಗಳು ಹಾಗೂ ವಿಡಿಯೋಗಳು ಎಲ್ಲಾ ಕಡೆ ವೈರಲ್ ಆಗಿದ್ದವು. ಈ ಫೋಟೊಗಳ ಬಗ್ಗೆ ಇದೀಗ ಖುದ್ದು ರುಕ್ಮಿಣಿ ವಸಂತ್ ಅವರೇ ಕ್ಲಾರಿಟಿ ಕೊಟ್ಟಿದ್ದಾರೆ. ಜೊತೆಗೆ ಈ ಕೃತ್ಯದಲ್ಲಿ ಭಾಗಿಯಾದವರಿಗೆ ಎಚ್ಚರಿಕೆಯನ್ನೂ ಸಹ ನೀಡಿದ್ದಾರೆ.

ಸದ್ಯ ಕನ್ನಡ, ತೆಲುಗು, ತಮಿಳು ಸೇರಿ ಹಲವು ಭಾಷೆಯ ಸಿನಿಮಾಗಳಲ್ಲಿ ರುಕ್ಮಿಣಿ ವಸಂತ್ ಬ್ಯುಸಿಯಾಗಿದ್ದಾರೆ. ಇವರ ಕೈಯಲ್ಲೀಗ ಬಿಗ್ ಬಜೆಟ್ ಸಿನಿಮಾಗಳಿವೆ. ಚಿತ್ರೀಕರಣದಲ್ಲಿ ನಿರತರಾಗಿರುವ ರುಕ್ಮಿಣಿ ವಸಂತ್ ಅವರಿಗೆ ಶಾಕ್ ಒಂದು ಎದುರಾಗಿತ್ತು. ಕಿಡಿಗೇಡಿಗಳು ಎಐ ತಂತ್ರಜ್ಞಾನ ಬಳಸಿ ರುಕ್ಮಿಣಿ ವಸಂತ್ ಅವರ ಬಿಕಿನಿ ಫೋಟೊಗಳನ್ನು ಸೃಷ್ಟಿಸಿ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರು.

ಈ ಫೋಟೊಗಳು ಸೋಶಿಯಲ್ ಮೀಡಿಯಾದಲ್ಲಿ ದೊಡ್ಡ ಸಂಚಲನವನ್ನೇ ಸೃಷ್ಟಿಸಿದ್ದವು. ಕೆಲವರಿಗೆ ಇದು ಎಐ ತಂತ್ರಜ್ಞಾನ ಬಳಸಿ ಮಾಡಿದ ವಿಡಿಯೋ ಹಾಗೂ ಫೋಟೊ ಅನ್ನೋದು ಅರಿವಿಗೆ ಬಂದಿತ್ತು. ಅದ್ಯಾವಾಗ ಫೋಟೊಗಳು ಸೋಶಿಯಲ್ ಮೀಡಿಯಾಗಳಲ್ಲಿ ವೈರಲ್ ಆದವೋ ಕೂಡಲೇ ರುಕ್ಮಿಣಿ ವಸಂತ್ ತನ್ನ ಎಕ್ಸ್ ಖಾತೆಯಲ್ಲಿ ಕ್ಲಾರಿಟಿಯ ಜೊತೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

ಎಐ ತಂತ್ರಜ್ಞಾನಕ್ಕೆ ನಟಿಯರು ಸಿಕ್ಕಿಕೊಳ್ಳುತ್ತಿರುವುದು ರುಕ್ಮಿಣಿ ವಸಂತ್ ಮೊದಲೇನಲ್ಲ, ಈ ಹಿಂದೆ ರಶ್ಮಿಕಾ ಮಂದಣ್ಣ ಕೂಡ ಇಂತಹದ್ದೇ ಪರಿಸ್ಥಿತಿಯನ್ನು ಎದುರಿಸಿದ್ದರು. ಆಗ ಇಡೀ ಭಾರತೀಯ ಚಿತ್ರರಂಗ ರಶ್ಮಿಕಾ ಮಂದಣ್ಣ ಬೆಂಬಲಕ್ಕೆ ನಿಂತಿದ್ದರು.

ಇದು ತನ್ನ ಅವರಿಗೆ ಬರುತ್ತಿದ್ದಂತೆ ರುಕ್ಮಿಣಿ ವಸಂತ್ ಅವರು ಎಕ್ಸ್ ಖಾತೆಯಲ್ಲಿ ಎಚ್ಚರಿಕೆಯ ಪೋಸ್ಟ್ ಒಂದನ್ನು ಶೇರ್ ಮಾಡಿಕೊಂಡಿದ್ದಾರೆ. ನನ್ನದು ಎಂದು ಹೇಳಲಾಗುತ್ತಿರುವ ಕೆಲವು ಎಐ ಜನರೇಟೆಡ್ ನಕಲಿ ಫೋಟೋಗಳು ಅಂತರ್ಜಾಲದಲ್ಲಿ ಹರಿದಾಡುತ್ತಿರುವುದು ನನ್ನ ಮತ್ತು ನನ್ನತಂಡದ ಗಮನಕ್ಕೆ ಬಂದಿದೆ. ಈ ಫೋಟೊಗಳು ಸಂಪೂರ್ಣವಾಗಿ ನಕಲಿ ಹಾಗೂ ಸೃಷ್ಟಿ ಮಾಡಿದ್ದು. ಈ ಫೋಟೊಗಳು ರಿಯಲ್ ಅಲ್ಲ ಎಂದು ನಾನು ನಿಮಗೆ ಸ್ಪಷ್ಟಪಡಿಸುತ್ತಿದ್ದೇನೆ. ಇಂತಹ ಫೋಟೊಗಳನ್ನು ಸೃಷ್ಟಿಸುವುದು ಹಾಗೂ ಅದನ್ನು ಹಂಚಿಕೊಳ್ಳುವುದು ಬೇಜವಾಬ್ದಾರಿ ಕೆಲಸ ಹಾಗೂ ವೈಯಕ್ತಿಕ ಗೌಪ್ಯತೆಯ ಗಂಭೀರ ಉಲ್ಲಂಘನೆ ಆಗಿದೆ ಎಂದು ರುಕ್ಮಿಣಿ ವಸಂತ್ ಹೇಳಿಕೊಂಡಿದ್ದಾರೆ.

ಹಾಗೇ ನಾವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು, ಇಂತಹ ಫೇಕ್ ಫೋಟೋಗಳನ್ನು ಸೃಷ್ಟಿಸಿದವರು ಹಾಗೂ ಅದನ್ನು ಹರಡುತ್ತಿರುವವರ ವಿರುದ್ಧ ಅಗತ್ಯ ಕಾನೂನು ಕ್ರಮ ಕೈಗೊಳ್ಳುತ್ತೇವೆ. ಹಾಗೇ ಸೈಬರ್ ಕ್ರೈಮ್‌ಗೆ ದೂರನ್ನು ನೀಡುತ್ತೇವೆ. ಜನರು ಇಂತಹ ನಕಲಿ ಫೋಟೊಗಳನ್ನು ಹಂಚಿಕೊಳ್ಳಬಾರದು. ಹಾಗೇ ಕಂಟೆಂಟ್‌ಗಳ ಜೊತೆ ತಮ್ಮನ್ನು ತೊಡಗಿಸಿಕೊಳ್ಳಬಾರದು ಎಂದು ಎಲ್ಲರಲ್ಲೂ ವಿನಂತಿಸಿಕೊಳ್ಳುತ್ತೇನೆ. ಎಂದು ರುಕ್ಮಿಣಿ ವಸಂತ್ ಎಚ್ಚರಿಕೆ ನೀಡಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26